
ಕಲ್ಯಾಣ ಕಿರಣ

ಮೇ - 2006

ಜೂನ್-2006

ಬೆಲೆ : ರೂ. 6/-





ದಿ.11-4-2006ರಂದು ಧಾರವಾಡದ ಡಾ॥ಮಲ್ಲಿಕಾರ್ಜುನ ಮನ್ಸೂರ್ ಪುರಭವನದಲ್ಲಿ ವಿಚಾರ ಸಂಕಿರಣ. ಪ್ರಸ್ತಾವನೆ ಮಾಡುತ್ತಿರುವ ಪೂಜ್ಯ ಮಾತಾಜಿ



ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮಾನ್ಯತೆ ಕುರಿತು ವಿಚಾರ ಸಂಕಿರಣ ಉದ್ಘಾಟನೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮಹಾಪೌರರಾದ ಶರಣ ಹನುಮಂತಪ್ಪ ಬೆಟಗೇರಿ ಇವರಿಂದ.

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-36 ಸಂಚಿಕೆ-1
ಬಸವ ಶಕೆ-873 ಮೇ-ಜೂನ್-2006
ಆಜೀವ ಸದಸ್ಯತ್ವ 600 ರೂ. ವಾರ್ಷಿಕ ಚಂದಾ 60/- ರೂ.

ಗುರು ಸ್ಮರಣೆ







ಈ ಬಗೆಯ ನಿಲುವ ಇನ್ನಾವ ಜಂಗಮನೊಳು ಕಾಣೆ
ಬಸವ ಕರುಣೆಯ ಕಿರಣ ಗುರು ಲಿಂಗಾನಂದರಲಲ್ಲದೆ ॥ಪ॥

ಹರಿವ ಗಂಗೆಯ ತೆರದಿ ಜಗದ ಬಯಲಲಿ ಚರಿಸಿ
ವರ ಭಕ್ತಿ-ಜ್ಞಾನಗಳ ಬೆಳೆ ತೆಗೆದ ಗುರುವೆ।
ಬಸವ ಧರ್ಮದ ಪ್ರಭೆಯ ಪುನಃ ಬೆಳಗಿದ ಯೋಗಿ
ಬಸವ ಸಾಮ್ರಾಜ್ಯವನ್ನು ಕಟ್ಟಿದ ಮಹತ್ಯಾಗಿ ॥1॥

ಮನುಗೂಳಿಯಲಿ ಜನಿಸಿ ವಿಜಯಪುರದೊಳು ಓದಿ
ಬೆಳಗಾವಿಯ ನೆಲದಿ ಪದವಿಯಂ ಪಡೆದು।
ಧಾರವಾಡದಿ ಜ್ಞಾನ ಸಂಪದವ ಸಂಚಯಿಸಿ
ಚರಿಪ ಮಾರುತವಾಗಿ ಸುಳಿದ ಜ್ಞಾನದಾಸೋಹಿ ॥2॥

ಮಲ್ಲಪ್ಪ ಕಲ್ಲಮ್ಮ ದಂಪತಿಯ ಶಿಶುವಾಗಿ
ಚೆಲುವಿನಾ ಕಾಯವನು ಧರಿಸಿದ ಶಿವದೇಹಿ।
ಸಂಗಮೇಶನೆಂಬ ದಿವ್ಯ ನಾಮದಿ ಬೆಳೆದು
ಆದೆ ಲಿಂಗಾನಂದ ಬಸವ ಕರುಣೆಯ ಪಡೆದು ॥3॥

ಮಹಿಳಾಗುರು ಪೀಠವಂ ಸ್ಥಾಪಿಸಿದ ಮಹಾಗುರು
ಮಹಮನೆಯ ಆಸರೆಯ ನೀಡಿದ ಕಲ್ಪತರು।
ಕೂಡಲ ಸಂಗಮದ ಬಸವ ಧರ್ಮದ ಪೀಠ
ಏರಿ ಜಗದ್ಗುರುವಾಗಿ ಬೆಳಗಿದ ಸುವಿರಾಗಿ ॥4॥

ರಾಷ್ಟ್ರ ಪ್ರೇಮದ ಕಣಿಯೆ ಸತ್ಯನಿಷ್ಠೆಯ ಕಲಿಯೆ
ರಾಷ್ಟ್ರೀಯ ಬಸವ ದಳ ಸ್ಥಾಪಿಸಿದ ತತ್ತ್ವವಾದಿ।
ಪ್ರವಚನದ ಪಟುವಾಗಿ ಜ್ಞಾನ ನೀಡಿದ ಮೂರ್ತಿ
ವಚನ ವಾಙ್ಮಯ ಕೀರ್ತಿ ಪಸರಿಸಿದ ಗುರು ಜ್ಯೋತಿ ॥5॥

ಚೈತನ್ಯ ಚಿಲುಮೆಯೆ ಸತ್ಯ ಚಿಂತನ ನಿಧಿಯೆ
ಜಾತಿವಾದವ ಜರಿದ ವಿಶ್ವಪ್ರೇಮದ ಸುಧೆಯೆ।
ಶರಣ ಧರ್ಮದ ದಿವ್ಯ ವರರತ್ನ ತಾವು
ಎಂದು ಬಸವಾತ್ಮಜೆಯು ನಿತ್ಯ ನೆನೆಯುವೆ ನಾನು ॥6॥

-ಮಾತಾಜಿ

★ ಕಲ್ಯಾಣ ಕಿರಣ ★

ಸಂಪುಟ 36 ಬಸವ ಶಕೆ 873 ಆಜೀವ ಸದಸ್ಯತ್ವ 600ರೂ
ಸಂಚಿಕೆ 1 ಮೇ- ಜೂನ್- 200 ವಾರ್ಷಿಕ ಚಂದಾ 60/-ರೂ.

ಕಿರಣ ಗನ್ನಡಿ



ಶುಕ್ರ(ಮಾತೃ)ವಾರ 2006,
ಜೂನ್ 30ರಂದು ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ 12ನೆಯ
ಲಿಂಗೈಕ್ಯ ಸಂಸ್ಮರಣೆಯನ್ನು ಆಚರಿಸಲಾಗುತ್ತಿದೆ.

KALYANA KIRANA-Reg No.19988/70. Monthly Magazine Edited by Pujya Mate Kasturidevi and Published by Pujya Allama Prabhu Swamiji, on behalf of Vishwakalyana Mission Charitable Trust, Basava Mantapa, at Padmashri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ವಚನ ಕಿರಣ

ಪ್ರಿಯಾಂಕಾ.ಬಿ.ಬದಾಮಿ, ಹುಬ್ಬಳ್ಳಿ

1. ಬಸವನೆಂಬ ಬಳ್ಳಿ
ಹಬ್ಬುತಿದೆ ಮಿಂಚನು ಚೆಲ್ಲಿ
ಕೂಡಲ ಸಂಗಮದ ಶರಣಮೇಳದಲ್ಲಿ
ಬಸವ ಕಲ್ಯಾಣದ ಕಲ್ಯಾಣ ಪರ್ವದಲ್ಲಿ
ಈಗಂತೂ ಎಲ್ಲಿ ನೋಡಿದಡಲ್ಲಿ
ಬಾ ಭಕ್ತ ನೀ ಬೇಗನೆ ಇಲ್ಲಿ

2. ಅಪ್ಪ ಬಸವಣ್ಣನವರ ಪವಾಡ
ಹೇಗೆ ನಡೆಯುತಿದೆ ನೋಡ
ಹೇಳತೀರದು ಅದರ ಸೊಗಡ
ನೀ ಅದ ನೋಡಿ ನೋಡಿ ಹಾಡ
ಹಾಡಿ ಹಾಡಿ ನಲಿದಾಡ
ಮರೆಯದೇ ಬೇಗ ಬಂದು ಸೇರು ಈ ಗೂಡ.

3. ಬಸವಾ ಬಸವಾ ಎನಲು
ಭಕ್ತಿ ತುಂಬುತಿದೆ ಕಣ ಕಣದಲೂ
ಬಸವನ ಮೂರ್ತಿಯೇ ತುಂಬಿದೆ ಕಣ್ಣಲೂ
ಬಸವನ ಪ್ರೀತಿಯೇ ತುಂಬಿದೆ ಮನದಲೂ
ಇದ್ಯಾವ ಪರಿಯೆಂದು ಹೋದರೆ ಹೇಳಲು
ಬರುತಿಲ್ಲ ಯಾವ ಮಾತಲ್ಲೂ.

4. ರಕ್ತಾ ಸಂಬಂಧದಿಂದ ನಿಮ್ಮ ಕರೆಯುವರಯ್ಯಾ
ಬಸವಣ್ಣ, ಬಸವಪ್ಪನೆಂದು
ಶಿಕ್ಷಾ ಸಂಬಂಧದಿಂದ ನಿಮ್ಮ ಕರೆಯುವರಯ್ಯಾ
ಬಸವ ಗುರುವೆಂದು,
ಮೋಕ್ಷ ಸಂಬಂಧದಿಂದ ನಿಮ್ಮ ಕರೆಯುವರಯ್ಯಾ
ಮುಕ್ತಿದಾಯಕ ಬಸವನೆಂದು
ಇಂತೀ ರಕ್ತ ಸಂಬಂಧಕ್ಕಿಂತ ಭಕ್ತಿ ಸಂಬಂಧವೇ ಮೇಲೆಂದು
ಈ ತ್ರಿವಿಧ ಸಂಬಂಧಗಳ ತಿಳಿಸಿದೆಯಾಗಿ
ನಿಮ್ಮನು ಎಲ್ಲರೂ ಕರೆಯುವರಯ್ಯಾ
ಲಿಂಗದೇವನ ಪ್ರಿಯ ಮಗನೆಂದು

5. ಶರಣರ ಸಂಗವದು ಸವಿದಂತೆ ಬೆಲ್ಲ
ಇದರ ಮಹತ್ವ ಯಾವ ಕಹಿಯು ಇಲ್ಲ
ಪ್ರಮಾಣಿಸಿ ನೋಡಿದಡೆ ಸಿಹಿಯೇ ಎಲ್ಲ
ಶರಣರ ನೆನೆಯದೇ ಜೀವನವಿಲ್ಲ
ಇದರ ಮಹತ್ವ ಬಲ್ಲವನೇ ಬಲ್ಲ
ಲಿಂಗದೇವ ಸುತ ಬಸವಣ್ಣನ ಕರುಣೆಯಿದೆಲ್ಲ

6. ಅಪ್ಪ ಬಸವಣ್ಣನವರ ನೆನೆನೆನೆದು
ಭಕ್ತಿ ರಸದಿಂದ ತುಂಬುತಿದೆ ಮನವಿದು
ಅಣ್ಣ ಚೆನ್ನಬಸವಣ್ಣನವರ ನೆನೆನೆನೆದು
ಜ್ಞಾನದ ಬುತ್ತಿಯ ಸವಿಯುತ್ತಿದೆ ಅರಿವಿದು
ಅಕ್ಕ ಮಹಾದೇವಿಯ ನೆನೆನೆನೆದು
ರೋಮಾಂಚನಗೊಳ್ಳುತಿದೆ ನರನಾಡಿಯಿದು
ಲಿಂಗದೇವ ಸುತ ಬಸವಣ್ಣನ ಕರುಣೆಯಿದು
ಈ ಋಣವ ನಾ ಹೇಗೆ ತೀರಿಸುವುದು?

ಲಿಂಗಾಯತ - ಸ್ವತಂತ್ರ ಧರ್ಮ

ನಮ್ಮ ಧರ್ಮ ಲಿಂಗಾಯತವಿದು ಸ್ವತಂತ್ರ
ವಚನ ಸಾಹಿತ್ಯವೇ ಈಗಿದಕೆ ಸೂತ್ರ ॥ಪ॥
ಸ್ವತಂತ್ರವೆಂದು ನಮಗೆ ಬೇಕಿದೆ ಮಾನ್ಯತೆ
ಕಾನೂನಾತ್ಮಕ ವಿಚಾರವೇ ಈಗಿದಕೆ ಆದ್ಯತೆ
ಇದನಿನ್ನೂ ವಿಸ್ತರಿಸಿ ಹೇಳಬೇಕೇ ನಿಮಗೆ ಮತ್ತೆ ಮತ್ತೆ
ಎಂಟು ಶತಮಾನದ ಬಳಿಕವೂ ಹೇಳಲು
ನಮಗಾಗುತ್ತಿದೆ ವ್ಯಥೆ

ಹುಡುಕಿದರೂ ಸಿಗದಂತಹ ರತ್ನ ನಮ್ಮಲ್ಲಿದೆ
ಇದೀಗ ಕುತಂತ್ರಿಗಳ ಕೈಯಲ್ಲಿ ಪರದಾಡುತಿದೆ
ಶರಣ.ಪರಂಪರೆಯ ಹಿರಿಮೆಯು ನಮಗಿದೆ
ನಮ್ಮ ಧರ್ಮ ಸ್ವತಂತ್ರವೆಂದು ಹೇಳಲು ನಮಗೂ ಹೆಮ್ಮೆಯಿದೆ

ಬಾ ಇಲ್ಲಿ, ಬಂದು ಪಾವನನಾಗು ಓ ಮಿತ್ರ
ಇಲ್ಲಿ ಮಾಡುವುದಿಲ್ಲ ಯಾರೂ ಕುತಂತ್ರ
ಓಂ ಶ್ರೀ ಗುರು ಬಸವ ಲಿಂಗಾಯ ನಮಃ ಮಂತ್ರ
ಜಪಿಸುತಿರೆ ಸಿಗುವುದು ನಿಮಗೆಲ್ಲದಕ್ಕೂ ಉತ್ತರ

ನಮ್ಮ ಧರ್ಮ ಲಿಂಗಾಯತವಿದು ಸ್ವತಂತ್ರ
ವಚನ ಸಾಹಿತ್ಯವೆ ಈಗಿದಕೆ ಸೂತ್ರ

ಶರಣೆ.ಪ್ರಿಯಾಂಕಾ.ಬಿ.ಬದಾಮಿ
ಹುಬ್ಬಳ್ಳಿ

ಬಸವ ಪುರಸ್ಕಾರದ ಘನತೆ ಹೆಚ್ಚಿಸಿದ

ಶರಣ.ಡಾ॥ಎಲ್.ಬಸವರಾಜು



ಕರ್ನಾಟಕ ರಾಜ್ಯ ಸರ್ಕಾರವು ಪ್ರೊ.ಡಾ॥ಎಲ್.ಬಸವರಾಜು ಅವರನ್ನು "ಬಸವ ಪುರಸ್ಕಾರ" ಪ್ರಶಸ್ತಿಗೆ ಆಯ್ಕೆ ಮಾಡಿ; 873 ನೆಯ ಬಸವ ಜಯಂತಿ, ದಿ.30-4-2006ರಂದು, ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಹೆಚ್.ಡಿ.ಕುಮಾರ ಸ್ವಾಮಿಯವರು ಪ್ರಶಸ್ತಿ ನೀಡಿ 87 ವರ್ಷಗಳ ಜ್ಞಾನ ವೃದ್ಧ, ವಯೋವೃದ್ಧ ಚೇತನವನ್ನು ಗೌರವಿಸಿದುದು ವಚನ ಸಾಹಿತ್ಯಾಸಕ್ತರಿಗೆಲ್ಲ ಅಪಾರ ಆನಂದವನ್ನು ತಂದಿದೆ. ಸಾಮಾನ್ಯವಾಗಿ ಪ್ರಶಸ್ತಿ, ಪುರಸ್ಕಾರ ಪಡೆಯಲು ಪರಸಾಹಸವನ್ನೇ ಮಾಡಬೇಕಾದ ವಾತಾವರಣ ನಮ್ಮ ದೇಶದಲ್ಲಿರುವಾಗ ತಮ್ಮ ಪಾಡಿಗೆ ತಾವು ಕರ್ತವ್ಯ ನಿಷ್ಠರಾಗಿ ಮೌನಯೋಗಿಯಾಗಿ ವಾಙ್ಮಯ ತಪಸ್ಸಿನಲ್ಲಿ ತಲ್ಲೀನರಾಗಿರುವ ಶರಣ.ಡಾ॥ಎಲ್.ಬಸವರಾಜು ಅವರನ್ನು ತಾನಾಗಿ "ಬಸವ ಪುರಸ್ಕಾರ" ಅರಸಿಕೊಂಡು ಬಂದುದು ಅತೀವ ಸಂತಸವನ್ನು ತಂದಿದೆ. ಮತ್ತು ಅರ್ಹ ವ್ಯಕ್ತಿಯನ್ನು ಆಶ್ರಯಿಸಿ ಪುರಸ್ಕಾರವು ತನ್ನ ಗೌರವವನ್ನು ಹೆಚ್ಚಿಸಿಕೊಂಡಿದೆ ಎಂದರೆ ಉತ್ಪ್ರೇಕ್ಷೆಯಾಗದು. ಶರಣ.ಡಾ॥ಎಲ್.ಬಸವರಾಜು ಅವರ ಸಾಧನೆ ಅಪ್ರತಿಮ. ಅವರೊಬ್ಬ ಪ್ರಾಮಾಣಿಕ ಸಂಶೋಧಕರು. ಸಂಶೋಧಕ ಸೂಕ್ಷ್ಮದರ್ಶಕ ಮತ್ತು ದೂರದರ್ಶಕ ಸಾಧನವನ್ನು ಕಣ್ಣಿಗೆ ತಗುಲಿಸಿಕೊಂಡು ಅಲೆಯುವ ಒಬ್ಬ ವಿಜ್ಞಾನಿಯಂತೆ. ಹಾಗೆ ಅಧ್ಯಯನ ಮಾಡುತ್ತ ಅಲೆಯುವಾಗ ತಾನು ಕಂಡುಕೊಳ್ಳುವ ಸತ್ಯವನ್ನು ಪ್ರಾಮಾಣಿಕವಾಗಿ ವರ್ಣಿಸುತ್ತ ಹೋಗಬೇಕೇ ವಿನಾ ತಾನು ಬಿಂಬಿಸಬೇಕೆನ್ನುವ ವಿಚಾರಗಳನ್ನು ಸಂಶೋಧನೆಯ ಹೆಸರನಲ್ಲಿ ಪ್ರತಿಪಾದಿಸುವ ಮನೋಭಾವ ಹೊಂದಿರಬಾರದು.

ಶರಣ.ಡಾ॥ಎಲ್.ಬಸವರಾಜು ಅವರು ಹಲವಾರು ಉತ್ಕೃಷ್ಟ ಗ್ರಂಥಗಳನ್ನು ಸಂಪಾದಿಸಿದ್ದು, ಪಾಠಾಂತರಗಳನ್ನು ಪ್ರಾಮಾಣಿಕವಾಗಿ ಕೊಡುತ್ತ ಹೋಗಿದ್ದಾರೆ. ಸರ್ವಜ್ಞನ ವಚನಗಳನ್ನು ವಿವಿಧ ಪಾಠಾಂತರಗಳ ಸಹಿತ ಪ್ರಕಾಶಿಸಿರುವುದೇ ಅಲ್ಲದೆ, ಸಾಹಿತ್ಯದಲ್ಲಿ ಈವರೆಗೂ ಸರ್ವಜ್ಞನ ವಚನ ಮುದ್ರಿಕೆ ಎಂದು ಪ್ರಚಾರಗೊಂಡಿರುವ 'ಸರ್ವಜ್ಞ' ಬದಲು 'ಪರಮಾರ್ಥ' ಎಂಬ ವಚನಾಂಕಿತವನ್ನು ಕೊಟ್ಟಿದ್ದಾರೆ. ಅಕ್ಕಮಹಾದೇವಿಯ ವಚನಗಳಿಗೂ ಲಭ್ಯವಿರುವ ಪಾಠಾಂತರಗಳನ್ನು ಮತ್ತು ಅನೇಕ ಹೊಸವಚನಗಳನ್ನು ಕೊಟ್ಟಿದ್ದಾರೆ. ಡಾ॥ಎಲ್.ಬಸವರಾಜು ಅವರು ಸಂಪಾದಿಸಿರುವ ಕೃತಿಗಳು ಅತ್ಯಂತ ಶುದ್ಧರೂಪದಲ್ಲಿ ದೊರೆಯುವುದರಿಂದ ಅಧ್ಯಯನಾಸಕ್ತರಿಗೆ ಉತ್ತಮ ಆಧಾರ ಗ್ರಂಥಗಳಾಗುತ್ತವೆ.

ಲಿಂಗಾಯತ ಧರ್ಮ, ವಚನ ಸಾಹಿತ್ಯ ಕ್ಷೇತ್ರದಲ್ಲಿ ಮುಚ್ಚಿ ಹೋಗಿದ್ದ ಅನೇಕ ಸತ್ಯಗಳನ್ನು ಬಯಲಿಗೆ ಎಳೆದು. ಉಪಕರಿಸಿದ ಹಲವಾರು ಕೃತಿಗಳೆಂದರೆ 1.ಶರಣ.ಡಾ॥ಬಿ.ಎಸ್.ಗದ್ದಗಿ ಮಠರ ಜನಪದ ಸಾಹಿತ್ಯ ಅಧ್ಯಯನ ಕೃತಿ 2.ಶರಣ.ತ.ಸು.ಶಾಮರಾಯರು ಸಂಪಾದಿಸಿದ ಶಿವಶರಣ ಕಥಾ ರತ್ನ ಕೋಶ ಮತ್ತು 3.ಶರಣ.ಡಾ॥ಎಲ್.ಬಸವರಾಜು ಅವರ ಅಲ್ಲಮನ ವಚನ ಚಂದ್ರಿಕೆ ಮತ್ತು ಶಿವದಾಸ ಗೀತಾಂಜಲಿ. ಡಾ॥ಎಲ್.ಬಸವರಾಜು ಅವರು ಸಂಪಾದಿಸಿದ ಕೃತಿಗಳು ಎಲ್ಲವೂ ಮಹತ್ವಪೂರ್ಣವೇ ಇದ್ದರೂ, ಶಿವದಾಸ ಗೀತಾಂಜಲಿಯನ್ನು ನಾನು ಉಲ್ಲೇಖಿಸುತ್ತಿರುವ ಮುಖ್ಯ ಉದ್ದೇಶವೆಂದರೆ, ಆದಿ ಶರಣರು ಗದ್ಯವೂ ಅಲ್ಲದ ಪದ್ಯವೂ ಅಲ್ಲದ ವಿಶಿಷ್ಟ ಶೈಲಿಯ ವಚನಗಳನ್ನು ಮಾತ್ರ ಬರೆದಿದ್ದಾರೆಂಬ ನಂಬಿಕೆಯೇ ಬಹಳ ಜನರಿಗೆ ಇತ್ತು. ಸಂಗೀತಕ್ಕೆ ಸುಲಭವಾಗಿ ಅಳವಡಿಸಬಹುದಾದ ಛಂದಸ್ಸು, ತಾಳ, ಲಯಗಳಿಂದ ಕೂಡಿದ ಶೈಲಿ ಗುರು ಬಸವಣ್ಣನವರು, ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ಧರಾಮೇಶ್ವರ ಮುಂತಾದ ಕೆಲವೇ ಕೆಲವರಲ್ಲಿದೆ; ಚನ್ನಬಸವಣ್ಣನವರ ವಚನಗಳಲ್ಲಿ ಇಲ್ಲ ಎಂದೇ ನಾನು ಮೊದಲು ತಿಳಿದಿದ್ದೆ. ಶರಣ. ಡಾ॥ಬಸವರಾಜು ಅವರ ಶಿವದಾಸ ಗೀತಾಂಜಲಿ ನೋಡಿದಾಗ ಹರ್ಷಾತಿರೇಕ ಉಂಟಾಯಿತಲ್ಲದೆ, ಚನ್ನಬಸವಣ್ಣನವರ ಗೀತೆಗಳನ್ನು ಧ್ವನಿ ಸುರುಳಿ ಮಾಡಿದಾಗ ಹಾಡುವುದಕ್ಕೆ ಅಷ್ಟೇ

ಅಲ್ಲ, ನೃತ್ಯಾಭಿನಯಕ್ಕೆ ಸಹ ಅವನ್ನೇ ನರ್ತಕರು ಇಷ್ಟಪಡುತ್ತಿದ್ದಾರೆ ಎಂಬುದು ಮನವರಿಕೆಯಾದಾಗ ಚನ್ನಬಸವಣ್ಣನವರಿಗೆ ಸಂಗೀತದ ಜ್ಞಾನವಿದ್ದುದೇ ಅಲ್ಲದೆ ತಾವೂ ಸ್ವತಃ ಉತ್ತಮ ಗಾಯಕರೂ ಆಗಿರಬಹುದು ಎನಿಸುತ್ತದೆ. ಹೀಗಾಗಿ ಆದಿ ಶರಣರ ಬಹುಮುಖ ವ್ಯಕ್ತಿತ್ವ ದರ್ಶನ ಮಾಡಿಸುವ ಶರಣ(ಶಿವದಾಸ) ಗೀತಾಂಜಲಿ ಒಂದು ಡಾ॥ಬಸವರಾಜು ಅವರ ಅತ್ಯಮೂಲ್ಯ ಕೊಡುಗೆ ಎನಿಸುತ್ತದೆ.

ಪ್ರಜಾವಾಣಿಯ ಬಾಳಬುತ್ತಿ

ಪ್ರಜಾವಾಣಿ ಪತ್ರಿಕೆಯಲ್ಲಿ ಬಾಳ ಬುತ್ತಿ ಎಂಬ ಅಂಕಣದಲ್ಲಿ ಡಾ॥ಎಲ್.ಬಸವರಾಜು ಅವರು ಬರೆಯುತ್ತಾರೆ. ಅದರಲ್ಲಿ ವೈಚಾರಿಕತೆ ಮತ್ತು ಅಧ್ಯಾತ್ಮಿಕತೆ ಮೇಳವಿಸಿರುತ್ತದೆ. ಇತ್ತೀಚೆಗೆ ಬರೆದ ಅಂಥ ಒಂದು ತುಣುಕು, ಇವರೇಕೆ ದೊಡ್ಡವರು ? ಎಂಬುದು ಚಿಂತನಾರ್ಹವಾಗಿತ್ತು. ಕೆಲವರು ಇದ್ದಕ್ಕಿದ್ದಂತೆಯೇ ಪ್ರಸಿದ್ಧರಾಗುತ್ತಾರೆ. ಅವರು ಕಣ್ತೆರೆದು ನೋಡಿದರೆ ಭಕ್ತರು ತಾವು ಉದ್ಧಾರವಾದೆವು ಎಂದುಕೊಳ್ಳುತ್ತಾರೆ. ಸಿಟ್ಟಾದರೆ ಅದು ಶಾಪ ಎಂದು ಹೆದರುತ್ತಾರೆ. ಅವರ ದರ್ಶನವಾದರೆ ಭಗವಂತ(?)ನ ದರ್ಶನವೇ ಆಯಿತು ಎಂದು ಸಂಭ್ರಮಿಸುತ್ತಾರೆ. ನಮ್ಮ ಕಣ್ಣೆದುರಿಗೇ ಗೋಲಿ ಗಜ್ಜುಗ ಆಡುತ್ತಿದ್ದ ಪೋರ ಅದ್ಹೇಗೆ ಇದ್ದಕ್ಕಿದ್ದ ಹಾಗೆಯೇ ಇಷ್ಟು ಮಹಿಮಾಪುರುಷನಾದ ಎಂದು ಅಚ್ಚರಿಯಾಗುತ್ತದೆ ಎಂದು ಬರೆಯುತ್ತಾರೆ. ನಿಜ, ಈ ದೇಶದಲ್ಲಿ ನಡೆದಿರುವ ವಿಪರ್ಯಾಸದ ಭಕ್ತಿಯಿದು. ಹೆಚ್ಚಿನ ಜನರಿಗೆ ಸುಜ್ಞಾನ, ಸದಾಚಾರ, ಸದ್ಭಕ್ತಿಗಳ ರಾಜಮಾರ್ಗಕ್ಕಿಂತಲೂ ಸನ್ಮೋಹಿನಿ ಪ್ರಯೋಗದ ಅಡ್ಡದಾರಿ ಹಿಡಿಸುವ ದಿಢೀರ್ ಮಹಾಪುರುಷರೇ ಬೇಕು. ಅಂಥವರಿಗೆ ಪ್ರಚಾರ ಕೊಡುವ ಕೆಲವು ಜನರ ಒಂದು ಕೂಟವೇ ಇರುತ್ತದೆ.

ಇಂಥ ವಿಲಕ್ಷಣ ವಾತಾವರಣದಲ್ಲಿಯೂ ಶರಣ.ಡಾ॥ಎಲ್.ಬಸವರಾಜುರಂತಹ ಪ್ರಾಮಾಣಿಕ ಚಿಂತನಶೀಲರನ್ನು, ವಾಙ್ಮಯ ತಪಸ್ವಿಗಳಾದ ಅವರ ವ್ಯಕ್ತಿತ್ವವನ್ನು ಗುರುತಿಸಿ ಯಾರೋ ಕೆಲವರು ಕರ್ನಾಟಕ ಸರ್ಕಾರದ ಗಮನಕ್ಕೆ ತಂದು ಬಸವ ಪುರಸ್ಕಾರ ಪ್ರದಾನ ಮಾಡಿಸಿರುವುದು ಮರುಭೂಮಿಯಲ್ಲೊಂದು ಓಯಸಿಸ್ ಕಂಡಷ್ಟು ಸಂತೋಷವಾಗುವುದಲ್ಲದೆ; ಅರ್ಹತೆಗೆ ಸಂದ ಮನ್ನಣೆ ಎನಿಸುತ್ತದೆ. ಇದೇ ಸಮಯದಲ್ಲಿ ಸುವರ್ಣಕ್ಕೆ ಸುವಾಸನೆ ಬಂದಂತೆ ಕೇಂದ್ರ ಸರ್ಕಾರದ ಭಾಷಾ ಸಮ್ಮಾನ್ ಪ್ರಶಸ್ತಿಯೂ ಅವರಿಗೆ ಲಭ್ಯವಾಗಿದೆ. ಶರಣ.ಡಾ॥ಎಲ್.ಬಸವರಾಜುರವರು ನಲವತ್ತಕ್ಕೂ ಹೆಚ್ಚು ಪ್ರೌಢ ಗ್ರಂಥಗಳನ್ನು ಸಂಪಾದಿಸಿದ್ದು, ಇನ್ನೂ ಹೆಚ್ಚಿನ ಗ್ರಂಥಗಳು ಹೊರಬರುವಂತೆ ಸೃಷ್ಟಿಕರ್ತ ಲಿಂಗದೇವ ಹಾಗೂ ಧರ್ಮಗುರು ಬಸವಣ್ಣನವರು ಅವರಿಗೆ ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ. -ಮಾತಾಜಿ

ಸೃಜನಶೀಲ ಸಂಶೋಧನೆಗೆ ಸಂದ ಮನ್ನಣೆ

ಕನ್ನಡದ ಹಿರಿಯ ವಿದ್ವಾಂಸ, ಸಂಶೋಧಕ, ಸೃಜನಶೀಲ, ಬರಹಗಾರ ಡಾ॥ಎಲ್.ಬಸವರಾಜು ಅವರಿಗೆ 2005ನೇ ಸಾಲಿನ "ಬಸವ ಪುರಸ್ಕಾರ" ರಾಷ್ಟ್ರೀಯ ಪ್ರಶಸ್ತಿಯನ್ನು ರಾಜ್ಯ ಸರ್ಕಾರ ಘೋಷಿಸಿದೆ. ರೂ.1.5 ಲಕ್ಷ ನಗದು ಒಳಗೊಂಡ ಈ ಪುರಸ್ಕಾರವನ್ನು ಇಂದು (ಭಾನುವಾರ) ಸಂಜೆ ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು.

ಆಳವಾದ ವಿದ್ವತ್ತನ್ನು ಪಡೆದಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಇಳಿಮುಖವಾಗುತ್ತಿದೆ. ಪ್ರತಿಫಲಾಪೇಕ್ಷೆ ಇಲ್ಲದೆ ತಪಸ್ಸಿನಂತೆ ನಡೆಸಬೇಕಾದ ನಿಜವಾದ ಸಂಶೋಧನೆಯೂ ಕಣ್ಮರೆಯಾಗುತ್ತಿದೆ. ತಕ್ಷಣದ ಫಲಿತಾಂಶಗಳನ್ನು ಬಯಸುವ ಸದಾ ಬಿಡುಬೆಳಕಿನಲ್ಲಿಯೇ ಬಣ್ಣ ಹಚ್ಚಿ ಮೆರೆಯಬೇಕೆಂಬ ಹಂಬಲದ ಯುವಜನಕ್ಕೆ ಸಂಶೋಧನೆ ಎನ್ನುವುದು ಬರಡು ಕ್ಷೇತ್ರವಾಗಿ ಕಾಣಿಸಿದರೆ ಆಶ್ಚರ್ಯವೇನಿಲ್ಲ. ಇಂಥ ಹೊತ್ತಿನಲ್ಲಿ ಕರ್ನಾಟಕ ಸರ್ಕಾರ 1.5 ಲಕ್ಷ ರೂಪಾಯಿ ನಗದನ್ನು ಒಳಗೊಂಡಿರುವ ಬಸವ ಪುರಸ್ಕಾರವನ್ನು ಹಿರಿಯ ವಿದ್ವಾಂಸ ಸಂಶೋಧಕ, ಸೃಜನಶೀಲ ಬರಹಗಾರ, ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ॥ಎಲ್.ಬಸವರಾಜು ಅವರಿಗೆ ನೀಡಿರುವುದು ಅರ್ಥಪೂರ್ಣವಾಗಿದೆ.

ಬಸವರಾಜು ಅವರದು ಈಗ ಇಳಿವಯಸ್ಸು; 87ನೇ ವರ್ಷಕ್ಕೆ ಅವರು ಮೊನ್ನೆ ಕಾಲಿರಿಸಿದರು.

ಪ್ರಾಧ್ಯಾಪಕ ವೃತ್ತಿಯಿಂದ ಅವರು ನಿವೃತ್ತಿಯಾಗಿಯೇ 26 ವರ್ಷಗಳು ಕಳೆದಿವೆ. ಇಡೀ ಜೀವನವನ್ನೇ ತಮ್ಮ ಅಧ್ಯಯನಕ್ಕೆ, ಸಂಶೋಧನೆಗೆ ಮುಡುಪಾಗಿಟ್ಟವರಂತೆ ದುಡಿದ ಬಸವರಾಜು ಅವರದು ನಿಶಿತ ಮತಿ, ಅವರ ನಾಲಗೆಯೂ ಹರಿತವಾದದ್ದೇ. ಸಮಕಾಲೀನ ಬದುಕನ್ನು ಸದಾ ಎಚ್ಚರದಿಂದಲೇ ಗಮನಿಸುತ್ತ, ತಮ್ಮದೇ ಆದ ವ್ಯಾಖ್ಯಾನಕ್ಕೆ ಬಗ್ಗಿಸಿಕೊಳ್ಳುತ್ತ, ಪ್ರತಿಕ್ರಿಯಿಸುತ್ತ, ಸಿಗರೇಟನ್ನು ಉರಿಸುತ್ತ, ತಾವೂ ಉರಿಯುತ್ತ, ವರ್ತಮಾನಕ್ಕೆ ಸ್ಪಂದಿಸುವ ಈ ಹಿರಿಯರು ನಿತ್ಯ ಯೌವ್ವನಿಗರಾಗಿರುವುದು ಒಂದು ವಿಸ್ಮಯವೇ.

ಶಿಸ್ತುಬದ್ಧ ಜೀವನವನ್ನು ನಡೆಸುತ್ತ ಬಂದಿರುವ ಬಸವರಾಜು ಇಂದಿಗೂ ಕಠಿಣ ಪರಿಶ್ರಮದಲ್ಲಿ ನಂಬಿಕೆ ಇಟ್ಟವರು. ನಿತ್ಯವೂ 10-12 ಗಂಟೆಗಳಷ್ಟು, ಕೆಲವೊಮ್ಮೆ ಇನ್ನೂ ಹೆಚ್ಚು ಕೆಲಸ ಮಾಡುವ ಅವರು ಹೊಸ ಹೊಸ ವ್ಯಾಖ್ಯಾನಗಳನ್ನು, ಪಾಠಾಂತರಗಳನ್ನು ಸಿದ್ಧಪಡಿಸುತ್ತ, ಅದೇನೂ ಇಲ್ಲವೆಂದರೆ ತಾವು ಹಿಂದೆ ನಡೆಸಿದ ಸಂಶೋಧನೆಯನ್ನೇ ಮತ್ತೆ ಮತ್ತೆ ಕೈಗೆತ್ತಿಕೊಂಡು ಹೊಸ ಬೆಳಕಿನಲ್ಲಿ ನೋಡುವ ಕಾಯಕದಲ್ಲಿ ತೊಡಗುತ್ತಾರೆ. ಇಲ್ಲವೇ ಕವಿತೆಯ ಮೇಲೆ ಕವಿತೆ ಬರೆಯುತ್ತ ಓದಿ ತೋರಿಸುತ್ತ ಸುಖಿಸುತ್ತಾರೆ. ಸಂಜೆಯ ವಾಯು ವಿಹಾರದಲ್ಲಿ ಒಂದೆರಡು ಸಿಗರೇಟ್‌ಗಳು, ತರುಣ ಮಿತ್ರರ ಜೊತೆಯಲ್ಲಿ ಚರ್ಚೆ. ಸಂಜೆಯ ಕತ್ತಲಿಳಿಯುತ್ತಿದ್ದಂತೆ ಬಸವರಾಜು ಮನೆಯಲ್ಲಿರುತ್ತಾರೆ; ಟಿ.ವಿ.ಧಾರಾವಾಹಿಯನ್ನು ನೋಡುತ್ತಿರುತ್ತಾರೆ. ಸೃಜನ ಶೀಲ ಮನಸ್ಸುಳ್ಳ ಡಾ॥ಬಸವರಾಜು ಆರು ದಶಕಗಳಿಗೂ ಹೆಚ್ಚು ಕಾಲ ಓಲೆಗರಿಗಳಲ್ಲಿ, ಹಳೆಯ ಕಾಲದ ಕಡತಗಳಲ್ಲಿ ಒಡನಾಡಿ ಅಧ್ಯಯನ ನಡೆಸಿದವರು; ಸಂಶೋಧನೆಯನ್ನು ಮುನ್ನಡೆಸಿದವರು. ಅವರ ವಿದ್ವತ್ತೆಂದರೆ ಒಣ ಪಾಂಡಿತ್ಯವಲ್ಲ; ಅವರ ಸಂಶೋಧನೆಯೆಂದರೆ ವರ್ತಮಾನವನ್ನು ಮರೆತ ಭೂತದ ಗೊಡ್ಡು ಪುರಾಣವಲ್ಲ. ನಿಖರವಾದ ತಿಳುವಳಿಕೆ. ಹರಿತವಾದ ವಿಶ್ಲೇಷಣೆ. ಖಚಿತವಾದ ಅಭಿಪ್ರಾಯ, ಸ್ಪಷ್ಟ ನಿಲುವು, ತಮ್ಮದೇ ಆದ ಧೋರಣೆಗಳಿಂದಾಗಿ ಅವರ ಸಂಶೋಧನೆಗಳಿಗೆ ಹೊಸ ಆಯಾಮ ದೊರೆತಿದೆ.

ವಚನ ಸಾಹಿತ್ಯ, ಜೈನ ಸಾಹಿತ್ಯ, ಸರ್ವಜ್ಞ ವಚನಗಳನ್ನು ಕುರಿತಂತೆ ಅವರು ನಡೆಸಿದ ಬಹುಕಾಲದ ಸಂಶೋಧನೆ, ಅಧ್ಯಯನಗಳ ಫಲವಾಗಿ ಕನ್ನಡ ಓದುಗರು ಈ ಸಾಹಿತ್ಯ ಪ್ರಕಾರವನ್ನು ಹೊಸ ಬೆಳಕಿನಲ್ಲಿ ಓದಲು ಸಾಧ್ಯವಾಯಿತು, ಹನ್ನೆರಡನೇ ಶತಮಾನದ ವಚನಕಾರರು, ಅವರ ಬದುಕು, ಸುಧಾರಣೆ, ಸಾಮಾಜಿಕ-ಧಾರ್ಮಿಕ ಕ್ರಾಂತಿ ಇತ್ಯಾದಿ ಬಹಳ ಸೂಕ್ಷ್ಮವಾಗಿ, ಸಮಗ್ರವಾಗಿ ಅಧ್ಯಯನ ಮಾಡಿ, ಸಂಶೋಧನೆ ನಡೆಸಿದ ಬಸವರಾಜು, ಬಸವ, ಅಲ್ಲಮ, ಅಕ್ಕ, ಜೇಡರ ದಾಸಿಮಯ್ಯ ಅವರ ವಚನಗಳನ್ನು ಸರಿಯಾಗಿ ಸಂಪಾದಿಸಿ, ಪರಿಷ್ಕರಿಸಿ, ವಿದ್ವತ್ಪೂರ್ಣ ಟೀಕೆಯನ್ನು ಬರೆದರು. ಶೂನ್ಯ ಸಂಪಾದನೆ ಬಗ್ಗೆ, ಷಟ್‌ಸ್ಥಲ ವಚನಗಳ ಬಗ್ಗೆ ಇವರು ಬರೆದ ಮಾತುಗಳು ಮುಂದೆ ಅನೇಕ ವಿದ್ವಾಂಸರು ಈ ದಿಕ್ಕಿನಲ್ಲಿ ಕೆಲಸಮಾಡಲು ಸಹಾಯಕವಾದವು, ಬಸವರಾಜು ಅವರ ಅಲ್ಲಮನ ವಚನ ಚಂದ್ರಿಕೆ ಎಷ್ಟು ಮಹತ್ವದ ಗ್ರಂಥ ಎಂಬುದಕ್ಕೆ ಕವಿ ಎಚ್.ಎಸ್.ಶಿವಪ್ರಕಾಶ್ ಅವರ ಈ ಮಾತುಗಳನ್ನು ಗಮನಿಸಬಹುದು. ಬಸವರಾಜು ಅವರ ಚಂದ್ರಿಕೆಗಿರುವ ಬೌದ್ಧಿಕ ತೀವ್ರತೆ, ವಿದ್ಯುತ್ ವಿಲಾಸ, ವಿಶ್ಲೇಷಣೆಯ ಶಿಸ್ತು ನನಗೆ ಈವರೆಗೆ ಬೇರೆ ಸಂಕಲನಗಳಲ್ಲಿ ಸಿಕ್ಕಿಲ್ಲ.

ಶಬ್ದಮಣಿ ದರ್ಪಣದ ಅತ್ಯಾಧುನಿಕ ವ್ಯಾಖ್ಯಾನ ಪರಿಷ್ಕರಣ ಸಹಿತ ಓದುಗರಿಗೆ ದೊರಕಿದ್ದರೆ ಅದರ ಹಿಂದೆ ಬಸವರಾಜು ಅವರ ಪರಿಶ್ರಮ ಮತ್ತು ವಿದ್ವತ್ತುಗಳಿವೆ. ಅವರು ಸಿದ್ಧಪಡಿಸಿದ ಛಂದಸ್ಸಂಪುಟ. ಆದಿ ಪುರಾಣ. ಪಂಪ ಭಾರತ ವಿದ್ವಾಂಸರ ಮನ್ನಣೆ ಗಳಿಸಿವೆ. ಬಸವರಾಜು ಅವರು ಕನ್ನಡಕ್ಕೆ ತಂದ ಬುದ್ಧ ಚರಿತೆ, ಸೌಂದರನಂದ ಬುದ್ಧನ ಜಾಡನ್ನು ಅರಿಯುವಲ್ಲಿ ಮಹತ್ವದ ಗ್ರಂಥಗಳಾಗಿವೆ. ಠಾಣಾಂತರ ಮತ್ತು ಜಾಲಾರಿ ಎಂಬ ಎರಡು ಕವನ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಪಂಪ ಪ್ರಶಸ್ತಿಯ ನಂತರ ಎಲ್. ಬಸವರಾಜು ಅವರು ಪಡೆಯುತ್ತಿರುವ ಬಸವ ಪ್ರಶಸ್ತಿ ಅವರ ಹುರುಪನ್ನು ಹೆಚ್ಚಿಸಲಿ; ಕನ್ನಡಿಗರ ಆನಂದವನ್ನು ವೃದ್ಧಿಸಲಿ.

(- ಪ್ರಜಾವಾಣಿ, ದಿ.30-4-2006)

ಸಂಪಾದಕೀಯ :

ಶಿವಾಜಿ ಮಹಾರಾಜರು ಲಿಂಗಾಯತರೆ ?

-ಮಾತಾಜಿ

ಭಾರತ ದೇಶದ ಚರಿತ್ರೆಯಲ್ಲಿ ಶಿವಾಜಿ ಮಹಾರಾಜರ ಹೆಸರು ಅಮರ; ಸ್ವತಂತ್ರ ಹಿಂದು ಸಾಮ್ರಾಜ್ಯದ ಸ್ಥಾಪನೆಗಾಗಿ ಛಲ ತೊಟ್ಟು ಹೋರಾಡಿದ ಮಹಾ ರಾಷ್ಟ್ರಪ್ರೇಮಿ. ಜನ್ಮನಾಮ ಶಿವಾ, ಜಿ ಎಂಬುದು ಗೌರವ ಸೂಚಕ ವಿಶೇಷಣ. ಪೂಜ್ಯ ಶ್ರೀ ಸಿದ್ಧರಾಮ ಸ್ವಾಮಿಗಳು ನಾಗನೂರು ಮಠ, ಬೆಳಗಾಂ ಮತ್ತು ಡಾ॥ಶಿವಗೌಡ ಪಾಟೀಲ್, ಸಂಕೇಶ್ವರ-ಉಭಯತರ ಲೇಖನಗಳು ಅತೀವ ಹರ್ಷ ಮತ್ತು ಹೆಮ್ಮೆಯನ್ನುಂಟು ಮಾಡುವ ವಿಷಯಗಳನ್ನು ಪ್ರಸ್ತಾಪಿಸಿವೆ. ಮುಖ್ಯವಾದುದೆಂದರೆ ಶಿವಾಜಿಯ ವಂಶದ ಮೂಲ ಪುರುಷರು ಲಿಂಗಾಯತರು, ಧಾರವಾಡ ಜಿಲ್ಲೆ ಗದಗ್ ತಾಲ್ಲೋಕಿನ ಸೊರಟೂರು ಗ್ರಾಮದಿಂದ ಮಹಾರಾಷ್ಟ್ರಕ್ಕೆ ವಲಸೆ ಹೋದವರು. ಬಳಿಯಪ್ಪ ಎನ್ನುವವರು ಕರ್ನಾಟಕದಿಂದ ಅತ್ತ ಹೋದರು. ಅವರು ಗೌಳಿ ಲಿಂಗಾಯತರು.

ಇಂದಿಗೂ ಮಹಾರಾಷ್ಟ್ರದಲ್ಲಿ ಲಿಂಗಾಯತ ಸಮಾಜವು ಪ್ರಭಾವ ಶಾಲಿಯಾಗಿದೆ. ಅದರಲ್ಲಿ ಮಾಳಿ ಲಿಂಗಾಯತರು, ಗೌಳಿ ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮಳಾ ಎಂದರೆ ಹೊಲ, ಗದ್ದೆ, ತೋಟ ; ಮಾಳಿ ಎಂದರೆ ಕೃಷಿ ಕಾಯಕದವನು. ಗೌಳಿ, ಹಾಲು ಮಾರುವ ಹೈನುಗಾರಿಕೆ ಕಾಯಕದವನು; ಸಂತ ತುಕಾರಾಂ ಹುಟ್ಟಿದ್ದು ಮಾಳಿ ಲಿಂಗಾಯತರ ಮನೆಯಲ್ಲಿ; ಹೂ ಬೆಳೆಯುವ ಮತ್ತು ಮಾಲೆ ಮಾಡುವ ಕಾಯಕ ಅವರದಾಗಿತ್ತು. ಇಂದಿಗೂ ಅವರ ಮನೆತನದವರು ಇಷ್ಟಲಿಂಗಧಾರಿಗಳೆಂದು ಜನರು ಹೇಳುತ್ತಾರೆ. ಧರ್ಮಪಿತ ಬಸವಣ್ಣನವರ ಲೋಹ ಚುಂಬಕ ಶಕ್ತಿಯಿಂದ ಅದ್ಭುತ ಪರಿಣಾಮ ಬೀರಿದ ಲಿಂಗಾಯತ ಧರ್ಮವು ಬೇರೆಲ್ಲ ಧರ್ಮಗಳಿಗಿಂತಲೂ ತೀವ್ರಗತಿಯಲ್ಲಿ ಹಬ್ಬಿತು. ಅದಕ್ಕೆ ಮತ್ತೊಂದು ಕಾರಣ ಅಲ್ಲಮಪ್ರಭುದೇವರು, ಸಿದ್ಧರಾಮೇಶ್ವರ, ಗುಡ್ಡಾಪುರ ದಾನಮ್ಮ ಮುಂತಾದವರೆಲ್ಲರ ನೂರಾರು ಸಾವಿರಾರು ಕೈಗಳು ಬಸವ ಧರ್ಮವನ್ನು ಬೆಳೆಸಿದವು ಅಲ್ಲಮ ಪ್ರಭು(ಗಿರಿ) ಡೋಂಗರ್, ಸಿದ್ದೋಬಾ (ಸಿದ್ಧರಾಮ) ಡೋಂಗರ್(ಗಿರಿ) ಕೆಳಗೆ ಮತ್ತೊಬ್ಬ ಶರಣರು ಧೂಳೋಬಾ ಎಂಬುವವರ ಗುಡಿ ಇದೆ. ಅವರೂ ಸಿದ್ಧರಾಮೇಶ್ವರರ ಅನುಚರರು ಎಂಬುದು ದಿ.22-5-2006ರಂದು ನಾನು ಹೋದಾಗ ತಿಳಿಯಿತು. ಲಿಂಗಾಯತರಲ್ಲಿ ಧೂಳಪ್ಪ ಎನ್ನುವ ಹೆಸರಿನವರು ಬಹಳವಿದ್ದಾರೆ. ಈ ಹೆಸರಿಗೆ ಹಿಂದಿನ ಧೂಳಪ್ಪ ಶರಣರು ಕಾರಣ ಎಂದು ಈಗ ದೃಢವಾಯಿತು. ಸಿದ್ಧರಾಮೇಶ್ವರರ ತಾಯಿ ತಂದೆ ಧೂಳಿಮಾಕಾಳ ಎಂದು ತಮ್ಮ ಮಗನಿಗೆ ಹೆಸರನ್ನು ಇಟ್ಟುದೂ ಧೂಳಪ್ಪ, ಧೂಳೇಗೌಡ ಎಂಬುದಕ್ಕೆ ಪುಷ್ಟಿಕೊಡುತ್ತದೆ. ಶಿವಾಜಿ ಮಹಾರಾಜರ ಮನೆಯ ಗುರುಗಳು ಶಾಂತಲಿಂಗ ಸ್ವಾಮಿಗಳು, ರಾಮದಾಸರು ಆಧ್ಯಾತ್ಮಿಕ ಗುರುಗಳು ಎಂಬುದು ಗಮನಾರ್ಹ ಸಂಗತಿ.

ಮಹಾರಾಷ್ಟ್ರದಲ್ಲಿ ಆಗ ವೈದಿಕ ಹಿಂದು ವಿಚಾರಧಾರೆ ಬಹಳ ಪ್ರಬಲವಾಗಿದ್ದು ಶಿವಾಜಿ ಕ್ಷತ್ರಿಯರಲ್ಲ; ಪಟ್ಟಾಭಿಷೇಕಕ್ಕೆ ಅರ್ಹರಲ್ಲ, ಅವರು ಶೂದ್ರರು ಎಂದು ವೈದಿಕ ಬ್ರಾಹ್ಮಣರು ಮೂಗೆಳೆದುದಕ್ಕೂ; ಲಿಂಗಾಯತರನ್ನು ಲಿಂಗಾಡೆಯವರೆಂದು ಶೂದ್ರರೆಂದು ಗುಡಿಯಲ್ಲಿ ಪೂಜೆ ಮಾಡಲು ಅನರ್ಹರೆಂದು ಕೋರ್ಟ್‌ಗಳಲ್ಲಿ ಬ್ರಾಹ್ಮಣರು ವ್ಯಾಜ್ಯ ಹೂಡಿದುದಕ್ಕೂ ಸಂಬಂಧ ಕಲ್ಪಿಸಿದರೆ ಶಿವಾಜಿ ಮಹಾರಾಜರು ಲಿಂಗಾಯತ ಮೂಲದವರಿದ್ದರು ಎಂಬುದಕ್ಕೆ ಇನ್ನೊಂದು ಪುರಾವೆ ದೊರೆಯುತ್ತದೆ.

ಮರಾಠಿ ಕನ್ನಡದ ತಂಗಿ; ದೇವನಾಗರಿ (ಸಂಸ್ಕೃತ) ಲಿಪಿಯನ್ನು ಅದು ಆಶ್ರಯಿಸಿದ್ದರೂ ಭಾಷಿಕವಾಗಿ ಕನ್ನಡಕ್ಕೆ ಹತ್ತಿರದಲ್ಲಿದೆ. 'ತಾಯಿ' ಎಂಬ ಪದ ತಂಗಿ ಎಂಬ ಅರ್ಥದಲ್ಲಿ ವಿಪರೀತ ಬಳಕೆಯಾಗುತ್ತದೆ. ಮಾಲೂತಾಯಿ, ರಜನಿ ತಾಯಿ ಈ ಸಂಬೋಧನೆ ಬಹಳ. ಅಣ್ಣ ಮತ್ತು ಅಪ್ಪ ಶುದ್ಧ ದ್ರಾವಿಡ ಪದಗಳು. ತಮಿಳು, ತೆಲುಗು, ಕನ್ನಡ ಭಾಷೆಗಳ ಪದಗಳು. ಮರಾಠಿಯಲ್ಲಿ ಇವುಗಳ ಬಳಕೆ ಬಹಳ. ಬಹುಶಃ 12ನೆಯ ಶತಮಾನದಲ್ಲಿ ಸೊಲ್ಲಾಪುರ, ಕೊಲ್ಲಾಪುರ, ಪಂಡರಾಪುರ ಮುಂತಾದವು ಅಚ್ಚ ಕನ್ನಡ ಪ್ರದೇಶಗಳೇ ಇದ್ದಿರಬೇಕು. ಸೊಲ್ಲಾಪುರದ ಸಿದ್ಧರಾಮೇಶ್ವರರು ಕನ್ನಡದಲ್ಲಿ ಸಾಹಿತ್ಯ ರಚನೆ

ಮಾಡಿರುವುದು, ಅಲ್ಲಮಪ್ರಭು ದೇವರು-ಸಿದ್ಧರಾಮೇಶ್ವರರು ಕೊಲ್ಹಾಪುರದ ಸುತ್ತಮುತ್ತ ಸಂಚರಿಸಿ ಲಿಂಗಾಯತ ಧರ್ಮವನ್ನು ಬೆಳೆಸಿರುವುದೇ ಇದಕ್ಕೆ ಜೀವಂತ ಸಾಕ್ಷಿ. ಮಹಾರಾಷ್ಟ್ರದಲ್ಲಿ ಹತ್ತಿಮತ್ತೂರು ಎಂದು ಒಂದು ಶುದ್ಧ ಕನ್ನಡದ ಹೆಸರಿನ ಗ್ರಾಮವಿದೆ. ಕನ್ನಡ ಎಂಬ ತಾಲ್ಲೋಕಿದೆ. ಕಾಲಾನಂತರದಲ್ಲಿ ಕನ್ನಡ-ಮರಾಠಿ ಘರ್ಷಣೆಯು ರಾಜಕಾರಣಿಗಳಿಂದ ಆರಂಭವಾದಂತಿದೆ. ತಮ್ಮ ಸ್ವಾರ್ಥ ಸಾಧನೆಗಾಗಿ ರಾಜಕಾರಣಿಗಳು ಭಾಷೆಯ ವಿವಾದ ಹುಟ್ಟಿಸಿ, ಜಾತಿ ಪ್ರಜ್ಞೆ ವೃದ್ಧಿಸಿ ರಾಜ್ಯಗಳನ್ನು, ಸಮಾಜವನ್ನು ಸೀಳುತ್ತಿದ್ದಾರೆ.

ಲಿಂಗಾಯತ ರಾಜ ಪರಂಪರೆ

ಅಧಿಕೃತ ಮಹಾರಾಣಿಯ ಪುತ್ರನಲ್ಲದ ಕಲಚೂರಿ ಬಿಜ್ಜಳನು ಚಾಲುಕ್ಯ ಸಾಮ್ರಾಜ್ಯವನ್ನು ಆಳಿದುದು ಗುರು ಬಸವಣ್ಣನವರ ಧಾರ್ಮಿಕ ಚಳುವಳಿಯ ಹಿನ್ನೆಲೆಯಲ್ಲಿ ಎಂಬುದು ಬಹಳ ಜನರ ಗಮನಕ್ಕೆ ಬಂದಿಲ್ಲ. ಗಿರೀಶ್ ಕಾರ್ನಾಡರು 'ತಲೆದಂಡ' ದಲ್ಲಿ ಇದನ್ನು ಪ್ರಸ್ತಾಪಿಸಿದ್ದಾರೆ. ಹುಟ್ಟಿನಿಂದ ಗುರುತ್ವ, ಬ್ರಾಹ್ಮಣತ್ವ ಬರುವಂತೆ ಕ್ಷತ್ರಿಯತ್ವವೂ ಹುಟ್ಟಿನಿಂದ ಬರುವಂತಹುದು ಎಂಬ ವೈದಿಕ ಹಿಂದು ನಂಬಿಕೆಗೆ ವಿರುದ್ಧವಾಗಿ ಜ್ಞಾನದಿಂದ ಗುರುತ್ವ, ಭುಜ ಬಲ ಪರಾಕ್ರಮದಿಂದ ಕ್ಷತ್ರಿಯತ್ವ ಎಂಬ ಸಿದ್ಧಾಂತ ಗುರು ಬಸವಣ್ಣನವರದು. ಹೀಗಾಗಿ ಸಂಪ್ರದಾಯಕ್ಕೆ ವಿರುದ್ಧವಾಗಿ ಬಿಜ್ಜಳನು ಚಾಲುಕ್ಯ ಸಿಂಹಾಸನವನ್ನು ಏರಿದನು. ಆತನು ನೇರವಾಗಿ ಲಿಂಗಾಯತ ಧರ್ಮವನ್ನು ಸ್ವೀಕರಿಸುವ ಎದೆಗಾರಿಕೆ ತೋರದಿದ್ದರೂ ಈ ಧರ್ಮವು ಬಲಗೊಳ್ಳುವಲ್ಲಿ, ಬೆಳೆಯುವಲ್ಲಿ ಉತ್ತಮ ಪಾತ್ರವನ್ನು ವಹಿಸಿದ್ದಾನೆ. ಹೋರಾಟದ ಮನೋಭಾವವು ಲಿಂಗಾಯತ ಧರ್ಮದ ರಕ್ತಗತ ಗುಣವಾಗಿದೆ. ಜಡ ಸಂಪ್ರದಾಯ, ಜಾತೀಯತೆ, ಅನ್ಯಾಯದ ವಿರುದ್ಧ ಎದ್ದು ನಿಂತು ಧರ್ಮಗುರು ಬಸವಣ್ಣನವರು ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು. ಹೀಗಾಗಿ ಕಲ್ಯಾಣ ಕ್ರಾಂತಿಯ ನಂತರ ಶರಣರು ಎಲ್ಲ ದಿಕ್ಕುಗಳಲ್ಲಿ ಚದುರಿದ್ದು ಲಿಂಗಾಯತ ಸಮಾಜವು ಬೆಳೆಯಲು ಒಂದು ವರವಾಯಿತು.

ಮಂಟಪದ ಹೆಜ್ಜೇನ ಗಂಟೇರು ಕೆಡಿಸಿದರೆ
ಕುಂಟತವೆ ಜೇನ ನೊಣಗಳಿಗೆ। ಹುಟ್ಟಿಡಲು
ಬಂಟ ಶರಣರಿಗೆ ಕಂಟಕವೆ? ॥ (ನೆ. ಅ.73)

ಶಿವಶರಣ ದುಂಬಿಗಳು ಭವದೊಳಗೆ ಹಾರ್ಹಾರಿ
ಶಿವಮತದ ಹುಟ್ಟು ಕಟ್ಟಿದವು। ವಚನಗಳು
ಸವೆಯದುಳಿದಿರುವ ಹೊಸ ಜೇನು ॥ (ನೇ.ಅ.84)

ಅನುಭವ ಮಂಟಪ ಎಂಬ ಜೇನುಗೂಡಿಗೆ ಕಿಚ್ಚು ಹಚ್ಚಿ ಗಂಟೇರು (ಗಂಟೆ ಬಾರಿಸುವ ಪುರೋಹಿತಶಾಹಿ) ಕೆಡಿಸಿದರೇನಂತೆ, ಶರಣರೆಂಬ ಜೇನ್ನೊಣಗಳು ಹಾರಿ ಹೋದಲ್ಲೆಲ್ಲ ಪುನಃ ಲಿಂಗಾಯತ ಧರ್ಮದ ಜೇನುಗೂಡು ಕಟ್ಟಿದರು ಎನ್ನುತ್ತಾರೆ ಜನಪದ ಕವಿಗಳು.

ಆಂಧ್ರದ ಕಡೆಗೆ ಹೋದವರು ಕಾಕತೀಯ ಸಾಮ್ರಾಜ್ಯವನ್ನು ಕಟ್ಟಿದರು. ಕರ್ನಾಟಕದಲ್ಲಿ ಸುವರ್ಣಯುಗ ನೀಡಿದ ಶಿವಪ್ಪ ನಾಯಕ, ಕೆಳದಿ ಚನ್ನಮ್ಮ ನಂತರ ಬಂದ ಕಿತ್ತೂರು ಚನ್ನಮ್ಮ, ಬೆಳವಡಿ ಮಲ್ಲಮ್ಮ, ಬೀಳಗಿಯ ಸಿದ್ಧಮ್ಮ, ಕೊಡಗಿನ ರಾಜರು, ಗೋವೆಯ ಕದಂಬರು ಎಲ್ಲ ಲಿಂಗಾಯತ ಧರ್ಮೀಯರು ಎಂಬುದು ಮಹತ್ವದ ಅಂಶ. ತಮ್ಮ ವೀರತ್ವ, ಶೌರ್ಯಗಳಿಂದ ಅನೇಕ ಬುಡಕಟ್ಟು, ಶೂದ್ರವರ್ಗದವರು ರಾಜರು ಆದಾಗ ಅವರು ಲಿಂಗಾಯತ ಧರ್ಮ ಸ್ವೀಕರಿಸಿ ಧಾರ್ಮಿಕ ಸ್ಥಾನಮಾನ ಹೊಂದುತ್ತಿದ್ದರು. ಮೈಸೂರು ದೊರೆಗಳು ಸಹ ಜಂಗಮರ ಪ್ರೇರಣೆಯಿಂದಲೇ ಮೈಸೂರು ಸಂಸ್ಥಾನ ಕಟ್ಟಿದ್ದಲ್ಲದೆ ಇಷ್ಟಲಿಂಗಧಾರಿಗಳು ಸಹ ಆಗಿದ್ದರೆಂಬುದನ್ನು ಓದುತ್ತೇವೆ. ಹಿಂದಿನ ಕಾಲದ ಗುರುಗಳು ಧರ್ಮಬೋಧೆ, ಶಿಷ್ಯೋದ್ಧಾರದಲ್ಲಿ ನಿರತರಾಗಿರುತ್ತಿದ್ದುದರಿಂದ ರಾಜ ಮಹಾರಾಜರು ಅಷ್ಟೇ ಶ್ರದ್ಧೆಯಿಂದ ಗುರುಬೋಧೆ ಪಡೆಯುತ್ತಿದ್ದರು. ಬರು ಬರುತ್ತ ಗುರುಗಳು ರಾಜರಿಂದ, ರಾಜಕೀಯದಿಂದ ಆರ್ಥಿಕ ಲಾಭ ಪಡೆಯುವಲ್ಲಿಯೇ ಆಸಕ್ತರಾದುದರಿಂದ ಗುರುಗಳು-ರಾಜಕೀಯ ನೇತಾರರ ಸಂಬಂಧವೂ

ಕೊಡು-ಕೊಳ್ಳುವ ವ್ಯವಹಾರವಾಗುತ್ತಿದೆ, ಧಾರ್ಮಿಕ ಸಂಬಂಧ ಕಳಚಿಕೊಳ್ಳುತ್ತಿದೆ.

ಲಿಂಗಾಯತ ಧರ್ಮವು ರಾಜ ವೈಭವವನ್ನು ಒಂದು ಕಡೆ ಪಡೆದರೆ ಧಾರ್ಮಿಕ ವೈಭವದಿಂದಲೂ ವಿಜೃಂಭಿಸಿತು. ಮಲೆ ಮಾದೇಶ್ವರ, ಎಡೆಯೂರು ಸಿದ್ಧಲಿಂಗೇಶ್ವರ ಮುಂತಾದವರ ಪ್ರಯತ್ನದಿಂದ ವಿವಿಧ ರಾಜ್ಯಗಳಲ್ಲಿ ಹಬ್ಬಿತು. ಈಗ ನೋಡಿದರೆ ಅದು ಕೇವಲ ಅಸ್ಥಿಪಂಜರದಂತೆ ನಿರ್ಜೀವಗೊಂಡಿದೆ.

ಶಿವಾಜಿ ಮಹಾರಾಜರು ರಟ್ಟೆಗೆ ಇಷ್ಟಲಿಂಗ ಕಟ್ಟುತ್ತಿದ್ದರು ಎಂಬುದು ರೋಮಾಂಚನಗೊಳಿಸುವ ಸಂಗತಿ. ವಚನ ಸಾಹಿತ್ಯದಲ್ಲೂ ಅದರ ಉಲ್ಲೇಖ ಬರುತ್ತದೆ. ಬಗ್ಗಿ ಕೆಲಸ ಮಾಡುವವರಿಗೆ ಅನಾನುಕೂಲವಾಗುವ ಕಾರಣ ಕೃಷಿ, ಗುದ್ದಲಿ ಕಾಯಕದವರು ರಟ್ಟೆಗೆ ಕಟ್ಟುವ ಪರಿಪಾಠವಿತ್ತು. ಗದುಗಿನ ಪೂಜ್ಯ ಶಿವಾನಂದ ಸ್ವಾಮಿಗಳು ಬಿಜಾಪುರದ ಮಲ್ಲಿಕಾರ್ಜುನ ಸ್ವಾಮಿಗಳು ರಟ್ಟೆಗೆ ವಸ್ತ್ರದಲ್ಲಿ ಇಷ್ಟಲಿಂಗ ಕಟ್ಟಿರುವ ಫೋಟೋ ಸಾಕಷ್ಟಿವೆ.

ಶಿವಾಜಿ ಮಹಾರಾಜರ ವಂಶಸ್ಥರು ಲಿಂಗಾಯತರಿರಬೇಕು ಎಂಬುದಕ್ಕೆ ಡಾ॥ಶಿವಗೌಡ ಪಾಟೀಲರು ಪ್ರಸ್ತಾಪಿಸಿರುವ ಒಂದು ಮಾತು ನನಗೆ ಬಹು ಸಂತೋಷ ತಂದಿದೆ. ಕೆಳದಿ ಚನ್ನಮ್ಮಾಜಿ ಕುರಿತು ನಾನು ಕಾದಂಬರಿ ಬರೆಯುವಾಗ ನನ್ನಲ್ಲಿ ಈ ಊಹೆ ಮೂಡಿರಲಿಲ್ಲ. ಶಿವಾಜಿ ಮಹಾರಾಜರ ಕಡೆಯ ಮಗ ರಾಜಾರಾಮರನ್ನು ಕೊಲ್ಲಲು ಔರಂಗಜೇಬ ಬೆನ್ನು ಹತ್ತಿದಾಗ ಅವರು ಆಶ್ರಯ ಕೋರಲು ಹೋದುದು ಕೆಳದಿಯ ಚೆನ್ನಮ್ಮಾಜಿಯಲ್ಲಿ! ಅದಕ್ಕೆ ಮೊದಲು ಕೆಳದಿ ಸಾಮ್ರಾಜ್ಯಕ್ಕೆ ಸೇರಿದ ಗಡಿಯ ಗ್ರಾಮಗಳಲ್ಲಿ ಶಿವಾಜಿಯ ಸೈನಿಕರು ಗ್ರಾಮಸ್ಥರನ್ನು ಲೂಟಿ ಮಾಡಿದಾಗ ಚನ್ನಮ್ಮಾಜಿ ಪತಿಯ ಸಂಗಡ ಹೋಗಿ ಆ ಜನರಿಗೆ ಸಾಂತ್ವನ ನೀಡಿ, ಪರಿಹಾರ ವಿತರಿಸಿ ಬರುತ್ತಾಳೆ. ಇದೇ ಕಹಿ ನೆನಪಿನಿಂದಲೇ ಮಂತ್ರಿಗಳು ರಾಜಾರಾಮನಿಗೆ ಆಶ್ರಯ ನೀಡುವುದು ಬೇಡ ಎನ್ನುತ್ತಾರೆ. ಆದರೆ ವೀರ ರಾಣಿ ಚನ್ನಮ್ಮನು "ಆಶ್ರಯಕ್ಕೆ ಬಂದವರನ್ನು ರಕ್ಷಿಸುವುದು ರಾಜ ಧರ್ಮ ಎನ್ನುವುದೇ ಅಲ್ಲದೆ ಸ್ವದೇಶೀಯರನ್ನು ರಕ್ಷಿಸುವುದು ಕರ್ತವ್ಯ" ಎನ್ನುತ್ತಾಳೆ. ಆಕೆಯ ಈ ಧೋರಣೆಯಲ್ಲಿ ದೇಶಪ್ರೇಮವನ್ನಷ್ಟೆ ನಾನು ಗುರುತಿಸಿದ್ದೆ. ಆದರೆ ಶಿವಾಜಿ ವಂಶಸ್ಥರು ಲಿಂಗಾಯತರು ಎಂಬುದನ್ನು ತಿಳಿದಾಗ ಸ್ವಧರ್ಮೀಯರ ರಕ್ಷಣೆ ಅತ್ಯಂತ ಮುಖ್ಯ ಕರ್ತವ್ಯ ಎಂಬುದನ್ನು ಕಾಣಬಹುದು. ಔರಂಗಜೇಬನಂತಹ ಬಲಶಾಲಿ, ಕ್ರೂರ ದೊರೆಯನ್ನು ಎದುರು ಹಾಕಿಕೊಂಡು ರಾಜಾರಾಮನಿಗೆ ಆಶ್ರಯ ನೀಡಿದುದಲ್ಲದೆ ತಮಿಳು ನಾಡಿನಲ್ಲಿದ್ದ ತನ್ನ ಸಂಬಂಧಿಗಳ ಮನೆಯಲ್ಲಿ ಆತನನ್ನು ಮುಚ್ಚಿಟ್ಟು ಕೂಟ ಯುದ್ಧದ ಮೂಲಕ ಔರಂಗಜೇಬನ ಕಡೆಯಿಂದ ಬಂದ ಒಂದು ಲಕ್ಷ ಜನರ ಸೈನ್ಯವನ್ನು ಎದುರಿಸಿ ಹಿಮ್ಮೆಟ್ಟಿಸುತ್ತಾಳೆ. ಸೋಲನ್ನೇ ಕಾಣದ ಔರಂಗಜೇಬನಿಗೆ ಪ್ರಥಮ ಬಾರಿಗೆ ಸೋಲನ್ನು ಉಣ್ಣಿಸಿದ ಧೀರಳು ಕೆಳದಿಯ ಚನ್ನಮ್ಮಾಜಿ. ರಾಜಾರಾಮರಿಗೆ ನಿಂತು ಪಟ್ಟಗಟ್ಟಿಸುತ್ತಾಳೆ. ಅಷ್ಟೊತ್ತಿಗೆ ಆಗಲೇ ಆಕೆಯ ಪತಿ ಸೋಮಶೇಖರ ನಾಯಕ ಮೋಸದಿಂದ ಕೊಲ್ಲಲ್ಪಟ್ಟು ಚೆನ್ನಮ್ಮ ವಿಧವೆಯಾಗಿರುತ್ತಾಳೆ ಎಂಬ ಅಂಶ ಆಕೆಯ ವ್ಯಕ್ತಿತ್ವವನ್ನು ಇನ್ನಷ್ಟು ಉಜ್ವಲಗೊಳಿಸುತ್ತದೆ. ಈ ಕಥೆಗೆ ಸಾಕ್ಷಿಯಾಗಿದೆ - ಕೆಳದಿಯ ದೇವಾಲಯದಲ್ಲಿರುವ ವಿಜಯ ಸ್ತಂಭ; ಅದರ ಮೇಲೆ ಕೆತ್ತಲ್ಪಟ್ಟ ರಾಣಿ ಚನ್ನಮ್ಮ ಆಕೆಯ ಸೇವಕಿ, ರಾಜಾರಾಮರ ಚಿತ್ರಗಳು. ಭಯಂಕರ ವಿಪತ್ತನ್ನು ಎದುರು ಹಾಕಿಕೊಂಡು ರಾಜಾರಾಮರಿಗೆ ಆಶ್ರಯ ಕೊಡಬೇಕಾದರೆ ಆತ ತನ್ನ ಧರ್ಮದವರು ಎಂಬ ಅಂಶವೂ ಪ್ರಮುಖವಾಗಿ ಕೆಲಸ ಮಾಡಿರಬಹುದು. ರಾಜರ್ಷಿ ಶಾಹು ಮಹಾರಾಜರು ದಲಿತರ ಉದ್ಧಾರಕ್ಕೆ ಹಲವಾರು ಯೋಜನೆ ಹಾಕಿದ ಕ್ರಾಂತಿಪುರುಷ. ಅವರಿಗೆ ಅರಿಯದಂತೆ ಬಸವ ಚೈತನ್ಯ ಶಾಹು ಮಹಾರಾಜರಲ್ಲಿ ಕೆಲಸ ಮಾಡಿರಬಹುದು. ಅಲ್ಲಮ ಪ್ರಭುಗಿರಿಗೆ ಹೆದ್ದಾರಿಯಿಂದ ಸೀದಾ ಹೋಗಲು ಶಾಹು ಮಹಾರಾಜರು ಒಂದು ರಸ್ತೆಯನ್ನು ಗುಡ್ಡಗಳಲ್ಲಿ ಮಾಡಿಸಿದ್ದಾರೆ. ಇದಕ್ಕೆ ಕಾರಣ ಪ್ರಭು ದೇವರನ್ನು ಕುರಿತ ಭಕ್ತಿಯೂ ಇದ್ದಿರಬಹುದು. ನಾವು ತುಂಬಾ ಖರ್ಚುಮಾಡಿ. ಜೆ.ಸಿ.ಬಿ ನೆರವಿನಿಂದ ಕೆಟ್ಟು ಹೋಗಿದ್ದ ಆ ರಸ್ತೆಯನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿ ಮಾಡಿಸಿದ್ದಲ್ಲದೆ [ಮಣ್ಣಿನ ರಸ್ತೆಯೇ ಇದೆ. ಡಾಂಬರ್ ರಸ್ತೆ ಮಾಡಿಸಲು ಜಿಲ್ಲಾ ಪಂಚಾಯತ್‌ದವರೊಡನೆ ವ್ಯವಹರಿಸಬೇಕಾಗಿದೆ.] ಅದಕ್ಕೆ ಶಾಹು ಮಹಾರಾಜ

ರಸ್ತೆ ಎಂದೇ ಹೆಸರಿಟ್ಟು, ಅಲ್ಲಿ ಬೋರ್ಡ್ ಹಾಕಿಸಿದ್ದೆವು. ಕಲ್ಯಾಣ ಪರ್ವದಲ್ಲಿ ನಮಗೆ ತಿಳಿಯಿತು. ಶಿವಾಜಿ ವಂಶದ ಹಿರಿಯರು ಲಿಂಗಾಯತರೆಂಬುದಾಗಿ.

ಶಾಹು ಮಹಾರಾಜರು ಲಿಂಗಾಯತ ದೀಕ್ಷೆ ಪಡೆಯಲು ಬಯಸಿದುದಕ್ಕೂ ಈ ಸೆಳೆತವೇ ಕಾರಣವಿರಬಹುದು. ಮಹಾರಾಷ್ಟ್ರದಲ್ಲಿ ಡಾ|| ಅಂಬೇಡ್ಕರರ ಜೊತೆ ಶಾಹು ಅವರಿಗೆ ಅಪಾರ ಸ್ನೇಹವಿತ್ತು; ಆಗ ತಾನೆ ಬೌದ್ಧ ಧರ್ಮ ಮರು ಪ್ರವೇಶಿಸಿ, ಬೆಳೆಯುತ್ತಿತ್ತು. ಆದರೂ ಶಾಹು ಅವರು ಲಿಂಗಾಯತ ದೀಕ್ಷೆಗೆ ಮನಸ್ಸು ಮಾಡಿದರು. ಕೊಲ್ಹಾಪುರದಲ್ಲಿದ್ದ ಲಿಂಗಾಯತ ವಿರಕ್ತ ಮಠದವರಲ್ಲಿ ಬೇಡಿಕೆ ಸಲ್ಲಿಸಿದ್ದರು. ಎರಡು ವಾದಗಳಿವೆ. 1.ಶಾಹು ಅವರು ಬರುತ್ತೇನೆ ಎಂದರೂ ಮಠಾಧೀಶರು ದೀಕ್ಷೆ ಕೊಡಲು ಒಪ್ಪಲಿಲ್ಲ ಎಂಬುದು ಒಂದು ವಾದ. ಬಹುಶಃ ಮೂಲ ಧರ್ಮದ ಸಂಪರ್ಕ ಕಡಿದುಹೋದ್ದರಿಂದ ಅವರು ಮಾಂಸಾಹಾರಿಗಳಾಗಿದ್ದಿರಬಹುದು. ಅದಕ್ಕೇ ಮಠಾಧೀಶರು ಒಪ್ಪಿರಲಿಕ್ಕಿಲ್ಲ ಅಥವಾ ಅಲ್ಲಿಗಾಗಲೇ ಲಿಂಗಾಯತ ಮಠಾಧೀಶರಿಗೆ ಬಸವ ತತ್ತ್ವದ ಸ್ಪರ್ಶವೇ ಇಲ್ಲದೆ ಅವರೆಲ್ಲ ಬ್ರಾಹ್ಮಣೀಕರಣಗೊಂಡಿರಬಹುದು. 2.ಶಾಹು ಅವರ ಸಂಗಡಿಗರು, "ಲಿಂಗಾಯತರಾದರೆ ಮಾಂಸಾಹಾರ ಬಿಡಬೇಕಾಗುತ್ತದೆ. ಸಮೂಹದವರೆಲ್ಲರೂ ಬಿಡಲಾರರು ಎಂದು ಬಿಡಿಸಿದರು." ಎಂಬುದು ಇನ್ನೊಂದು ವಾದ.

ಶಾಹು ಅವರು ಲಿಂಗಾಯತ ದೀಕ್ಷೆಗೆ ಮನಸ್ಸು ಮಾಡಿದ್ದರ ಹಿಂದೆ ಸಹ ಒಂದು ಕಾಲದಲ್ಲಿ ಅವರ ವಂಶಿಕ ಹಿರಿಯರು ಲಿಂಗಾಯತರೇ ಇದ್ದರು ಎಂಬುದಕ್ಕೆ ಸಾಕ್ಷಿಯಾಗುತ್ತದೆ.

ಏನೇ ಇರಲಿ, ಈ ಐತಿಹಾಸಿಕ ಸಂಗತಿ ಬಗ್ಗೆ ಸಂಶೋಧನೆಯಾಗಬೇಕು. ಯಾವ ಋಣಾನುಬಂಧವೋ ಮಹಾರಾಷ್ಟ್ರ ಸರ್ಕಾರವೇ ಮೊದಲು ಬಸವ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಲು ನಿರ್ಧರಿಸಿ, ಕರ್ನಾಟಕ ಸರ್ಕಾರಕ್ಕೆ ದಾರಿ ದೀಪ ತೋರಿಸಿದೆ. ಗುರು ಬಸವಣ್ಣ-ಛತ್ರಪತಿ ಶಿವಾಜಿ ಒಂದಾಗಿ ಕರ್ನಾಟಕ- ಮಹಾರಾಷ್ಟ್ರ ಸಂಸ್ಕೃತಿ ಒಂದಾಗಿ, ಕನ್ನಡ-ಮರಾಠಿ ಸವತಿಯರಾಗಿ ಕಿತ್ತಾಡದೆ ಅಕ್ಕ ತಂಗಿಯರಾಗಿ ಬಾಳುವಂತಹ ಬೆಸುಗೆ ಮೂಡಿದರೆ ಎಲ್ಲರಿಗೂ ಸಂತೋಷ!



ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ
ಗುರುದೇವ, ಲಿಂಗಾನಂದ ಹೆಸರು ಅಮರವಾಗಿದೆ
ಸಚ್ಚಿದಾನಂದನ ಶುಭರಕ್ಷೆಯು ತಮಗಿದೆ.

ಬೆಂಗಳೂರಿನ ಬಸವ ಮಂಟಪದಲ್ಲಿ
ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರ 12ನೆಯ ಲಿಂಗೈಕ್ಯ ಸಂಸ್ಮರಣೆ,
ಬೆಂಗಳೂರಿನ ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ
ಮುಖ್ಯ ರಸ್ತೆಯಲ್ಲಿ (ಸಿಟಿ ಆಸ್ಪತ್ರೆ ಪಕ್ಕ ಇರುವ) ಬಸವ ಮಂಟಪದಲ್ಲಿ
ಪರಮ ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು
ಅವರ 12ನೆಯ ಲಿಂಗೈಕ್ಯ ಸಂಸ್ಮರಣೆ,
ಶುಕ್ರ (ಮಾತೃ)ವಾರ, ದಿ.30-6-2006, ಸಂಜೆ. 5-30
ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಸಮ್ಮುಖ : ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ
ಸರ್ವರಿಗೂ ಆದರದ ಸ್ವಾಗತ

ಲಿಂಗಾಯತರೆಲ್ಲರೂ ಬಸವ ತತ್ತ್ವಾನುಯಾಯಿಗಳೆ !

-ಸಿದ್ಧಲಿಂಗ ದೇಸಾಯಿ, ಧಾರವಾಡ

ನಾವು ವಾಸಿಸುವ ಈ ಭೂಮಿ, ಊಹಾತೀತವಾಗಿ ವಿಶಾಲವಾದ ವಿಶ್ವದಲ್ಲಿ ಒಂದು ಅತ್ಯಂತ ಸಣ್ಣ ಜನವಸತಿಯುಳ್ಳ ಆಕಾಶಕಾಯ ಅಥವಾ ಗ್ರಹ. ಇಲ್ಲಿ ನಾಗರೀಕತೆಯೊಂದಿಗೇ ದೇವರು ಧರ್ಮದ ಕಲ್ಪನೆಗಳು ಬೆಳೆದು ಬಂದಿವೆ. ದೇವರೆಂದರೆ ಒಬ್ಬ ದೇವರಲ್ಲ, ಧರ್ಮವೆಂದರೆ ಒಂದು ಧರ್ಮವಲ್ಲ. ಈ ಭೂಮಿಯ ಮೇಲೆ ಅಸಂಖ್ಯಾತ ದೇವರುಗಳ ಮೇಲೆ ನಂಬಿಕೆಯಿಟ್ಟ ಜನ, ಅಸಂಖ್ಯಾತ ಧರ್ಮಗಳನ್ನಾಚರಿಸುವ ಜನರಿದ್ದಾರೆ. ಹಾಗೆಯೇ ಈ ದೇವರು ಹಾಗೂ ಧರ್ಮಗಳನ್ನು ನಿಯಂತ್ರಿಸುವ, ಅವುಗಳನ್ನೇ ತಮ್ಮ ಬಂಡವಲು ಮಾಡಿಕೊಂಡು ಅಧ್ಯಾತ್ಮಿಕತೆ ಬೋಧಿಸುವ ನೆವದಿಂದ ಐಶಾರಾಮವಾಗಿ ತಮ್ಮ ಜೀವನ ಸಾಗಿಸುವ ಒಂದು ವಿಶಿಷ್ಟ ವರ್ಗವೇ ಅಸ್ತಿತ್ವದಲ್ಲಿದೆ. ಇದಕ್ಕೇ ನಾವು ಪುರೋಹಿತ ವರ್ಗ ಎಂದೆನ್ನುವದು. ಈ ವರ್ಗ ಜಗತ್ತಿನ ಎಲ್ಲ ಜನಾಂಗದ, ಎಲ್ಲ ಧರ್ಮಗಳಲ್ಲೂ ಇದೆ. ಈ ಜಗತ್ತಿನಲ್ಲಿ ಎಷ್ಟು ಭಾಷೆಗಳಿವೆಯೋ ಅದಕ್ಕಿಂತ ಹೆಚ್ಚು ದೇವರುಗಳಿದ್ದಾರೆ, ಎಷ್ಟು ದೇವರುಗಳಿದ್ದಾರೆಯೋ ಅದಕ್ಕಿಂತ ಹೆಚ್ಚು ಧರ್ಮಗಳಿವೆ, ಎಷ್ಟು ಧರ್ಮಗಳಿವೆಯೋ ಅದಕ್ಕಿಂತ ಹೆಚ್ಚು ಜಾತಿಗಳಿವೆ. ಹೀಗಾಗಿ ಜಾತಿ ಜಾತಿಗಳ ನಡುವೆ, ಧರ್ಮ ಧರ್ಮಗಳ ನಡುವೆ ಜಗಳ, ದ್ವೇಷ, ಮೇಲು-ಕೀಳಾಟ, ರಕ್ತಪಾತಗಳಾಗುತ್ತಿವೆ. ಈ ಎಲ್ಲ ಸಾಮಾಜಿಕ ಅಶಾಂತಿಗೆ ದೇವರ ಕಲ್ಪನೆಯಲ್ಲದೆ ಇನ್ನೇನು ಕಾರಣ ಹೇಳಿ? ಜಗತ್ತಿನ ಇಂಥ ಆಸ್ತಿಕ ಪ್ರಧಾನ ಸಾಮಾಜಿಕ ಹಿನ್ನೆಲೆಯಲ್ಲಿ ಭಾರತ ದೇಶದ, ಈಗ ಕರ್ನಾಟಕ ರಾಜ್ಯವೆಂದು ಕರೆಯುವ ಹಾಗೂ ಇದಕ್ಕೆ ಹತ್ತಿರ ಹೊಂದಿದ ಭೂಪ್ರದೇಶಗಳಲ್ಲಿ ಅಸ್ತಿತ್ವಕ್ಕೆ ಬಂದ ಲಿಂಗಾಯತ ಧರ್ಮ ಹಾಗೂ ಅದು ಕಾಲಾಂತರದಲ್ಲಿ ಪಡೆದುಕೊಂಡ ಸ್ಥಿತ್ಯಂತರದ ಕಥೆ ಬಹಳ ಕುತೂಹಲಕಾರಿಯಾಗಿದೆ.

ಉಪನಿಷತ್ತು, ವೇದಾಂತ ಸೂತ್ರಗಳು ಹಾಗೂ ಭಗವದ್ಗೀತೆ ಎಂಬ ಪ್ರಸ್ಥಾನತ್ರಯಗಳ ಆಧಾರಿತ ವೈದಿಕ ಧರ್ಮ ಹಾಗೂ ಅವೈದಿಕವಾದ ಜೈನ, ಬೌದ್ಧ ಧರ್ಮಗಳು ಬಸವಣ್ಣನವರ ಕಾಲದಲ್ಲಿ ಪ್ರಚಲಿತವಿದ್ದವು. ಜೈನ, ಬೌದ್ಧ ಧರ್ಮಗಳನ್ನುಳಿದ ವೈದಿಕ ಧರ್ಮದಲ್ಲಿ ಅಂದರೆ ಹಿಂದೂ ಧರ್ಮದಲ್ಲಿ ಶೈವ ಹಾಗೂ ವೈಷ್ಣವ ಎಂಬ ಎರಡು ಶಾಖೆಗಳು, ಮತ್ತೆ ಕಾಪಾಲಿಕ, ಪಾಶುಪತ, ಕಾಳಾಮುಖ ಮೊದಲಾದ ಶೈವ ಪಂಥಗಳು, ಅದರಂತೆ ವೀರವೈಷ್ಣವ ಮೊದಲಾದ ವೈಷ್ಣವ ಪಂಥಗಳು ಪುರೋಹಿತರ ಕೌಶಲ್ಯದ ಮೇಲೆ ಅವಲಂಬಿತವಾಗಿ ವರ್ಣಾಶ್ರಮ ಧರ್ಮವನ್ನು ಪಾಲಿಸುತ್ತಿದ್ದವು. ಜೈನ, ಬೌದ್ಧ ಧರ್ಮಗಳನ್ನು ನುಂಗಿದ ವೈದಿಕ ಧಾರ್ಮಿಕ ಪರಂಪರೆ ಸಮಾಜದಲ್ಲಿ ಮೇಲು-ಕೀಳುಗಳ ಅನಿಷ್ಟ ಸಂಪ್ರದಾಯವನ್ನು ಪೋಷಿಸಿಕೊಂಡು ಬರುತ್ತಿತ್ತು, ಅಂಥ ಕಾಲದಲ್ಲಿ ಅಂದರೆ ಹನ್ನೆರಡನೆಯ ಶತಮಾನದಲ್ಲಿ, ಹಿಂದೂ ಧರ್ಮದಿಂದ ಸಿಡಿದೆದ್ದು, ಸಾರಾಸಗಟಾಗಿ ವೇದಗಳನ್ನು ಧಿಕ್ಕರಿಸಿ, ಜಾತಿ ಪದ್ಧತಿಯನ್ನು ನಿರಾಕರಿಸಿ ಸಮಾಜದ ಎಲ್ಲ ಜನರಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಸಮಾನತೆಯನ್ನು ಪ್ರತಿಪಾದಿಸಿದ ಬಸವಣ್ಣನವರು ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು. ಈ ಹೊಸ ಧರ್ಮದಿಂದ ಆಕರ್ಷಿತರಾದ ಎಲ್ಲ ಧರ್ಮಗಳಲ್ಲಿಯ ಬಹುಸಂಖ್ಯಾತರು ಲಿಂಗಾಯತ ಧರ್ಮವನ್ನು ಒಪ್ಪಿಕೊಂಡರು, ಅಪ್ಪಿಕೊಂಡರು. ಆಗ ಧಾರ್ಮಿಕ ಆಚರಣೆಯ ಹಕ್ಕುಗಳೇ ಇಲ್ಲದ ಚಾತುರ್ವರ್ಣಗಳಲ್ಲೊಂದಾದ ಶೂದ್ರ ವರ್ಣೀಯರು ಅತ್ಯಂತ ಖುಷಿಯಿಂದ ಲಿಂಗಾಯತ ಧರ್ಮವನ್ನು ಸ್ವೀಕಾರ ಮಾಡಿದರು. ಇದರಿಂದ ಸಮಾಜದಲ್ಲಿ ಲಿಂಗಾಯತ ಧರ್ಮಾವಲಂಬಿಗಳು ಬಹುಸಂಖ್ಯಾತರಾದರು. ಆದರೆ ಬಸವಣ್ಣನವರ ಜೀವಿತಾವಧಿಯಲ್ಲಿ ಅವರ ತತ್ತ್ವ ಹಾಗೂ ಆಚರಣೆಯಿಂದ ಮತ್ತು ಜನಪ್ರಿಯತೆಯಿಂದ ಆಕರ್ಷಿತರಾಗಿ ಲಿಂಗಾಯತ ಧರ್ಮವನ್ನು ಸ್ವೀಕರಿಸಿದ ಆಂಧ್ರದ ಆರಾಧ್ಯ ಬ್ರಾಹ್ಮಣ ಪಂಗಡವೊಂದು ಮಾತ್ರ ಕಾಲಾಂತರದಲ್ಲಿ ತನ್ನ ವೈದಿಕ ಪರಂಪರೆಯನ್ನು ಬಿಟ್ಟುಕೊಡದೇ ಲಿಂಗಾಯತ ಧರ್ಮಕ್ಕೆ ವೈದಿಕ ಪ್ರಾಚೀನತೆ ಹಾಗೂ ಸನಾತನತೆ ತಂದುಕೊಡಲು ಬಸವ ಪೂರ್ವ ಯುಗದಲ್ಲಿ ಆಚರಣೆಯಲ್ಲಿದ್ದ "ವೀರವೈಷ್ಣವ" ಪಂಥದ ಮಾದರಿಯಲ್ಲೇ ಲಿಂಗಾಯತ ಧರ್ಮಕ್ಕೆ 'ವೀರಶೈವ' ಎಂದು ನಾಮಕರಣ

ಮಾಡಿದರು. "ವೀರಶೈವರ" ಬಗ್ಗೆ ಕ್ರಿ.ಶ 12ನೇ ಶತಮಾನಕ್ಕೆ ಪೂರ್ವದಲ್ಲಿ ಎಲ್ಲಿಯೂ ಉಲ್ಲೇಖವಿರುವದಿಲ್ಲವಾದ್ದರಿಂದ ವೀರಶೈವ, ಲಿಂಗವಂತ ಮೊದಲಾದ ಶಬ್ದಗಳು 12ನೇ ಶತಮಾನದಿಂದೀಚೆಗೆ ಬಂದಿರಬಹುದೆಂದು ಪ್ರಸುತ್ತಕ್ಕೆ ಗ್ರಹಿಸುವಾ ಎಂದು ಖ್ಯಾತ ಸಂಶೋಧಕರಾದ ಡಾ.ಎಸ್.ಸಿ.ನಂದೀಮಠರವರು ಬರೆದಿದ್ದಾರೆ. ಆಗಮಗಳಲ್ಲಿ ಐದು ಜನ ಆಚಾರ್ಯರು ನಾಲ್ಕು ಯುಗಗಳಲ್ಲೂ ಅವತರಿಸಿರುವುದಾಗಿ ಬರೆಯಲಾಗಿದೆ. ಯಾವ ಆಗಮದಲ್ಲಿ ಪಂಚಾಚಾರ್ಯರು ನಾಲ್ಕು ಯುಗಗಳಲ್ಲಿ ಅವತರಿಸಿರುವರೆಂದು ಬರೆದಿದೆಯೋ ಅದೇ ಆಗಮದಲ್ಲಿಯೇ ಅಲ್ಲಮ ಪ್ರಭು ದೇವರೂ ನಾಲ್ಕೂ ಯುಗಗಳಲ್ಲಿ ಅವತರಿಸಿದರು ಎಂದು ಬರೆಯಲಾಗಿದೆ. ಒಂದನ್ನು ಸತ್ಯವೆಂದು ಸಾಧಿಸಿದರೆ ಇನ್ನೊಂದನ್ನೂ ಸತ್ಯವೆಂದು ಪರಿಗಣಿಸಬೇಕಾಗುತ್ತದೆ. ಇದು ಕಥಾರೂಪವೇ ಹೊರತು ಚಾರಿತ್ರ್ಯಕ ಸಂಗತಿಯಲ್ಲ. ವೀರಶೈವ ಪದಕ್ಕೆ ಹಾಗೂ ಪಂಚಾಚಾರ್ಯರಿಗೆ ಸನಾತನತೆ ಹಾಗೂ ಪ್ರಾಚೀನತೆ ನೀಡಲು ಇತ್ತೀಚೆಗೆ ಯಾರೋ ಹುಟ್ಟಿಸಿದ ಕಲ್ಪಕ ಕೈಗಂಟು ಇದು. ಪುರಾಣಗಳು, ಆಗಮಗಳು ಇದೇ ಕಾಲದವೆಂದು ಕಾಲ ನಿರ್ಣಯ ಮಾಡಲಾಗುವದಿಲ್ಲ. ಪುರಾಣಗಳು ಇತಿಹಾಸವಾಗುವುದಿಲ್ಲ. ಹಾಗೆ ನೋಡಿದರೆ ವ್ಯಾಸಕೃತ ಸಂಸ್ಕೃತ "ಬಸವ ಪುರಾಣ" ಎಂಬುದೂ ನಿರ್ಮಿತವಾಗಿದೆ. ಇದರಿಂದಲೇ ಬಸವಣ್ಣನವರು, ವ್ಯಾಸನಿಗಿಂತ ಪೂರ್ವದಲ್ಲಿದ್ದರೆಂದು ಸಿದ್ಧವಾಗುವುದಿಲ್ಲವಲ್ಲ!

ಲಿಂಗಾಯತ ಹಾಗೂ ವೀರಶೈವ ಎಂದರೆ ಒಂದೇ ಎಂದು ಕೆಲವರು ವಾದಿಸುತ್ತಾರೆ, ಸಾಧಿಸುತ್ತಾರೆ. ಇದು ಅವರ ತಪ್ಪು ಗ್ರಹಿಕೆ. ಬ್ರಾಹ್ಮಣೀಯ ಪ್ರಭುತ್ವವನ್ನು ಪ್ರತಿಭಟಿಸಿ. ವೈದಿಕ ಜಾತಿಪದ್ಧತಿಯನ್ನು ತಿರಸ್ಕರಿಸಿ, 12ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಲಿಂಗಾಯತ ಧಾರ್ಮಿಕ ವ್ಯವಸ್ಥೆ ಮುಂದೆ ಕಾಲಾಂತರದಲ್ಲಿ ತನ್ನ ಮೂಲ ತತ್ತ್ವಗಳನ್ನು ಕೈಬಿಟ್ಟು ಅದು ಯಾವ ಧಾರ್ಮಿಕ ವ್ಯವಸ್ಥೆಯನ್ನು ಧಿಕ್ಕರಿಸಿತ್ತೋ ಮತ್ತೆ ಅದೇ ಮಾದರಿಯನ್ನು ಅನುಸರಿಸಿ, ಭೌಗೋಳಿಕ ಹಾಗೂ ವೃತ್ತಿಯನ್ನಾಧರಿಸಿ ಹಲವು ಪಂಗಡಗಳಾಗಿ, ಜಾತಿಗಳಾಗಿ ಹೋಳಾಗಿರುವದನ್ನು ತೆಗೆದುಕೊಳ್ಳಿ. ಕಾಲಾಂತರದಲ್ಲಿ ಅದು ಹೆಚ್ಚಾಗಿ ಮತ್ತೆ ತನ್ನ ಪೂರ್ವ ಗುಣಲಕ್ಷಣಗಳನ್ನು ಪಡೆದುಕೊಂಡು ಚಾಲ್ತಿಯಲ್ಲಿರುವ ದೀರ್ಘ ಪರಂಪರೆಯೇ ಈ ದೇಶದಲ್ಲಿದೆ. ಬಸವಣ್ಣನವರ ತರುವಾಯ ಆಂಧ್ರದ ಆರಾಧ್ಯ ಶೈವ ಧಾರ್ಮಿಕ ಪರಂಪರೆಯವರಿಂದ ಹುಟ್ಟು ಹಾಕಲ್ಪಟ್ಟ ವೀರಶೈವವೆಂಬ ವೈದಿಕ ಪಂಥ ಹಾಗೂ ಲಿಂಗಾಯತ ಧರ್ಮವೂ ಒಂದೇ ಅಲ್ಲ. ಈ ಸತ್ಯವನ್ನು ನಮ್ಮ ಎಲ್ಲ ಲಿಂಗಾಯತ ಜನಸಾಮಾನ್ಯರು, ಮುಖಂಡರು, ಧಾರ್ಮಿಕ ಸ್ವಾಮಿಗಳು ಅರಿಯಬೇಕು. ವೀರಶೈವ ಪಂಥದ ಪ್ರಾಚೀನತೆಯನ್ನು ಹಾಗೂ ಸನಾತನತೆಯನ್ನು ಪ್ರತಿಪಾದಿಸುವವರು ಬಸವ ಪೂರ್ವದ ಲಾಕುಳಶೈವ (ಲಕುಲೀಶ ಪಾಶುಪತ) ಅಥವಾ ಕಾಳಾಮುಖ ಶೈವ ಪಂಥದ ಧಾರ್ಮಿಕ ವ್ಯವಸ್ಥೆಯ ಶಿಲಾಲಿಪಿ ಹಾಗೂ ಸಾಹಿತ್ಯಾದಿ ಇನ್ನಿತರ ಸಾಕ್ಷ್ಯಾಧಾರಗಳನ್ನು ನೀಡುತ್ತಾರೆಯೇ ಹೊರತು ವೀರಶೈವದ್ದೇಯಾದ ಪ್ರಾಚೀನ ಸಾಕ್ಷ್ಯಾಧಾರಗಳನ್ನು ಒದಗಿಸುವುದಿಲ್ಲ. ಅವಾಸ್ತವ, ಅತಾರ್ಕಿಕ ಪ್ರತಿಪಾದನೆಗೆ ಸಿದ್ಧ ಹಸ್ತರಾದ ಈ ವೀರಶೈವರು ಹೇಳಿದ್ದನ್ನು ನಂಬಿ, ಈ ಲಿಂಗಾಯತರು ತಾವೂ ವೀರಶೈವರೆಂದು ಕುಣಿದಾಡುವದನ್ನು ಬಿಡಬೇಕು.

ಈ ಸತ್ಯವನ್ನು ಅರಿತುಕೊಂಡು ಅನೇಕ ಮಠಾಧೀಶರು ಈಗ ವೀರಶೈವ ಪದವನ್ನು ತೆಗೆದುಹಾಕಿ ಲಿಂಗಾಯತ ಎಂಬ ಪದವನ್ನು ಬಳಸಹತ್ತಿದ್ದಾರೆ. ಅದರಂತೆ ಉಳಿದ ಮಠಾಧೀಶರೂ ಸಹ ಎಲ್ಲೆಲ್ಲಿ ವೀರಶೈವ ಎಂಬ ಅಭಿಧಾನವನ್ನು ಉಪಯೋಗಿಸಿದ್ದಾರೆಯೋ ಅಲ್ಲೆಲ್ಲ ಲಿಂಗಾಯತವೆಂಬ ತಾತ್ವಿಕ, ತಾರ್ಕಿಕವಾದ ಶಬ್ದವನ್ನು ಚಾಲ್ತಿಯಲ್ಲಿ ತರಬೇಕಾದುದು ಬಹಳ ಅವಶ್ಯವಿದೆ. ತೀರ ಇತ್ತೀಚೆಗೆ ಲಿಂಗಾಯತ ಸಮಾಜದಲ್ಲಿ ಪ್ರಚಲಿತವಾಗಿರುವ ವೀರಶೈವ ಶಬ್ದ ಈಗ ಎಷ್ಟು ವ್ಯಾಪಕವಾಗಿ ಪ್ರಚಾರದಲ್ಲಿ ಬಂದಿದೆಯೆಂದರೆ, ಯಾರಾದರೂ "ನಮ್ಮ ಧರ್ಮ ವೀರಶೈವವಲ್ಲ ಮಾರಾಯರೆ, ಲಿಂಗಾಯತವೇ ನಮ್ಮ ಧರ್ಮದ ಹೆಸರು, ಪಂಚಪೀಠಗಳಿಗೂ, ಪಂಚಾಚಾರ್ಯರಿಗೂ ವೀರಶೈವಕ್ಕೂ, ಲಿಂಗಾಯತ ಧರ್ಮಕ್ಕೂ ಸಂಬಂಧವಿಲ್ಲ" ಎಂದು ಹೇಳಿದರೆ ಅಂಥವರನ್ನು 'ದುಷ್ಟಶಕ್ತಿಗಳು' ಎಂದು ಬ್ರ್ಯಾಂಡ್ ಮಾಡಲಾಗುತ್ತಿದೆ. ಜನರ ಮುಗ್ಧತೆ ಹಾಗೂ ಅಜ್ಞಾನವನ್ನು ದುರುಪಯೋಗ ಮಾಡಿಕೊಳ್ಳುತ್ತಿರುವ ಈ

ಆರಾಧ್ಯ ಲಿಂಗೀಬ್ರಾಹ್ಮಣ ಪಂಥವಾದ ವೀರಶೈವಾನುಯಾಯಿಗಳು ಲಿಂಗಾಯತರಿಗೆ ಮೋಸ ಮಾಡುತ್ತಿದ್ದಾರೆ ; ಬಸವಣ್ಣನವರಿಗೆ ದ್ರೋಹ ಬಗೆಯುತ್ತಿದ್ದಾರೆ. ತಮಗೆ ತಾವು ಆತ್ಮ ವಂಚನೆ ಮಾಡಿಕೊಳ್ಳುತ್ತಿದ್ದಾರೆ. 1883ರಲ್ಲಿ ಆರಂಭವಾದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, 1916 ರಲ್ಲಿ ಬೆಳಗಾಂವಿಯಲ್ಲಿ ಆರಂಭವಾದ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ(ಕೆ.ಎಲ್.ಇ.ಸೊಸೈಟಿ). ಅಷ್ಟೇ ಏಕೆ ಶ್ರೀಕರ ಭಾಷ್ಯಕ್ಕೆ ವೀರಶೈವ ಪರ ವ್ಯಾಖ್ಯಾನ ಬರೆಸಲು ಹಯವದನರಾಯರಿಗೆ ಪ್ರೇರಣೆ ನೀಡಿದ ಸರ್.ಕೆ.ಪಿ.ಪುಟ್ಟಣ್ಣ ಶೆಟ್ಟಿ ಅವರೇ ಆಗ ಮೈಸೂರು ಲಿಂಗಾಯತ ಫಂಡಿನ ಅಧ್ಯಕ್ಷರಾಗಿದ್ದರು. ಅದ್ಹೇಗೆ ಈ ವೀರಶೈವ ಪದ ಬಳಕೆಯಲ್ಲಿ ಬಂದಿತೆಂಬ ಕುತೂಹಲದ ಸಂಗತಿ, 1935ರಲ್ಲಿ ಪ್ರಕಟವಾದ "Mysore Tribes and castes" ಎಂಬ ಗ್ರಂಥದ ಪ್ರಥಮ ಸಂಪುಟ ಪುಟ 153ರಿಂದ 154ರಲ್ಲಿ ವಿಷದವಾಗಿ ಮೂಡಿ ಬಂದಿದೆ. "ಬಹುಕಾಲದಿಂದ ಪ್ರಚಲಿತವಿದ್ದ ತಮ್ಮ ಧರ್ಮದ (ಜಾತಿಯ) ಹೆಸರಿನ ಬದಲಾಗಿ ಬೇರೊಂದು ಹೊಸ ಹೆಸರಿನಿಂದ ಅದನ್ನು ಸಂಬೋಧಿಸಬೇಕೆನ್ನುವ ಬೇಡಿಕೆ ಇತ್ತೀಚೆಗೆ ಹಲವಾರು ಸಮಾಜಗಳ ಬೇಡಿಕೆಯಾಗಿದೆ. ಇದಕ್ಕೆ ಬಹುಶಃ ಆಯಾ ಸಮಾಜಗಳಲ್ಲುಂಟಾದ ಸಾಂಪತ್ತಿಕ ಸ್ಥಿತಿಗತಿಯ ಸುಧಾರಣೆ ಹಾಗೂ ಅವರಿಗೆ ಕಾಡುತ್ತಿರುವ ಶ್ರೇಷ್ಠತೆಯ ಕಲ್ಪನೆ. ಇನ್ನೂ ಹಲವಾರು ಸಂಗತಿಗಳಿಂದ ಈ ರೀತಿಯ ಬೇಡಿಕೆಯಿಡಲು ಕಾರಣವಾಗಿರಬಹುದು. ಉದಾಹರಣೆಗೆ ಹೇಳಬೇಕೆಂದರೆ-ಸಾತನಿಗಳು, (ವೈಷ್ಣವ ದೇವಾಲಯಗಳಲ್ಲಿ ಸೇವೆ ಮಾಡುತ್ತಿರುವ ಶೂದ್ರರು) ತಮ್ಮನ್ನು 'ವೆಂಕಟಾಪುರ ಬ್ರಾಹ್ಮಣರು' ಅಥವಾ ವಿಷ್ಣು ಬ್ರಾಹ್ಮಣರು ಇಲ್ಲವೆ 'ಪ್ರಪನ್ನ ವೈಷ್ಣವ ಬ್ರಾಹ್ಮಣರು' ಎಂದು ಕರೆಯಬೇಕೆಂದು ಅಪೇಕ್ಷಿಸುತ್ತಾರೆ. ಅದರಂತೆ ನಾಯಿಂದರು(ಕ್ಷೌರಿಕರು) ತಮ್ಮನ್ನು 'ನಾಯೀ ಬ್ರಾಹ್ಮಣರು' ಎಂದು ಕರೆಯಬೇಕೆಂದು ಇಚ್ಛೆ ವ್ಯಕ್ತಪಡಿಸಿದ್ದಾರೆ. ಹಾಗೆಯೇ ತಮ್ಮ ಸಮಾಜವನ್ನು 'ನೇಯ್ಗೆಯವರು' ಎಂದು ಕರೆಯದೆ 'ದೇವಾಂಗ ಬ್ರಾಹ್ಮಣರು' ಎಂದು ಕರೆಯಬೇಕೆಂದು 'ದೇವಾಂಗ ಧರ್ಮ ಪ್ರಕಾಶಿಕಾ' ಎಂಬ ಸಂಸ್ಥೆ ಬೇಡಿಕೆಯನ್ನಿಟ್ಟಿದೆ. ಪಂಚಾಳರು ತಮ್ಮನ್ನು 'ವಿಶ್ವ ಕರ್ಮಬ್ರಾಹ್ಮಣ'ರೆಂದು ಗುರುತಿಸಬೇಕೆಂದು ಗಟ್ಟಿಯಾಗಿ ಹೋರಾಡುತ್ತಿದ್ದಾರೆ. ನಾಗಮಂಡಲ ತಾಲೂಕಿನಲ್ಲಿರುವ 'ತಿರುಕುಲದವರು' ಎಂದು ಕರೆಯಬೇಕೆಂದು ಬಯಸುತ್ತಾರೆ. ಕೃಷ್ಣರಾಜಪೇಟೆ ಹಾಗೂ ಇನ್ನಿತರ ಕಡೆಗಳಲ್ಲಿರುವ 'ಲಿಂಗಾಯತರು' ತಮ್ಮನ್ನು 'ವೀರಶೈವರು' ಎಂದು ಕರೆಯಬೇಕೆಂಬ ಬೇಡಿಕೆಯನ್ನಿಟ್ಟಿದ್ದಾರೆ. ಕುರುಬ ಸಮಾಜದ ಪತ್ರಕರ್ತನೊಬ್ಬ "ಇನ್ನು ಮೇಲಿಂದ ಕುರುಬರನ್ನು "ಆರ್ಯ ಕ್ಷತ್ರಿಯ"ರೆಂದು ಕರೆಯಬೇಕೆಂದು ಸೂಚಿಸುತ್ತಾನೆ."

ಹೀಗೆ ಶೂದ್ರರು ಕೀಳರಿಮೆಯಿಂದ ಬಳಲುತ್ತಿದ್ದ ಕಾಲದಲ್ಲಿ ವೈದಿಕರಾಗಲು, ಬ್ರಾಹ್ಮಣರಾಗಲು ತಮ್ಮ ಶಕ್ತಿ ಮೀರಿ ಹೋರಾಡಿದ್ದಾರೆ. **ಅಂಥ ಹೋರಾಟದ ಪ್ರತಿಫಲವೇ 'ಲಿಂಗಾಯತರು' ವೀರಶೈವರಾದದ್ದು.** ಬಸವಣ್ಣನವರು ಕಾಲವಾದ ಕೆಲವೇ ವರ್ಷಗಳ ನಂತರ ಈ ಲಿಂಗಾಯತರನ್ನು 'ವೀರಶೈವ'ರನ್ನಾಗಿ ಮಾಡುವ ಪ್ರಕ್ರಿಯೆ ಆರಂಭವಾದರೂ ಇನ್ನೂ ಬಹುಸಂಖ್ಯಾತ ಲಿಂಗಾಯತರು, ಲಿಂಗಾಯತರಾಗಿಯೇ ಉಳಿದಿದ್ದಾರೆ. ಕೆಲವು ಲಿಂಗಾಯತರು ತಿಳಿಯದೇ ತಾವು ವೀರಶೈವರೆಂಬ ಭ್ರಮೆಗೆ ಒಳಗಾಗಿದ್ದಾರೆ. ರಾಜರಿಂದ, ಪಾಳೇಗಾರರಿಂದ ದತ್ತಿ, ದಾನಗಳನ್ನು ಪಡೆದುಕೊಂಡ ಬಸವಪೂರ್ವದ ಕಾಳಾಮುಖ, ಪಾಶುಪತ, ಲಕುಲೀಶ ಶೈವ ಪಂಥದ ಸ್ಥಾನಪತಿಗಳು, ಬಸವಣ್ಣನವರ ಕಾಲದಲ್ಲಿ ಲಿಂಗಾಯತ ಧರ್ಮಾವಲಂಬಿಗಳಾಗಿ ಈಗ ಜಂಗಮರೆಂದು ಕರೆಸಿಕೊಳ್ಳುತ್ತಿರುವ ಜನಾಂಗದವರಲ್ಲಿ ಹಲವರು, ತಾವು ಆರಾಧ್ಯರೆಂದು ಕರೆಸಿಕೊಳ್ಳುತ್ತಿರುವ ಜನಾಂಗದವರಲ್ಲಿ ಹಲವರು ತಾವು ಆರಾಧ್ಯರೆಂದು ಭ್ರಮೆಗೊಳಗಾಗಿ ಕಲ್ಲಯ್ಯ....ಮಠ, ಚೆನ್ನಯ್ಯ...ಮಠ ಎಂಬ ಅಭಿಧಾನದವರೂ ಈಗ ಕಲ್ಲಾರಾಧ್ಯ, ಚೆನ್ನಾರಾಧ್ಯರಾಗಿ ಹೆಮ್ಮೆ ಪಟ್ಟುಕೊಳ್ಳುತ್ತಿದ್ದಾರೆ. ಸದ್ಯದ ಪಂಚಪೀಠಾಧಿಕಾರಿಗಳಾರೂ ಆರಾಧ್ಯ ಪಂಗಡಕ್ಕೆ ಅಥವಾ ಅವರ ವಂಶಕ್ಕೆ ಸೇರಿದವರಲ್ಲ. ಇವರ ಶಾಲೆಯ ಪ್ರಮಾಣ ಪತ್ರಗಳಲ್ಲಿ 'ಧರ್ಮದ' ಎನ್ನುವ ಅಂಕಣದಲ್ಲಿ 'ಹಿಂದೂ ಲಿಂಗಾಯತ' ಅಥವಾ 'ಹಿಂದೂ ಲಿಂಗವಂತ' ಎಂದಿದೆಯಲ್ಲದೆ "ವೀರಶೈವ" ಎಂದು ಕಾಣಿಸಿಲ್ಲ. ಇತ್ತೀಚೆಗೆ ಈ ಎಲ್ಲ ಪಂಚಪೀಠಾಧಿಪತಿಗಳು ಎಲ್ಲ ಜಂಗಮ ಜಾತಿಯ ಜನಾಂಗವನ್ನು

ಬೇಡ-ಜಂಗಮರೆಂದು ಪರಿಗಣಿಸಿ ಪರಿಶಿಷ್ಟ ಜಾತಿಯವರಿಗೆ ಸಿಗುವ ಮೀಸಲಾತಿ ಸೌಲಭ್ಯ ನೀಡಬೇಕೆಂದು ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಅಂದರೆ ಒಂದು ಕಾಲಕ್ಕೆ ಲಿಂಗೀಬ್ರಾಹ್ಮಣರಾಗಲು ಹೆಣಗಾಡಿದ ಇವರು ಈಗ ಶೂದ್ರಾತಿ ಶೂದ್ರರಾಗಲು ಹವಣಿಸುತ್ತಿದ್ದಾರೆ. ಲಿಂಗಾಯತರ್‍ಯಾರಾದರೂ ವೀರಶೈವರೆಂದು ತಿಳಿದುಕೊಂಡರೆ ನೀವು ವೈದಿಕ ಪರಂಪರೆಗೆ ಸೇರಿದ ಸನಾತನರಾಗುತ್ತೀರಿ. ನಿಮ್ಮ ಧರ್ಮದ ಗುರುಗಳು ಶೂದ್ರರಾಗುತ್ತಾರೆ. ಈ ವೈಪರೀತ್ಯವನ್ನು ನೀವು ಖಂಡಿತಾ ಒಪ್ಪಿಕೊಂಡಂತೆ. ಆಯ್ಕೆ ನಿಮ್ಮಗೆ ಬಿಟ್ಟದ್ದು.

(ಸಾಹಿತ್ಯ ಸಿರಿ-2006, ಪುಟ 81-85)

ವೀರಶೈವವು ಬಸವ ಪೂರ್ವದ ಒಂದು ಪಂಥ

ಶರಣ.ಸಿದ್ದಲಿಂಗ ದೇಸಾಯಿಯವರು ಪ್ರಸುತ್ತ ಲೇಖನದಲ್ಲಿ (ಪುಟ - 12) 12ನೇ ಶತಮಾನಕ್ಕೂ ಪೂರ್ವದಲ್ಲಿ ಎಲ್ಲಿಯೂ ಉಲ್ಲೇಖವಿರುವುದಿಲ್ಲವಾದ್ದರಿಂದ ವೀರಶೈವ, ಲಿಂಗವಂತ ಮೊದಲಾದ ಶಬ್ದಗಳು 12ನೇ ಶತಮಾನದಿಂದೀಚೆಗೆ ಬಂದಿರಬಹುದೆಂದು ಅಭಿಪ್ರಾಯ ಪಟ್ಟ ಡಾ॥ಎಸ್.ಸಿ.ನಂದಿಮಠರ ವಿಚಾರವನ್ನು ಅನುಮೋದಿಸುವಂತೆ ಕಾಣುತ್ತದೆ. ಇದು ತಪ್ಪು, ಇಷ್ಟಲಿಂಗ, ಇದರ ಆಧಾರದ ಮೇಲೆ ರೂಪುಗೊಂಡ ಲಿಂಗಾಯತ, ಲಿಂಗವಂತ ವಚನ ಸಾಹಿತ್ಯವು ಪ್ರತಿಪಾದಿಸುವ ತತ್ತ್ವಗಳು. ವೀರಶೈವ ಪದ ವಚನಗಳಲ್ಲಿ ಉಲ್ಲೇಖವಾಗಿದೆ. ಶೈವದ ಒಂದು ಪಂಥವಾದ ವೀರಶೈವ ಮೂಲದಿಂದ ಬಂದ ಜನರು, ಮುಖ್ಯವಾಗಿ ಆರಾಧ್ಯ ಬ್ರಾಹ್ಮಣರು ವೈದಿಕ ಮತ್ತು ಶೈವದ ನಂಬಿಕೆ ಮತ್ತು ಆಚರಣೆ ತಂದು ತೂರಿಸಿ ಲಿಂಗಾಯತ ಧರ್ಮದ ಶುಚಿಯನ್ನೂ ಕೆಡಿಸುತ್ತಿದ್ದುದರಿಂದ ಶರಣರು ವಚನಗಳಲ್ಲಿ ವೀರಶೈವರ ವರ್ತನೆಗಳನ್ನು ತೀವ್ರವಾಗಿ ಖಂಡಿಸಿದ್ದಾರೆ. 'ವೀರಶೈವ'ನಾಗಿ ಹುಟ್ಟಿದವನು ದೀಕ್ಷೆ ಪಡೆದುಕೊಂಡ ಇತರ ವರ್ಗದ ಲಿಂಗಾಯತರಿಗಿಂತಲೂ ಶ್ರೇಷ್ಠ ಎಂದು ಬೀಗುತ್ತಿದ್ದುದನ್ನು, ವೀರಶೈವರ ಸ್ಥಾವರ ಲಿಂಗ ಪ್ರೇಮವನ್ನು, ಸಹಸ್ರ ಬಿಲ್ವಾರ್ಚನೆ, ಸಹಸ್ರ ಕುಂಭಾಭೀಷೇಕ ಇತ್ಯಾದಿ ಖಂಡಿಸಿ ತನ್ನ ತಾನರಿತವನು ಮಾತ್ರ ವೀರಶೈವಾಗ್ರಗಣ ನೋಡಾ. ಎನ್ನುತ್ತಾರೆ. ವೀರಶೈವವೆಂಬ ಬಸವ ಪೂರ್ವದ ಪಂಥದವರು ಬಂದು ಗುರು ಬಸವ ಸಂಸ್ಥಾಪಿತ ಲಿಂಗಾಯತ ಧರ್ಮದ ಪರಿಶುದ್ಧತೆ ಹಾಳು ಮಾಡಿದ್ದಾರೆಯೇ ವಿನಾ ವೀರಶೈವ ಪದ 12ನೇ ಶತಮಾನದ ನಂತರದ್ದಲ್ಲ.

-ಮಾತಾಜಿ

ಗುರು ಲಿಂಗಾನಂದರ ಸಂಕಲ್ಪ ಸಿದ್ಧಿ

ಪೂಜ್ಯ ಸದ್ಗುರು ಲಿಂಗಾನಂದರ ಕರುಣ ಪ್ರಸಾದ
ಮಾತಾಜಿಯ ಗುರು ನಿಷ್ಠೆಗೆ ಅಪ್ಪ ಬಸವಣ್ಣ ಒಲಿದ ॥ಪಲ್ಲವಿ॥

ಮಾತಾ ಪಿತರ ಮಮತೆ ತೊರೆದರು
ಬಂಧು ಬಳಗದ ನಂಟು ಹರಿದರು
ಸಿರಿಸೌಖ್ಯದ ಆಸೆ ಜರಿದರು
ವಚನ ಶಾಸ್ತ್ರದ ರಸವ ಸವಿದರು

ಬಸವ ತತ್ತ್ವಕೆ ಮನವ ನೀಡಿದರು
ಸದ್ಗುರುಗಳ ವಾಣಿಗೆ ಮಣಿದರು
ವಚನ ಪ್ರವಚನ ಮಾಡಲು ಕಲಿತರು
ಬಸವ ಬಳಗದ ಮನವ ಗೆಲಿದರು

ಮಾತೆ ಮಹಾದೇವಿಯವರ ಚಿಂತನೆ
ಬಸವ ಧ್ಯಾನಕೆ ಮೂಲವಾಯಿತು
ದಿವ್ಯ ರತ್ನವೊಂದು ಸಿಕ್ಕಿತೆಂದು
ಪೂಜ್ಯ ಗುರುಗಳು ನಲಿದರು

ಸದ್ಗುರುಗಳ ಕರುಣೆಯಾಯಿತು
ಶರಣರ ನುಡಿ ಅನುಭಾವವಾಯಿತು
ಬಸವ ಧರ್ಮ ಪ್ರಚಾರದ ಕಾರ್ಯಕೆ
ಹೊರಟರು ವಚನದ ಗಂಟು ಹೊತ್ತು

ಬಸವ ಬೆಳಗಿಗೆ ಹೊಳೆವ ಮಣಿಯು
ಪೂಜ್ಯ ಮಾತೆಯು ಆಡಿದ ನುಡಿಯು
ನುಡಿದಂತೆ ಇರಲು ಅವರ ನಡೆಯು
ಹರಿಯಿತು ಬಸವಾಮೃತದ ಹೊಳೆಯು

ದೈವೀ ಶಕ್ತಿ ಅವರಿಗೆ ಒಲಿಯಿತು
ಜಗಕ್ಕೆಲ್ಲ ಹರಡಿತು ಜಯಕಾರ ಹಾಕಿತು
ಶರಣ ಮೇಳದ ಸತ್ಸಂಗ ಕುಣಿದಾಡಿತು
ಲಿಂಗದೇವನ ವಾಣಿ ಹೌದೆಂದು ಕೂಗಿತು

-ಅಡವೆಪ್ಪ.ಎಸ್.ಪಟ್ಟೆ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ
811ನೆಯ ಲಿಂಗೈಕ್ಯ ದಿನಾಚರಣೆ



ಭಾನು(ದೇವ)ವಾರ ದಿ. 30-7-2006 ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ

ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ ಜನೋಪಕಾರಿ

ದೊಡ್ಡಣ್ಣ ಹಾಲ್

(ಹಿಂದಿನ ಅಪ್ಸರಾ ಟಾಕೀಸ್, ಚಂದ್ರ ಭವನ ಹೋಟೆಲ್ ಮುಂಭಾಗ)

ಶರಣರ ಬರುವೆಮಗೆ ಪ್ರಾಣ ಜೀವಾಳ

ಶ್ರಾವಣ ಮಾಸ-ಶರಣ ಮಾಸ
ಪವಿತ್ರ ಮಾಸ ಆಚರಣೆ ಮತ್ತು ಬಸವ ಪಂಚಮಿ ವ್ರತ

ಬಸವ ಗುರು ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಯಾವ ದಿನವೂ ಅಶುಭವಲ್ಲ ಶುಭವೂ ಅಲ್ಲ; ಪವಿತ್ರವಲ್ಲ ಅಪವಿತ್ರವೂ ಅಲ್ಲ. ವ್ಯಕ್ತಿಯು ಮಾಡುವ ಕ್ರಿಯೆಗಳಿಂದ ಸಮಯವು ಶುಭ-ಅಶುಭ ಎನ್ನಿಸಿಕೊಳ್ಳುವದು. ಒಂದು ನಿಯಮಕ್ಕೆ, ಶಿಸ್ತಿಗೆ ಸ್ವಯಂ ಪ್ರೇರಣೆಯಿಂದ ಬದ್ಧರಾಗಲು ಕೆಲವೊಂದು ಆಚರಣೆಗಳು ಅಗತ್ಯ. ಆ ದೃಷ್ಟಿಯಿಂದ ಶ್ರಾವಣ ಮಾಸವು ಧಾರ್ಮಿಕವಾಗಿ ಪವಿತ್ರ ಮಾಸ (ಮುಸ್ಲಿಮರಿಗೆ ರಂಜಾನ್ ಇದ್ದಂತೆ) ಎಂಬ ನಂಬಿಕೆ ಲಿಂಗಾಯತ ಸಮಾಜದಲ್ಲಿ ರೂಢಿಗೊಂಡಿದೆ. ಇದಕ್ಕೆ ಇನ್ನೊಂದು ಕಾರಣವೂ, ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯಂದು - ಎಂಬುದು ಇರಬಹುದು. ಆದ್ದರಿಂದ ಬಸವ ಪಥಿಕರು ಶ್ರಾವಣ ಶುದ್ಧ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ 33 ದಿವಸಗಳ ಕಾಲ ನಿತ್ಯವೂ ಬೆಳಿಗ್ಗೆ ಸಂಜೆ 2 ಸಲ ಲಿಂಗಾರ್ಚನೆ, ಬಸವ ಗುರು ಪೂಜೆ, ವಚನ ಸಾಹಿತ್ಯ ಪಾರಾಯಣ-ಪಠಣ (ಸೂಕ್ತ ಜ್ಞಾನವು ಲಭ್ಯವಾಗುತ್ತಿದ್ದರೆ ಪ್ರವಚನ ಶ್ರವಣ) ಮಾಡುವುದು ಅತ್ಯಂತ ಶ್ರೇಯಸ್ಕರ. ಈ ಅವಧಿಯಲ್ಲಿ ಅಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು. ಆಗ ಮಾತ್ರ ಶ್ರಾವಣ ಮಾಸವು ಶ್ರವಣ ಮಾಸವಾಗುವುದು ಮಾತ್ರವಲ್ಲ ಶರಣ ಮಾಸವೇ ಆಗುತ್ತದೆ.

ಬಸವ ಪಂಚಮಿ ವ್ರತ

ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು. (30-7-1196) ಆದ್ದರಿಂದ ಬಸವ ಪಂಚಮಿ ವ್ರತವನ್ನು, ಸದ್ಭಕ್ತರು ಕೈಗೊಳ್ಳುವುದು ಒಳ್ಳೆಯದು. ಶ್ರಾವಣ ಅಮವಾಸ್ಯೆಯ ಮರುದಿವಸ, ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಅದನ್ನು ಮತ್ತು ಬಸವ ಮಂಟಪವನ್ನು ಸುಂದರವಾಗಿ ಅಲಂಕರಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಸ್ನಾನ ಮತ್ತು ಇಷ್ಟಲಿಂಗಾರ್ಚನೆ ಮಾಡಿ, ಬಸವ ಗುರು ಪೂಜೆಯನ್ನು ಮಾಡಬೇಕು. ಪ್ರತಿಪದೆಯ ದಿನ ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮಾಡಬೇಕು. ಉಳಿದ ದಿನ ಬೆಳಿಗ್ಗೆ-ಸಂಜೆ 108 ಬಸವಲಿಂಗ ಮಂತ್ರ ಪಠಣ ಮಾಡಿ, ಆರು ದಿವಸಗಳ ಕಾಲ ಬಸವಣ್ಣನವರ ವಚನಗಳನ್ನು ಬೆಳಿಗ್ಗೆ54 ಸಂಜೆ54ರ ರತೆ ಭಾಗ ಮಾಡಿ ಪಾರಾಯಣ-ಪಠಣ ಮಾಡಬೇಕು. ಬಸವ ಪಂಚಮಿ ದಿನ ತಮ್ಮ ಮನೆಯಲ್ಲಿ ಮಾತ್ರವಲ್ಲ ಸಾಮೂಹಿಕವಾಗಿ ನಡೆಯುವ ಶರಣ-ಸಮಾಗಮದಲ್ಲಿ ಪಾಲ್ಗೊಂಡು ಧರ್ಮಪಿತರಿಗೆ ಶ್ರದ್ಧಾಂಜಲಿ ಸಲ್ಲಿಸಬೇಕು.

ಬಸವ ಪಂಚಮಿ ಮರುದಿನ ತಾಯಿ ನೀಲಾಂಬಿಕೆ ಲಿಂಗೈಕ್ಯರಾದ ನೀಲಮ್ಮ ಷಷ್ಠಿಯ ದಿನ. ಅಂದು ಬೆಳಿಗ್ಗೆ ಪೂಜೆ-ಪಾರಾಯಣ ಪೂರ್ತಿಯಾಗುತ್ತದೆ. ಶ್ರಾವಣ ಶುದ್ಧ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಗೆ ಭಾಗಿಗಳಾಗಿ ತಮ್ಮ ಬಂಧು-ಮಿತ್ರರು, ಓಣಿಯ ಜನರನ್ನು ಆಹ್ವಾನಿಸಿ ಮಹಾಮಂಗಲ ಮಾಡಿ ಎಲ್ಲರಿಗೂ ಪ್ರಸಾದ ವಿತರಣೆ ಮಾಡಬೇಕು. ದೊಡ್ಡಪ್ರಮಾಣದಲ್ಲೇ ಪ್ರಸಾದ ವಿತರಣೆ ಮಾಡಬೇಕೆಂದೇನೂ ಇಲ್ಲ. ಅವರವರ ಶಕ್ತ್ಯಾನುಸಾರ ಪ್ರಸಾದ ವಿತರಣೆ, ವಚನ ಸಾಹಿತ್ಯ ವಿತರಣೆ ಮುಂತಾದ್ದನ್ನು ಮಾಡಬೇಕು. ಬಸವ ಮಂಟಪ ಅಥವಾ ಸಾಮೂಹಿಕ ಸ್ಥಳಗಳಿದ್ದರೆ ಅಲ್ಲಿಯೇ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಬಹುದು. ಶ್ರಾವಣ ಮಾಸ ಪೂರ್ತಿ ವಚನ ಸಾಹಿತ್ಯ ಪಾರಾಯಣ ಇಟ್ಟುಕೊಂಡು ಭಾದ್ರಪದ ಚೌತಿಯ ದಿವಸ ಶ್ರಾವಣ ಮಾಸದ ವ್ರತಾಚರಣೆಯನ್ನು ಮುಕ್ತಾಯ ಮಾಡಬೇಕು.

ವಿಶ್ವಗುರು ಬಸವಣ್ಣನವರ 811ನೆಯ ಲಿಂಗೈಕ್ಯ ದಿನಾಚರಣೆ
ಭಾನು (ದೇವ)ವಾರ ದಿ. 30-7-2006ರಂದು ಬೆಳಿಗ್ಗೆ 10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (ಕ್ರಿ.ಶ.1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "ಬಸವ ಪಂಚಮಿ" ಎಂದು ಖ್ಯಾತಿವೆತ್ತಿದೆ. ಈ ವರ್ಷ 811ನೆಯ ಲಿಂಗೈಕ್ಯ ದಿನವು ಭಾನು (ದೇವ)ವಾರ ದಿ.30-7-2006ರಂದು ಒದಗಿ ಬಂದಿದೆ.

ನೀಲಮ್ಮ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆ

ಧರ್ಮಪಿತ ಬಸವಣ್ಣನವರು ಕೊಟ್ಟ ಅಮೂಲ್ಯವಾದ ಒಂದು ಧಾರ್ಮಿಕ ಲಾಂಛನ ಇಷ್ಟಲಿಂಗ. ಏಕೇಶ್ವರವಾದವನ್ನು ಪ್ರತಿಪಾದಿಸಿದ ಮಹಾಪುರುಷ ಬಸವಣ್ಣನವರು. ಇಷ್ಟಲಿಂಗದ ಮೂಲಕ ಏಕದೇವೋಪಾಸನೆಗೆ ಅನುವು ಮಾಡಿಕೊಟ್ಟರು. ನಿರಾಕಾರನಾದ ದೇವನಿಗೆ ಮನುಷ್ಯರ, ಪಶುಪಕ್ಷಿಗಳ, ಕ್ರಿಮಿ ಕೀಟಗಳ ಆಕಾರ ಕೊಡುವುದು ಸೃಷ್ಟಿಕರ್ತ ಲಿಂಗದೇವನಿಗೆ ಮಾಡುವ ಅಪಚಾರವಾಗುವುದೆಂದು ಸಾರಿ, ವಿಶ್ವದಾಕಾರದಲ್ಲಿ ದೇವನನ್ನು ಪೂಜಿಸಲು ಕಲಿಸಿದರು. ಇಷ್ಟಲಿಂಗವನ್ನು ಗಣಲಾಂಛನವಾಗಿ ಮಾಡಿ, ಜಾತಿ-ವರ್ಣ-ವರ್ಗರಹಿತ ಧರ್ಮ ಸಹಿತ ಶರಣ ಸಮಾಜ ರಚನೆಗೆ ಅನುಕೂಲವಾಗುವ ಲಿಂಗಾಯತ ಧರ್ಮವನ್ನು ಕೊಟ್ಟರು.

ಪವಿತ್ರ ಹಬ್ಬ ನೀಲಮ್ಮ ಷಷ್ಠಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಶರಣ ಬಂಧುಗಳು ಮಾಡುವುದು ಕಡ್ಡಾಯವಾದ ಕರ್ತವ್ಯವಾಗಿರುವುದು. ಆದ್ದರಿಂದ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಸೋಮ(ಶಿವ)ವಾರ ದಿ.31-7-2006ರಂದು ಬೆಳಿಗ್ಗೆ 10 ಗಂಟೆಗೆ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ, ಉಪನ್ಯಾಸ ಮತ್ತು ನಂತರ ಗಣಪ್ರಸಾದ(ಭೋಜನ)ವನ್ನು ಏರ್ಪಡಿಸಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗಿಯಾಗಲು ಅನಾನುಕೂಲತೆ ಇದ್ದವರು ತಮ್ಮ ಮನೆಯವರೆಲ್ಲ ಸೇರಿ ಸಂಜೆಯ ಸಮಯದಲ್ಲಿ ಕೌಟುಂಬಿಕವಾಗಿ ಇಷ್ಟಲಿಂಗಾರ್ಚನೆ ಮಾಡಬೇಕು.

★ ಸರ್ವರಿಗೂ ಆದರದ ಸುಸ್ವಾಗತ ★

ಶರಣ ಎನ್. ಪುಟ್ಟರುದ್ರ, ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು ಪೀಠಾಧ್ಯಕ್ಷರು, ಬಸವ ಕಲ್ಯಾಣ



811ನೆಯ ಬಸವ ಲಿಂಗೈಕ್ಯ ಸಂಸ್ಮರಣೆ
ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದಲ್ಲಿ ಜನೋಪಕಾರಿ ಶ್ರೀ ದೊಡ್ಡಣ್ಣ ಶೆಟ್ಟಿ ಹಾಲ್‌ದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 811ನೆಯ ಬಸವ ಪಂಚಮಿಯ ಆಚರಣೆ ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30 ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣ ದಾಸೋಹ(ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3ರಿಂದ 4
4. 4 ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ ; ಜನೋಪಕಾರಿ ಶ್ರೀ ದೊಡ್ಡಣ್ಣ ಶೆಟ್ಟರ ಹಾಲ್‌ನಿಂದ ಹೊರಟು ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು, ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು, ಬೆನ್ನ ಮೇಲೆ ಬಸವ ರಕ್ಷೆ (ಕಾವಿಯ ಸ್ಕಾರ್ಫ್) ಹೊದ್ದು ಭಾಗವಹಿಸಬೇಕು. ಕಾರು, ದ್ವಿಚಕ್ರ ವಾಹನಗಳಿಗೆ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲೂ ಅವಕಾಶ ಉಂಟು.

ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ-ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದ್ದರಿಂದ ಇದನ್ನೇ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು, ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿ ನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿ ನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ(ಸಿಟಿ ಆಸ್ಪತ್ರೆ ಪಕ್ಕ) ಇದೆ. ಕಾರ್ಯಕ್ರಮ ಏರ್ಪಾಡಾಗಿರುವ ಜನೋಪಕಾರಿ ಶ್ರೀ ದೊಡ್ಡಣ್ಣ ಶೆಟ್ಟಿ ಹಾಲ್ ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದ ಚಂದ್ರಭವನ ಹೋಟೆಲ್ ಮುಂಭಾಗದಲ್ಲಿದೆ. ಇದು ಮೊದಲು ಅಪ್ಸರಾ ಚಲನಚಿತ್ರ ಮಂದಿರವಾಗಿದಿತ್ತು.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಕಾರ್ಯಕ್ರಮ ವ್ಯವಸ್ಥಾಪಕರು :
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ
ಬೆಂಗಳೂರು-560010
ದೂರವಾಣಿ : 080-23325335 / 23322790

ಬಸವ ಮಂಟಪಕ್ಕೆ
ಬಸ್ ಮಾರ್ಗ
ಮೆಜೆಸ್ಟಿಕ್‌ನಿಂದ
251,80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವೆ.

ಅಪ್ಪುವನಪ್ಪಿದ ವಾರಿಕಲ್ಲಂತೆ, ವಾಯುವನಪ್ಪಿದ ಪರಿಮಳದಂತೆ
ಲಿಂಗವನಪ್ಪಿದ ಶರಣನ ದೇಹಿ ಎನ್ನಬಹುದೆ?
ಅನಲನಪ್ಪಿದ ಕರ್ಪೂರದಂತೆ, ಕೂಡಲ ಚನ್ನ ಸಂಗಯ್ಯ
ನಿಮ್ಮ ಶರಣ ಬಸವಣ್ಣನ ನಿಲುವು.
-ಚನ್ನಬಸವಣ್ಣ

ಸಂಘಟನೆಯ ಸೂತ್ರಗಳು

ಲೇಖಕ : ಶರಣ.ಎಂ.ಎಸ್.ಚಂದ್ರಶೇಖರಯ್ಯ,
ಬೆಂಗಳೂರು

ವೀರಶೈವ, ಗುರು-ವಿರಕ್ತ ಮತ್ತು ಉಪಪಂಗಡಗಳು ಎಷ್ಟರ ಮಟ್ಟಿಗೆ ಸರಿ ?

ಕ್ರಿ.ಶ.1876ರಲ್ಲಿ ಮೈಸೂರು ಗೆಝೆಟೀಯರ್‌ನಲ್ಲಿ ಲಿಂಗಾಯತರ ಬಗ್ಗೆ ಪ್ರಕಟವಾದ ದಾಖಲೆಯು ಕೆಳಕಂಡಂತೆ ಇರುತ್ತದೆ (volume I, pages 476-477)

INSERTION - 1

Lingayats : About 1160, little more than forty years after the establishment of the Vaishnava faith in Mysore by Ramanujacharya, arose the well-known sect of Shiva worshippers called Lingayats, chiefly composed of the Kannada and Telugu speaking races.

Basava, the founder of the sect, whose name literally means bull, was in fact regarded as the incarnation of Nandi, the bull of Shiva. His political career has been sketched in connection with the history of the Kalachuryas. He was the son of an Aradhya Brahmin, a native of Bagewadi in Belgaum. According to the legends, he refused to wear the Brahminical thread because its investiture required the adoration of the sun, and related to Kalyana, the capital of Bijjala, where he became, as elsewhere related, the prime minister and where he founded the new sect.

Its distinctive mark was the wearing on the person of a Jangama Lingam or portable linga. It is a small blackstone, about the size of an acorn and is enshrineod in a silver box of peculiar shape, which is worn suspended from the neck or tied round the arm. The followers of Basava are properly called Lingavantas, but Lingayats has become a wellknown designation, though not used by themselves, the name Shivabhakta or Shivachar being one they generally assume.

Basava rejected the authority of Vedas and the Brahmins together with the observances of , pilgrimage and penance. These continue to be fundamental distinctions of the sect. They disapprove of child marriage but permit the remarriage of widows. He declared that all the holiness consisted in due regard for three things - Guru, Linga and Jangama- the guide, the

image and the fellow religionist. The guide confessor can be any man or woman who is in the creed; who whispers the sacred mantram in the ear of the jangama or worshipper; and hangs the image on the neck or binds it on the arm. A guru is forbidden to eat flesh, to chew betel or touch liquor and wears a kempu kavi vastra or garment dyed with red ochre. Those who adopt the extreme views of this sect are termed Veerashaivas, ultra or warrior followers of saiva system, a term which indicates their polemical zeal.

The sacred books of the sect are the Basava Purana and Channabasava Purana , written in Hale Kannada, but not of the oldest form. They consist of tales and miraculous stories regarding their gurus and saints, and of this nature is nearly all their literature, whose character is more popular than learned. The Lingayath faith soon spread through the north west of Mysore and according to the tradition, within sixty years of Basava's death or 1168-1228, it was embraced from Ulavi near Goa, to Sholapur and from Balehalli or Balehonnur (Koppa taluk) to Shivaganga (Nelamangala Taluk). It was the state - religion of the wodeyars of Mysore from 1399 to 1610 and of the Nayaks of Keladi, Ikkeri or Bidanur from 1550 to 1763. The principal Lingayat Maths in the Mysore country are the Murgi Math at Chitaldroog and the Balehonnur Math, but there are numerous others.

ಗೆಝೆಟೀಯರ್‌ನ ಮುನ್ನುಡಿಯಲ್ಲಿಯೇ ಹೇಳಿರುವಂತೆ ಗೆಝೆಟೀಯರನ್ನು ಅಂದಿನ ಮೈಸೂರು ಸರ್ಕಾರವು ತನ್ನ ಆಡಳಿತಕ್ಕೆ ನೆರವಾಗಲು, ಸಂಸ್ಥಾನದ ಅಂದಿನ ನೈಜ ಪರಿಸ್ಥಿತಿಯನ್ನು ಸಂಗ್ರಹಿಸಿ ವಿಶ್ವಾಸಾರ್ಹ ಮಾಹಿತಿಯನ್ನಾಗಿ ಉಪಯೋಗಿಸಿಕೊಳ್ಳಲು ರೂಪಿಸಿಕೊಂಡಿತ್ತು. ಇದರಲ್ಲಿ ಮಾಹಿತಿಗಳು ಆದ್ಯತೆಯಲ್ಲಿ ನ್ಯಾಯಾಲಯಗಳಲ್ಲೂ ಮಾನ್ಯತೆ ಹೊಂದುವ ಅಧಿಕೃತ ದಾಖಲೆಗಳಾಗಿರುತ್ತವೆ. ಇದು ಯಾವುದೇ ಶಿಲಾಶಾಸನ, ತಾಮ್ರ ಶಾಸನಗಳಿಗೂ ಮಿಗಿಲಾದ ದಾಖಲೆಯಾಗಿರುತ್ತದೆ.

ಮೇಲ್ಕಂಡ ದಾಖಲೆಯ ಕನ್ನಡ ಅನುವಾದವನ್ನು ಮಾಡಿದರೆ ಕೆಳಕಂಡಂತೆ ಇರುತ್ತದೆ.

INSERTION - 2

ಲಿಂಗಾಯತರು: ಕ್ರಿ.ಶ.1160ರ ಸುಮಾರಿಗೆ, ಅಂದರೆ ಮೈಸೂರು ಸಂಸ್ಥಾನದಲ್ಲಿ ರಾಮಾನುಜಾಚಾರ್ಯ ರೂಪಿತ ವೈಷ್ಣವ ಪಂಥವು ಸ್ಥಾಪನೆಯಾದ ನಲ್ವತ್ತು ವರ್ಷಗಳಿಗೂ ಸ್ವಲ್ಪ ಮೀರಿದ ಕಾಲಕ್ಕೆ, ಪ್ರಮುಖವಾಗಿ ಕನ್ನಡ ಮತ್ತು ತೆಲುಗು ಮಾತನಾಡುವ ಜನಾಂಗಗಳನ್ನೊಳಗೊಂಡ, ಶಿವನನ್ನು ಪೂಜಿಸುವ ಲಿಂಗಾಯತರು ಎಂಬ ಪ್ರಖ್ಯಾತ ಪಂಥದ ಉದಯವಾಯಿತು.

ಈ ಪಂಥದ ಸ್ಥಾಪಕರಾದ ಬಸವಣ್ಣನವರು ಶಿವನ ವಾಹನವಾದ ನಂದಿಯ ಅವತಾರವೆಂದೇ ಪರಿಗಣಿಸಲ್ಪಟ್ಟಿದ್ದರು. ಅವರ ರಾಜಕೀಯ ಜೀವನವು ಕಲಚೂರ್ಯವಂಶದ ಇತಿಹಾಸದೊಂದಿಗೆ

ಚಿತ್ರೀಕರಿಸಲ್ಪಟ್ಟಿದೆ. ಅವರು ಬೆಳಗಾವಿ ಜಿಲ್ಲೆ ಬಾಗೇವಾಡಿಯ ಒಬ್ಬ ಆರಾಧ್ಯಬ್ರಾಹ್ಮಣ ಮಗನಾಗಿದ್ದರು. ಪ್ರಚಲಿತವಿರುವ ಉಕ್ತಿಗಳ ಪ್ರಕಾರ ಅವರು ಯಜ್ಞೋಪವೀತ ಧಾರಣೆ ಮಾಡಿಸಿಕೊಳ್ಳಲು ನಿರಾಕರಿಸಿದರು. ಏಕೆಂದರೆ ಅದರ ಧಾರಣೆಯು ಸೂರ್ಯನ ಆರಾಧನೆ ಮಾಡುವುದೇ ಆಗಿತ್ತು. ನಂತರ ಅವರು ಬಿಜ್ಜಳನ ರಾಜಧಾನಿಯಾದ ಕಲ್ಯಾಣಕ್ಕೆ ತೆರಳಿ, ಬೇರೆಡೆಯಲ್ಲಿ ತಿಳಿಸಿರುವಂತೆ, ಪ್ರಧಾನಮಂತ್ರಿಯಾದರು ಮತ್ತು ಅಲ್ಲಿ ಈ ಪಂಥವನ್ನು ಸ್ಥಾಪಿಸಿದರು.

ವ್ಯಕ್ತಿಯು ತನ್ನ ಅಂಗದ ಮೇಲೆ ಇಷ್ಟಲಿಂಗವನ್ನು (ಚರಲಿಂಗವನ್ನು) ಧರಿಸುವುದೇ ಈ ಪಂಗಡದ ವೈಶಿಷ್ಟ್ಯ. ಈ ಲಿಂಗವು ಕಪ್ಪು ಶಿಲೆಯದಾಗಿದ್ದು, ಸುಮಾರು ನೇರಳೇ ಹಣ್ಣಿನ ಗಾತ್ರದ್ದಾಗಿರುತ್ತದೆ. ವಿಶಿಷ್ಟ ಆಕೃತಿಯ ಬೆಳ್ಳಿ ಪೆಟ್ಟಿಗೆಯಲ್ಲಿ ಇದನ್ನು ಇಟ್ಟು ದಾರದಿಂದ ಕೊರಳಲ್ಲಿ ಹಾಕಿಕೊಳ್ಳುತ್ತಾರೆ ಅಥವಾ ಬಟ್ಟೆಯಲ್ಲಿಟ್ಟು ತೋಳಿಗೆ ಕಟ್ಟಿಕೊಳ್ಳುತ್ತಾರೆ. ಬಸವಣ್ಣನವರ ಅನುಯಾಯಿಗಳು ಲಿಂಗವಂತರು ಎಂಬ ಪ್ರತ್ಯೇಕ ಹೆಸರಿನಿಂದ ಕರೆಯಲ್ಪಡುತ್ತಾರೆ. ತಮ್ಮ ತಮ್ಮಲ್ಲಿ ಉಪಯೋಗಿಸದೇ ಇದ್ದರೂ 'ಲಿಂಗಾಯತರು' ಎಂಬ ಹೆಸರು ಪ್ರಖ್ಯಾತವಾಗಿದೆ. 'ಶಿವಭಕ್ತರು', 'ಶಿವಾಚಾರ'ದವರು ಎಂದು ತಮ್ಮನ್ನು ಹೆಸರಿಸಿಕೊಳ್ಳುತ್ತಾರೆ.

ಬಸವಣ್ಣನವರು ಜಾತಿ ಪದ್ಧತಿ, ತೀರ್ಥಯಾತ್ರೆ, ಪ್ರಾಯಶ್ಚಿತ್ತ ಮೊದಲಾದ ಆಚರಣೆಗಳ ಸಮೇತ ವೇದಗಳ ಮತ್ತು ಬ್ರಾಹ್ಮಣರ ಅಧಿಕಾರವನ್ನು ತಿರಸ್ಕರಿಸಿದರು. ಇವು ಇಂದಿಗೂ ಈ ಪಂಗಡದ ಮೂಲಭೂತ ಮತ್ತು ವಿಶೇಷ ಲಕ್ಷಣಗಳೇ ಆಗಿವೆ. ಇವರು ಬಾಲ್ಯವಿವಾಹವನ್ನು ಒಪ್ಪುವುದಿಲ್ಲ. ಆದರೆ ವಿಧವಾ ವಿವಾಹಕ್ಕೆ ಅನುಮತಿಸುತ್ತಾರೆ. ಬಸವಣ್ಣನವರು ಗುರು (ಮಾರ್ಗದರ್ಶಕ), ಲಿಂಗ (ಇಷ್ಟಲಿಂಗ, ಕುರುಹು), ಜಂಗಮ(ಸಹಧರ್ಮಾನುಯಾಯಿ)ಗಳನ್ನು ಸೂಕ್ತ ರೀತಿಯಲ್ಲಿ ಗೌರವಿಸುವುದರಲ್ಲಿಯೇ ಎಲ್ಲಾ ಪವಿತ್ರತೆ, ಸಾರ್ಥಕತೆಯು ಇದೆಯೆಂದು ಘೋಷಿಸಿದರು. ಈ ಪಂಗಡದಲ್ಲಿ ಧರ್ಮವನ್ನು ಅರಿತ, ಸ್ತ್ರೀ -ಪುರುಷ ಬೇಧವಿಲ್ಲದೆ ಯಾರು ಬೇಕಾದರೂ ಗುರುಗಳಾಗಬಹುದು. ಇವರು ಜಂಗಮನ (ಧರ್ಮಾನುಯಾಯಿಯ) ಕಿವಿಯಲ್ಲಿ ಮಂತ್ರೋಪದೇಶವನ್ನು ಮಾಡುವರು ಮತ್ತು ಇಷ್ಟಲಿಂಗವನ್ನು ಆತನ ಕೊರಳಲ್ಲಿಯಾಗಲೀ ಅಥವಾ ಆತನ ತೋಳಿನಲ್ಲಿಯಾಗಲೀ ಧರಿಸುವರು. ಗುರುವು ಮಾಂಸವನ್ನು ಭಕ್ಷಿಸುವುದು, ತಾಂಬೂಲ ಮೆಲ್ಲುವುದು, ಮದ್ಯಪಾನ ಮಾಡುವುದು ನಿಶಿದ್ಧ. ಆತನು ಕಾಷಾಯ ವಸ್ತ್ರಧಾರಿಯಾಗಿರುತ್ತಾನೆ. ಈ ಪಂಗಡದಲ್ಲಿ ತೀವ್ರವಾದೀ ಧೋರಣೆಗಳನ್ನು ಹೊಂದಿದವರನ್ನು ವೀರಶೈವ-ತೀವ್ರಗಾಮಿ ಅಥವಾ ಶೈವ ಪಂಥದ ವೀರ ಅನುಯಾಯಿಗಳು ಎಂದು ಕರೆಯುತ್ತಾರೆ. ಈ ನಾಮಧೇಯವು ಅವರ ತೀವ್ರಗಾಮಿತನ, ದ್ವಂದ್ವಗಳನ್ನು, ವಿವಾದಗಳನ್ನು ಸೃಷ್ಟಿಸಿ ಹೋರಾಟ ನಡೆಸುವುದರಲ್ಲಿ ಇರುವ ಆಸಕ್ತಿಯ ದ್ಯೋತಕವಾಗಿದೆ.

ತೀರ ಪುರಾತನವಲ್ಲದ ಹಳೆಗನ್ನಡದಲ್ಲಿ ಬರೆದಿರುವ ಬಸವ ಪುರಾಣ ಮತ್ತು ಚೆನ್ನಬಸವ ಪುರಾಣಗಳು ಈ ಪಂಗಡದ ಪವಿತ್ರ ಗ್ರಂಥಗಳು. ಅವುಗಳು ಅವರ ಗುರುಗಳ ಮತ್ತು ಸಂತರ ವ್ಯಾಖ್ಯಾನ ಮತ್ತು ಅಲೌಕಿಕ ಕಥೆಗಳನ್ನು ಹೊಂದಿವೆ. ಸಾಮಾನ್ಯವಾಗಿ ಇವರ ಎಲ್ಲಾ ಸಾಹಿತ್ಯವು ತತ್ತ್ವ ಸಿದ್ಧಾಂತ ಮುಂತಾದ ಮನನ ಯೋಗ್ಯವಾದ ವಿಷಯಗಳಿಗಿಂತ ಹೆಚ್ಚಾಗಿ ಅವಾಸ್ತವಿಕ, ವಿಡಂಬನೆ ಮತ್ತು ವೈಭವೀಕರಣದ ಮಾರ್ಗದಲ್ಲಿ ಸಾಗುತ್ತದೆ. ಲಿಂಗಾಯತವು ತೀವ್ರಗತಿಯಲ್ಲಿ ಮೈಸೂರು ಸಂಸ್ಥಾನದ ವಾಯುವ್ಯ ಭಾಗಗಳಲ್ಲೆಲ್ಲಾ ಹರಡಿತು. ಪ್ರಚಲಿತ ಸಂಗತಿಗಳ ಆಧಾರದ ಮೇಲೆ ಹೇಳುವುದಾದರೆ ಬಸವಣ್ಣನವರು ಲಿಂಗೈಕ್ಯರಾದ ಅರವತ್ತು ವರ್ಷಗಳಲ್ಲಿಯೇ ಅಂದರೆ ಕ್ರಿ.ಶ.1168-1228ರ ಅವಧಿಯಲ್ಲಿಯೇ ಈ ಧರ್ಮವು ಉಳವಿಯಿಂದ (ಗೋವೆಯ ಸಮೀಪ) ಸೊಲ್ಲಾಪುರದವರೆಗೆ ಮತ್ತು ಬಾಳೆಹಳ್ಳಿಯಿಂದ (ಕೊಪ್ಪ ತಾಲೊಕಿನ ಬಾಳೇ ಹೊನ್ನೂರು) ಶಿವಗಂಗೆ (ನೆಲಮಂಗಲ ತಾಲ್ಲೊಕು) ಯವರೆವಿಗೆ ಹಬ್ಬಿತು. ಇದು ಕ್ರಿ.ಶ.1399ರಿಂದ 1610 ರವರೆಗೆ ಮೈಸೂರು ಸಂಸ್ಥಾನದ ಅರಸರಾದ ವಡೆಯರ್‌ರವರ ಮತ್ತು

ಕ್ರಿ.ಶ.1550 ರಿಂದ 1763ರವರೆವಿಗೆ ಕೆಳದಿ, ಇಕ್ಕೇರಿ ಅಥವಾ ಬಿದನೂರಿನ ನಾಯಕರುಗಳ ರಾಜಧರ್ಮವಾಗಿದ್ದಿತು. ಅಸಂಖ್ಯಾತ ಮಠಗಳಿದ್ದರೂ ಚಿತ್ರದುರ್ಗದ ಮುರುಘಾಮಠ ಮತ್ತು ಬಾಳೆ ಹೊನ್ನೂರು ಮಠಗಳು ಲಿಂಗಾಯತರ ಪ್ರಮುಖ ಮಠಗಳಾಗಿವೆ.

ಮೇಲ್ಕಂಡ ವರ್ಣನೆಯನ್ನು, ಕೆಲವು ಸಂಶೋಧನಾತ್ಮಕ ಕೃತಿಗಳನ್ನು ಮತ್ತು ಇಂದಿನ ಇಷ್ಟಲಿಂಗಧಾರಿ ಸಮಾಜದಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಅವಲೋಕಿಸಿದಲ್ಲಿ ಕೆಳಕಂಡ ಕೆಲವು ಮಹತ್ವದ ಅಂಶಗಳು ಗಮನಕ್ಕೆ ಬರುತ್ತವೆ.

1.ಲಿಂಗಾಯತವು ಗುರು ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟಿತು. 2. ಅಂದಿಗೆ (ಎಂದರೆ ಕಿ.ಶ.1876ಕ್ಕೆ) ವೀರಶೈವರು ಎಂಬುವವರು ಲಿಂಗಾಯತರಲ್ಲಿಯೇ ಲಿಂಗಾಯತದ ತೀವ್ರವಾದಿ ಧೋರಣೆಗಳನ್ನು ಹೊಂದಿದವರು ಎಂಬುದಾಗಿತ್ತು 3.ಅಂದಿಗೆ ಬಸವ ಪುರಾಣ ಮತ್ತು ಚೆನ್ನಬಸವ ಪುರಾಣಗಳೇ ಲಿಂಗಾಯತರ ಧರ್ಮಗ್ರಂಥಗಳು 4.ಅಂದಿಗೆ ಪಂಚಾಚಾರ್ಯರು ಮತ್ತು ಸಿದ್ಧಾಂತ ಶಿಖಾಮಣಿಗಳು ಲಿಂಗಾಯತದಲ್ಲಾಗಲೀ, ವೀರಶೈವದಲ್ಲಾಗಲೀ ಪ್ರವೇಶಿಸಿರಲಿಲ್ಲ 5. ಬಾಳೇ ಹೊನ್ನೂರು ಮಠವು ಗುರು ಬಸವಣ್ಣನವರ ಲಿಂಗಾಯತದ ಎರಡು ಪ್ರಮುಖ ಮಠಗಳಲ್ಲಿ ಒಂದಾಗಿತ್ತು. ಚಿತ್ರದುರ್ಗದ ಮುರುಘಾಮಠವು ಇನ್ನೊಂದು ಪ್ರಮುಖ ಮಠವಾಗಿತ್ತು. 6.ಗೆಝೆಟೀಯರು ಎರಡು ಸಂಪುಟಗಳನ್ನು ಹೊಂದಿದ್ದು ಅದರ ಯಾವುದೇ ಜಾತಿವಾರು ವಿಂಗಡಣೆಯ ಘಟ್ಟಗಳಲ್ಲಿಯಾಗಲೀ, ಬೇರಾವ ಕಡೆಯಲ್ಲಾಗಲೀ ಕೇವಲ ಲಿಂಗಾಯತವು ಇರುತ್ತದೆ. ವೀರಶೈವ ಪದವು ಮೇಲ್ಕಂಡ ದಾಖಲೆಯಲ್ಲಿ ಬಿಟ್ಟರೆ ಬೇರೆಲ್ಲೂ ನನಗೆ ಕಾಣಸಿಗಲಿಲ್ಲ. 7.ಲಿಂಗಾಯತ ವಾಹಿನಿಯಲ್ಲಿ ವೀರಶೈವ ಪದವನ್ನು 15ನೇ ಶತಮಾನದಿಂದ ತೇಲಿಬಿಟ್ಟಿದ್ದರೂ ಈ ಗಝೇಟೀಯರಿನ ಕಾಲದವರೆವಿಗೂ ವೀರಶೈವ ಎಂಬುವವರಿಗೂ ಗುರು ಬಸವಣ್ಣನವರೇ ಧರ್ಮದ ಕೇಂದ್ರ ಬಿಂದುವಾಗಿದ್ದರು. 8. ಜಂಗಮ ಎಂದರೆ ಸಹಧರ್ಮಾನುಯಾಯಿ ಎಂದಿತ್ತು. ಜಂಗಮವು ಇನ್ನೂ ಜಾತಿಯಾಗಿ ರೂಪಿತಗೊಂಡಿರಲಿಲ್ಲ. 9.ಅಂದಿಗೆ ಬಾಳೆ ಹೊನ್ನೂರು ಜಗದ್ಗುರುಗಳು ತಮ್ಮನ್ನು ತಾವು ಪಂಚಾಚಾರ್ಯ ಪರಂಪರೆಯಲ್ಲಿ ಇನ್ನೂ ಗುರ್ತಿಸಿಕೊಂಡಿರಲಿಲ್ಲ. 10.ಅಂದಿಗೆ ಗುರು ವಿರಕ್ತ ವಿಂಗಡಣೆಯಾಗಿರಲಿಲ್ಲ. 11. ನಮ್ಮ ಸಮಾಜದ ಇಂದಿನ ಅಸಂಘಟಿತ ಪರಿಸ್ಥಿತಿಗೆ ಕಿ.ಶ.1876ರ ನಂತರ ಆದ ಬೆಳವಣಿಗೆಗಳೇ ಪ್ರಮುಖ ಕಾರಣಗಳಾಗಿವೆ. 12. ಗಾಣಿಗ-ಲಿಂಗಾಯತ (ವೀರಶೈವ), ಸಜ್ಜನ ಲಿಂಗಾಯತ (ವೀರಶೈವ), ಹೂಗಾರ ಲಿಂಗಾಯತ, ನೊಳಂಬ ಲಿಂಗಾಯತ ಮೊದಲಾದ ಉಪಪಂಗಡಗಳಿದ್ದ ಬಗ್ಗೆ ಪ್ರಸ್ತಾಪವಿಲ್ಲ. ಇದ್ದದ್ದೇ ಆಗಿದ್ದರೆ ಲಿಂಗಾಯತವು ಅನೇಕ ಉಪಪಂಗಡಗಳನ್ನೊಳಗೊಂಡ ಪಂಗಡವಾಗಿದೆ ಎಂದು ಪ್ರಸ್ತಾಪಿಸಲೇಬೇಕಾಗಿತ್ತು. ಏಕೆಂದರೆ ಅದೂ ಕೂಡ ಅಂದಿನ ಆಡಳಿತಕ್ಕೆ ಮುಖ್ಯವಾದ ಅಂಶವೇ. 13.ಅಂದಿಗೆ ವೀರಶೈವವು ಲಿಂಗಾಯತದ ಒಂದು ಉಪಪಂಗಡವೂ ಆಗಿರಲಿಲ್ಲ. ಆದರೆ ಇಂದು ಅದು ಲಿಂಗಾಯತವೇ ಅಲ್ಲ, ಬಸವಣ್ಣನವರು ಧರ್ಮಗುರುವು ಅಲ್ಲವೇ ಅಲ್ಲ ಎಂದು ಹೇಳುವ ಮಟ್ಟದಲ್ಲಿದೆ.

14. ತದನಂತರದ ಕಾಲದಲ್ಲಿ ಆಗಿನ ಬಾಳೆ ಹೊನ್ನೂರು ಜಗದ್ಗುರುಗಳು ಸೇರಿದಂತೆ, ಕೆಲವರು ತಮ್ಮನ್ನು ವೀರಶೈವಕ್ಕೆ ಸಂಬಂಧಿಸಿಕೊಂಡು ಲಿಂಗಾಯತರಲ್ಲಿ ಅದುವರೆವಿಗೂ ಇಲ್ಲದೆ ಇದ್ದ ಹೊರಗಿನಿಂದ, ಎಲ್ಲಿಯೋ ಇದ್ದ ಯಾವುದೋ ಉದ್ದೇಶಕ್ಕೆ ಇದ್ದ ಚತುರಾಚಾರ್ಯರನ್ನು ತಂದು ಪಂಚಾಚಾರ್ಯರನ್ನಾಗಿ ಮಾಡಿ, ವೀರಶೈವಕ್ಕೆ ಸಂಬಂಧಿಸಿ ಯಾವ ಉದ್ದೇಶಕ್ಕೋ ಇದ್ದ ಒಂದು ಗ್ರಂಥವನ್ನು ಸಿದ್ಧಾಂತ ಶಿಖಾಮಣಿ ಎಂದು ನಾಮಕರಣ ಮಾಡಿ ಮತ್ತೆ ಅದೇ ವೀರಶೈವಕ್ಕೆ ಸಂಬಂಧಿಸಿ ಮತ್ತೆ ಎಲ್ಲವನ್ನು ಲಿಂಗಾಯತ ವಾಹಿನಿಯೊಳಕ್ಕೆ ಹರಿಯಬಿಟ್ಟು, ಲಿಂಗಾಯತವೇ ಅಲ್ಲ ಬಸವಣ್ಣನವರು ಅಲ್ಲ ಎಂಬ ತಿರುಗು-ಮುರುಗು ಪರಿಸ್ಥಿತಿ ಉಂಟಾಗಲು ಕಾರಣರು ಯಾರು? ಬಾಳೆ ಹೊನ್ನೂರಿನ ಅಂದಿನ ಜಗದ್ಗುರುಗಳು ಇಂತಹ ಬದಲಾವಣೆ ಮಾಡಿಕೊಳ್ಳುವ ಆವಶ್ಯಕತೆಯಾದರೂ ಏನಿತ್ತು? ಈ ಬೆಳವಣಿಗೆಗೆ ಕಾರಣರು ಯಾರು ಮತ್ತು ಕಾರಣವಾದ ಅಂಶಗಳು ಯಾವುವು? 15. ಆದರೆ ಆಶಾದಾಯಕ ಮಹತ್ವದ ಬೆಳವಣಿಗೆ ಅದೇ ಶತಮಾನ (ಇಪ್ಪತ್ತನೇ ಶತಮಾನ)ದಲ್ಲಿ ಆಗಿದೆ. ಲಿಂಗೈಕ್ಯ ಶರಣ.ಫ.ಗು.ಹಳಕಟ್ಟಿಯವರು

ಕಗ್ಗತ್ತಲೆಯಲ್ಲಿದ್ದ ವಚನ ಸಾಹಿತ್ಯವನ್ನು ಬೆಳಕಿಗೆ ತಂದದ್ದು ಮೊದಲ ಬೆಳವಣಿಗೆ; ವಚನ ಸಾಹಿತ್ಯವೇ ಲಿಂಗಾಯತದ ನಿಜವಾದ ಧರ್ಮ ಸಾಹಿತ್ಯವೆಂದು ಮನಗಂಡು, ವಚನ ಸಾಹಿತ್ಯವನ್ನು ತಲೆಯ ಮೇಲಿಟ್ಟುಕೊಂಡು, ಊರೂರು ತಿರುಗಿ ಪ್ರಚಾರ ಮಾಡಿ, ವಚನ ಸಾಹಿತ್ಯವು ಪ್ರಕಾಶಿಸಿ, ವಿಜೃಂಭಿಸಲು ಶ್ರಮಿಸಿ, ಈ ಭವ್ಯ ಪರಂಪರೆಯು ಮುಂದುವರಿಯಲು ಕಾರಣರಾದವರು ಪೂಜ್ಯ ಲಿಂಗಾನಂದ ಮಹಾ ಸ್ವಾಮಿಗಳು ಮತ್ತು ಪೂಜ್ಯ ಮಾತಾಜಿಯವರು, ಪೂಜ್ಯ ಮಾತಾಜಿಯವರ ಕ್ರಾಂತಿಕಾರಕ ಆಲೋಚನೆಗಳ ವೇಗವನ್ನು ಮನವರಿಕೆಗೆ ತಂದುಕೊಳ್ಳಲಾಗದೆ, ಸುಮ್ಮನೆ, ಬಿಮ್ಮನೆ ಕುಳಿತು, ಸಹಕರಿಸುವುದಿರಲಿ ಕೆಲವರು ಅಡ್ಡಗಾಲು ಹಾಕುತ್ತಿರುವುದು ಮತ್ತೊಂದು ಬೆಳವಣಿಗೆ.

ಇಂತಹ ಗೊಂದಲದ ಪರಿಸ್ಥಿತಿಯಲ್ಲಿ ಮಠಾಧೀಶರುಗಳು ಮತ್ತು ಸಮಾಜ ಚಿಂತಕರುಗಳು ಮಾಡಬೇಕಾದುದೇನು ? ಕೇವಲ ಒಂದು ಶತಮಾನದಿಂದೀಚೆಗೆ ಆದ ಬೆಳವಣಿಗೆಗಳನ್ನು ಮುಂದಿಟ್ಟುಕೊಂಡು ಸಮಾಜದಲ್ಲಿ ಗೊಂದಲ ಸೃಷ್ಟಿಸುವುದು ಎಷ್ಟರಮಟ್ಟಿಗೆ ಸರಿಯಾದೀತು? ಇದಕ್ಕೆಲ್ಲಾ ಮೂಲಕಾರಣ ಲಿಂಗಾಯತ ಸಮಾಜಕ್ಕೆ ಧಾರ್ಮಿಕ ಮತ್ತು ಸಾಮಾಜಿಕವಾದ ಒಂದು ಕೇಂದ್ರೀಯ ನಿಯಂತ್ರಣ ವ್ಯವಸ್ಥೆ ಇಲ್ಲದಿರುವುದು. ತುರ್ತಾಗಿ ಇದಕ್ಕೆ ಕ್ರಮ ಕೈಗೊಳ್ಳಬೇಕು.

ಸದ್ಯಕ್ಕೆ ಅಡ್ಡ ಬೆಳವಣಿಗೆಗಳನ್ನು ಒಂದು ಪಕ್ಕಕ್ಕಿಟ್ಟು ಸಮಾಜಮುಖಿಯಾದ ಬಸವ ಪಥದಲ್ಲಿ ಸಾಗಬೇಕು. ಅವಶ್ಯಕವಾದ ಬೆಳವಣಿಗೆಗಳು ಉಳಿದು ಬಸವ ಪಥದಲ್ಲಿ ಸೇರಿಕೊಳ್ಳಲು ಅರ್ಹವಾಗುತ್ತವೆ. ಅವಶ್ಯವಿಲ್ಲದವುಗಳು ಹಿಂದೆ ಉಳಿದು ಹೋಗುತ್ತವೆ. ಸಮಾಜದ ಪ್ರಗತಿಯೇ, ಸಂಘಟನೆಯೇ ಮುಖ್ಯವಾದ ಚರ್ಯೆಗಳಲ್ಲಿ ಇಂತಹ ಕ್ರಾಂತಿಕಾರಕ ದೃಷ್ಟಿಕೋನ ಅಗತ್ಯ. ಇಂದಿಗೆ ಇದರಲ್ಲಿ ಮಠಾಧೀಶರುಗಳ ಪಾತ್ರ ಮುಖ್ಯವಾಗುತ್ತದೆ. ಅವರು ಅವರ ಪಾತ್ರಗಳನ್ನು ನಿರ್ವಹಿಸದೇ ಇದ್ದಲ್ಲಿ ಅವರ ಪಾತ್ರಗಳೂ ಹಿಂದೆ ಉಳಿದು ಹೋಗಿ ಅವರ ಪಾತ್ರಗಳು ಧಾರ್ಮಿಕವಾಹಿನಿಯಲ್ಲಿ ಗೌಣವಾಗಿ ಬಿಡುತ್ತವೆ. ಇದು ಸರ್ವಕಾಲಿಕ ಸತ್ಯ. ಇದು ಆಗಿದೆ, ಆಗುತ್ತಲಿದೆ. ಒಂದು ಉದಾಹರಣೆ ಈ ಲೇಖನದಲ್ಲಿಯೇ ಕಂಡು ಬರುತ್ತದೆ. ಒಂದಾನೊಂದು ಕಾಲಕ್ಕೆ ಬಸವ ಪುರಾಣ ಮತ್ತು ಚೆನ್ನ ಬಸವ ಪುರಾಣಗಳು ಲಿಂಗಾಯತ/ ವೀರಶೈವರ ಧರ್ಮಗ್ರಂಥಗಳಾಗಿದ್ದು ಗೊತ್ತಿಲ್ಲ ಮತ್ತು ಅನುಸರಿಸುವವರು ಯಾರೂ ಇಲ್ಲ. ಇದರಿಂದ ಮನವರಿಕೆಯಾಗುವುದೇನೆಂದರೆ ಸತ್ಯವಷ್ಟೆ ಕಾಲದ ಒರೆಗಲ್ಲಿನಲ್ಲಿ ಸ್ಥಿರವಾಗಿ ಉಳಿಯುವಂತಹುದು.

1.Mysore : A Gazettcerer compiled for Government by B.Lewis Rice, Volume 1.Mysore in General year 1876 pages 476-477

2.ವೀರಶೈವ (ಲಿಂಗಾಯತ) ಧರ್ಮದ ಮಠ/ಪೀಠಗಳ ಮೂಲಾಧಾರ
ಲೇಖಕರು : ಸಿದ್ಧರಾಮ .ಸೊ.ಪುಜಾರಿ. (ಗುಡ್ಡಾಪುರ)

3.ಲಿಂಗಾಯತ, ಜೈನ ಮತ್ತು ಬ್ರಾಹ್ಮಣ ಧರ್ಮಗಳು - ಮಠಗಳ ಒಂದು ತೌಲನಿಕ ಅಧ್ಯಯನ
ಲೇಖಕರು : ಹಿರೇಮಲ್ಲೂರು ಈಶ್ವರನ್.

2006 ರ ಜೂನ್ ಸಂಚಿಕೆ ಸಂಗ್ರಹ ಯೋಗ್ಯ, ಮನನ ಯೋಗ್ಯ ಸಂಚಿಕೆ

ಶರಣ ಬಂಧುಗಳೇ,

ಲಿಂಗಾಯತ ಧರ್ಮ, ಸಮಾಜಗಳ ಇತಿಹಾಸಕ್ಕೆ ಸಂಬಂಧಪಟ್ಟ ಅತ್ಯಂತ ಮಹತ್ವಪೂರ್ಣ, ಮಾಹಿತಿ ಪೂರ್ಣ ಲೇಖನಗಳು ಜೂನ್ 2006ರ ಸಂಚಿಕೆಯಲ್ಲಿದ್ದು ತಾವು ಒಂದು ವಾಕ್ಯ ಸಹ ಬಿಡದೆ ಲಕ್ಷ್ಯಗೊಟ್ಟು ಓದಿ, ಮನನ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ.

ವಿಚಾರ ಕಿರಣ :

-ಮಾತಾಜಿ

1. ಲಿಂಗಾಯತರು ಮತ್ತು ಧರ್ಮಕ್ಷೇತ್ರಗಳು

ಒಂದು ಗಣ್ಯ ಮನೆತನದ ಮಹಿಳೆ ತನ್ನ ಮಕ್ಕಳೊಡನೆ ಬಂದರು. ಅಂದು (ದಿ.15-5-2006) ಕೂಡಲ ಸಂಗಮದಲ್ಲಿದ್ದೆ. ನಾನಿರುವ ಸಂಗತಿ ತಿಳಿದು ದರ್ಶನಕ್ಕೆ ಬಂದರು. ಭಕ್ತಿವಂತರು. ಬಸವ ಕಲ್ಯಾಣವನ್ನು ನೋಡಿದ್ದೀರಾ? ಎಂದು. ಕೇಳಿದೆ. "ಸೊಲ್ಲಾಪುರದ ತನಕ ಹೋಗಿದ್ದೆವು. ಸೊಲ್ಲಾಪುರ, ಪಂಢರಾಪುರ ಎರಡೂ ನೋಡಿದೆವು. ಕಲ್ಯಾಣಕ್ಕೆ ಹೋಗಬೇಕು ಎಂದುಕೊಂಡಾಗ "ಅಲ್ಲೇನಿದೆರೀ, ಹಾಳು ಬಿದ್ದದ ಏನು ನೋಡಾಕ ಹೋಗ್ತಿರಿ ?" ಎಂದು ಜನ ಅಂದರು. ನಾವು ಹೋಗಲಿಲ್ಲ." ಎಂದು ಉತ್ತರ ನೀಡಿದರು.

ಲಿಂಗಾಯತ ಸಮಾಜ ಪಾರ್ಶ್ವವಾಯು ಪೀಡಿತ ಸಮಾಜ; ಭಾವನೆ, ಸಂವೇದನೆಯೇ ಇಲ್ಲದಂತಹುದು. ಎಂತಹ ಆಧ್ಯಾತ್ಮಿಕ ವೈಭವದಿಂದ ಬಾಳಿ ಬದುಕಿದ ಕಲ್ಯಾಣ. ಅದನ್ನು ಪುನಶ್ಚೇತನಗೊಳಿಸಬೇಕೆಂಬ ಹಂಬಲ ಯಾರಿಗೂ ಮೂಡಲಿಲ್ಲವೆ? ಶರಣರ ಕರುಳಿನ ಕರೆ ಯಾರಿಗೂ ಕೇಳಲಿಲ್ಲವೆ?. ಎನಿಸಿ ತುಂಬಾ ಸಂಕಟವಾಯಿತು. ದುರ್ದೈವ! ಎಂದುಕೊಂಡೆ. ಯಾರದು ದುರ್ದೈವ? ಅಭಿಮಾನ ಶೂನ್ಯರಾದ ಸಮಾಜ ಬಾಂಧವರದೊ? ಇಂಥ ಭಾವ ಶೂನ್ಯರಾದ ಅನುಯಾಯಿಗಳನ್ನು ಪಡೆದ ಆದಿ ಶರಣರದೊ? ಎಂಬ ಪ್ರಶ್ನೆಗೆ ಉತ್ತರ ಹೊಳೆಯುತ್ತಿಲ್ಲ. ಜೈನರು ಕ್ಷೇತ್ರಗಳನ್ನು ಬೆಳೆಸಿರುವ ಬಗೆ ನೋಡಿದಾಗ ಲಿಂಗಾಯತ ಸಮಾಜವು ನಾಚಿಕೆಪಡಬೇಕು. ತಮ್ಮ ಧಾರ್ಮಿಕ ಕ್ಷೇತ್ರಗಳನ್ನು ಬೆಳೆಸುವ ಹಂಬಲಕ್ಕಿಂತ ಇವರಲ್ಲಿ ತಮ್ಮ ಧರ್ಮ-ಸಂಸ್ಕೃತಿಗೆ ಹೊಂದದ ಅನ್ಯ ಕ್ಷೇತ್ರಗಳಿಗೆ ಹೋಗಿ ದುಡ್ಡು ಸುರಿದು ಬರುವ ಹವ್ಯಾಸವೇ ಜಾಸ್ತಿ ಇದೆ. ತಮ್ಮ ಧರ್ಮದ ಉಳಿವು ಮತ್ತು ಬೆಳವಣಿಗೆಗಾಗಿ ಧರ್ಮಕ್ಷೇತ್ರಗಳ ಅಭಿವೃದ್ಧಿ ಅತ್ಯಂತ ಅಗತ್ಯ ಎಂಬ ಭಾವ ಏಕೆ ಲಿಂಗಾಯತ ಧರ್ಮದ ಮಠಾಧೀಶರಲ್ಲಿ ಮತ್ತು ಮುಖಂಡರಲ್ಲಿ ಬೆಳೆಯಲಿಲ್ಲವೊ? ಬಹಳವೆಂದರೆ ಸ್ಥಾನಿಕ ಪಂಥ (Loco cult) ಗಳನ್ನು ಬೆಳೆಸುವಂತೆ ತಮ್ಮ ತಮ್ಮ ಮಠದ ಸ್ಥಾಪಕರ ಗದ್ದುಗೆಗಳನ್ನು ಬೆಳೆಸಿಕೊಂಡರು. ಅವುಗಳಿಗೆ ಇಡೀ ಸಮಾಜವನ್ನು ಕಟ್ಟುವ ಸಾಮರ್ಥ್ಯವಿರದು. ಇಡೀ ಸಮಾಜಕ್ಕೆ ಹೃದಯ ಸ್ವರೂಪವಾಗುವ ಸಾಮರ್ಥ್ಯ ಕೂಡಲ ಸಂಗಮ ಮತ್ತು ಬಸವ ಕಲ್ಯಾಣಕ್ಕೆ ಮಾತ್ರ ಸಾಧ್ಯ! ಅಂತೂ ಈಗಲಾದರೂ ಆ ಬಗ್ಗೆ ಪ್ರೇರಣೆ ಉಂಟಾದುದಕ್ಕೆ ಎಷ್ಟೋ ಸಮಾಧಾನವೆನ್ನಿಸುತ್ತದೆ.

2. ಧ್ಯಾನವು ಪಲಾಯನವಾದವೆ ?

ಪ್ರಜಾವಾಣಿಯ ಬಾಳ ಬುತ್ತಿ ಅಂಕಣದಲ್ಲಿ ಓರ್ವರು ಹೀಗೆ ಬರೆದಿದ್ದರು. "ಗೌತಮ ಬುದ್ಧನು ದಿನ ನಿತ್ಯವೂ ಜನರನ್ನು ಉದ್ದೇಶಿಸಿ ಬೋಧೆ ಮಾಡುತ್ತಿದ್ದನು. ಆತನ ಉಪದೇಶ ಕೇಳಲು ಜನರು ನೆರೆಯುತ್ತಿದ್ದರು. ಬೋಧೆಯ ನಂತರ ಸಂದೇಹಗಳನ್ನು ಬುದ್ಧನ ಮುಂದೆ ಇಟ್ಟಾಗ ಉತ್ತರ ನೀಡಿ ಅವುಗಳನ್ನು ಪರಿಹರಿಸುತ್ತಿದ್ದನು. ಒಂದು ದಿವಸ ಹಾಗೆ ಬಂದ ಬುದ್ಧ ಏನೊಂದೂ ಉಪದೇಶ ಮಾಡದೆ ಮೌನವಾಗಿ ಧ್ಯಾನಕ್ಕೆ ಕುಳಿತ. ಜನರೂ ಧ್ಯಾನಕ್ಕೆ ಕುಳಿತರು. ಎಷ್ಟೋ ಹೊತ್ತಿನವರೆಗೂ ತನ್ಮಯನಾಗಿ ಕುಳಿತ ಬುದ್ಧ ಬಹಿರ್ಮುಖನಾದ ಬಳಿಕ ಏನೊಂದೂ ಮಾತನಾಡದೆ ಎದ್ದು ಹೋದ. ಆದರೆ ಧ್ಯಾನಾಸಕ್ತರಾಗಿ ಕುಳಿತ ಎಲ್ಲರಿಗೂ ಅವರ ಸಂದೇಹಗಳು ಪರಿಹಾರವಾಗಿದ್ದವು."

ಕೆಲವರು, ಕೆಲವು ಪಂಥಗಳವರು ಧ್ಯಾನದ ಮಹತ್ವದ ಬಗ್ಗೆ ಉತ್ಪ್ರೇಕ್ಷೆ ಮಾಡುತ್ತಾರೆ. ಧ್ಯಾನದಿಂದ ವೈಯಕ್ತಿಕ ಸಮಾಧಾನ, ಶಾಂತಿ ಲಭ್ಯವಾಗಹುದೇ ವಿನಾ ಸಾಮಾಜಿಕ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ವ್ಯಕ್ತಿಯು ಸಣ್ಣ ಸಣ್ಣ ಕಾರಣಗಳಿಗಾಗಿ ಉದ್ವಿಗ್ನನಾಗುತ್ತಾನೆ. ಸಂಭವಿಸದೇ ಇದ್ದರೂ ಮುಂದೇನಾಗಬಹುದೋ ಎಂಬ ಆತಂಕದಿಂದ ಹಲವಾರು ಶಾರೀರಿಕ, ಮಾನಸಿಕ ಸಮಸ್ಯೆಗಳನ್ನು ತಂದುಕೊಳ್ಳುತ್ತಾನೆ. ಅಂಥ ಉದ್ವಿಗ್ನ ಸ್ಥಿತಿಯಲ್ಲಿ ಚಿತ್ತ ಮನ ಬುದ್ಧಿಗಳು ಕೆಲಸ ಮಾಡುವುದಿಲ್ಲ. ಹೀಗಿರುವಾಗ ದೇವನ, ಗುರುವಿನ ಧ್ಯಾನ ಮಾಡುವುದರಿಂದ ಮನಸ್ಸು ಶಾಂತವೂ, ನಿಸ್ತರಂಗವೂ

ಆಗುತ್ತದೆ. ಶರೀರ - ಮನಗಳ ಮೇಲೆ ಬೀಳುವ ಒತ್ತಡ ಕಡಿಮೆಯಾಗುತ್ತದೆ. ಆರೋಗ್ಯವೂ ಸುಧಾರಿಸುತ್ತದೆ, ವಿವೇಕವೂ ನಿಚ್ಚಳವಾಗಿ ಕೆಲಸ ಮಾಡುತ್ತದೆ. ಮನಸ್ಥೈರ್ಯ ಬೆಳೆಯುತ್ತದೆ.

ಆದರೆ ಸಾಮಾಜಿಕ, ರಾಷ್ಟ್ರೀಯ ಸಮಸ್ಯೆಗಳು ಬರೀ ಧ್ಯಾನದಿಂದಲೇ ಪರಿಹಾರವಾಗುತ್ತವೆಯೆ? ಒಮ್ಮೊಮ್ಮೆ ನನಗೆ ಅನ್ನಿಸುತ್ತದೆ ಧ್ಯಾನ ಎಂಬುದು ಒಂದು ಬಗೆಯ ಪಲಾಯನವಾದ (Escapism), ಸಮಸ್ಯೆಗಳಿಗೆ ಬೆನ್ನು ತೋರಿಸಿ ಓಡಿ ಹೋಗುವ ದೌರ್ಬಲ್ಯ ಎಂಬುದಾಗಿ. ಧರ್ಮಪಿತ ಗುರು ಬಸವಣ್ಣನವರು ಇಂಥ ಪಲಾಯನವಾದಿಗಳಿಗೆ ಹೀಗೆ ಹೇಳುತ್ತಾರೆ :

ಕಣ್ಣು ಮುಚ್ಚಿ ಕನ್ನಡಿಯ ತೋರುವಂತೆ ;
ಇರುಳು ಹಗಲಿನ ನಿದ್ರೆ ಸಾಲದೆ ?
ಬೆರಳನೆಣಿಸಿ ಪರಮಾರ್ಥವ ಹಡೆವಡೆ
ಚೋದ್ಯವಲ್ಲವೆ ? ಹೇಳಾ!
ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆಯಿಲ್ಲದವರ ನಾನೇನೆಂಬೆ, ಲಿಂಗದೇವಾ?

-ಬ.ವ.ದೀ-579

ಸಮಸ್ಯೆಗಳಿಗೆ ಬೆನ್ನು ತೋರಿಸುವ ಧ್ಯಾನ ನಿದ್ರೆಯೇ ಸರಿ. ನಿಜವಾದ ಧ್ಯಾನದಿಂದ ಮನಸ್ಸು ಗಟ್ಟಿಗೊಳ್ಳಬೇಕು; ಆತ್ಮಬಲ ಬೆಳೆಯಬೇಕು. ಧೈರ್ಯವಂತಿಕೆ ಬಲಿಯಬೇಕು. ಉದಾತ್ತ ಸತ್ಯವನ್ನು ಕುರಿತು ಬುದ್ಧ, ಬಸವಣ್ಣನವರಂಥ ಚಿಂತಕರು ಧ್ಯಾನಾಸಕ್ತರಾಗುತ್ತಾರೆ ಎಂದುಕೊಳ್ಳೋಣ. ಅಂಥವರ ಅಂತರಂಗದಲ್ಲಿ ತೀವ್ರತರ ಮಂಥನ ನಡೆಯುತ್ತಿರುತ್ತದೆ. ಅದನ್ನು ನೋಡಿ ಒಬ್ಬ ಅಜ್ಞಾನಿಯೂ ಜ್ಞಾನದ ಬೆಳಕು ಸಂಪಾದಿಸದೆ ಕಣ್ಣುಮುಚ್ಚಿ ಧ್ಯಾನಕ್ಕೆ ಕುಳಿತರೆ ಅದು ತಾಮಸಿಕ ನಿದ್ರೆಯಂತಾಗುತ್ತದೆ.

ಇನ್ನು ಕೆಲವರು ಹೆಚ್ಚು ಕಾಲ ಧ್ಯಾನಕ್ಕೆ ಕುಳಿತರೂ, ಮಾಡಿದರೂ ಮನಸ್ಸಿನ ಒಳಗೇ ಚಿಂತೆ ಮಾಡುವುದರಿಂದ ಅವರ ಅಂತಃಶಕ್ತಿ ಸ್ಫುಟಗೊಳ್ಳುವ ಬದಲು ಕುಂದುತ್ತಿರುತ್ತದೆ; ಮುಖವು ನಿಸ್ತೇಜವಾಗತೊಡಗುತ್ತದೆ. ಆತ್ಮಬಲವು ಕುಸಿಯುತ್ತದೆ. ಆದ್ದರಿಂದ ಎಲ್ಲ ಸಮಸ್ಯೆಗಳಿಗೂ ಧ್ಯಾನವೊಂದೇ ಪರಿಹಾರ ಎಂದು ನಂಬಿಸುವ ಪಲಾಯನವಾದದ ಬದಲು ಜೀವನವನ್ನು ಎದುರಿಸಲು ಬೇಕಾದ ಚಿಂತನ ಶಕ್ತಿಯನ್ನು ಬೆಳೆಸಿಕೊಳ್ಳಲು ಪಾರಮಾರ್ಥ ಬೋಧಕರು ಜನರಿಗೆ ಬೌದ್ಧಿಕ ತರಬೇತಿ ಕೊಡುವುದು ನಿಜವಾದ ಪರಿಹಾರ ಎಂದು ನನಗೆ ಅನ್ನಿಸುತ್ತದೆ.

3. ದಲಿತರು ಮತ್ತು ಅಂಬೇಡ್ಕರ್ ಅಭಿಮಾನ

ದಿ.23-5-2006ರಂದು ಅಲ್ಲಮ ಪ್ರಭುಗಿರಿಯ ಮೇಲಿನ ನಮ್ಮ ಮಠದಲ್ಲಿ ಕುಳಿತಿದ್ದೆ. ಇಚಲ ಕರಂಜಿಯಲ್ಲಿ ಮಗ್ಗದ ಮೇಲೆ ಕಾಯಕ ಮಾಡುತ್ತಿರುವ ರುದ್ರಪ್ಪ ಎಂಬ ಶರಣರು ತಮ್ಮ ಅಕ್ಕ ಮುಂತಾದ ಪರಿವಾರದೊಡನೆ ದರ್ಶನಕ್ಕೆ ಬಂದರು. ಇದೇನು ಇಂಥು ರಜೆ ಇಲ್ಲ; ರಜೆ ತಗೊಂಡಿರಾ? ಎಂದೆ. "ಇಲ್ಲ ಇವತ್ತು ಸಾರ್ವಜನಿಕರಿಂದ ಪ್ರತಿಭಟನಾ ಮುಷ್ಕರ ನಡೆಯುತ್ತಿದೆ. ಮಗ್ಗಗಳಿಗೆ ರಜೆ ಕೊಟ್ಟರು. ಅದಕ್ಕೇ ಬಂದೆನು, ಎಂದರು. ಮುಷ್ಕರದ ಕಾರಣವೇನೆಂದರೆ "ಬೌದ್ಧ ಧರ್ಮ ಪ್ರಚಾರಕರೋರ್ವರು ಇಚಲ ಕರಂಜಿಯ ಶಹಪುರ ಬಡಾವಣೆಯಲ್ಲಿ ಪ್ರಚಾರ ಮಾಡುತ್ತ ನಿಮ್ಮ ಮನೆಗಳಲ್ಲಿ ಬುದ್ಧ ಮತ್ತು ಅಂಬೇಡ್ಕರ್ ಹೊರತು ಬೇರೆ ಯಾರ ಫೋಟೋ ಇರಬಾರದು ಎಂದು ಪ್ರತಿಜ್ಞೆ ಮಾಡಿಸಿದರಂತೆ. ಆಗ ದಲಿತರು ಹಿಂದು ದೇವತೆಗಳು, ಶಿವಾಜಿ, ಶಾಹು ಮುಂತಾದವರ ಫೋಟೋಗಳನ್ನೆಲ್ಲ ತಂದು ಚೌಕದಲ್ಲಿ ಸುಟ್ಟು ಹಾಕಿದರಂತೆ. ಅದಕ್ಕೆ ಮರಾಠರಿಂದ ಹಿಡಿದು ಉಳಿದ ಎಲ್ಲ ಹಿಂದುಗಳು ಪ್ರತಿಭಟನಾ ರ್‍ಯಾಲಿ ಮಾಡುತ್ತಿದ್ದಾರೆ."

ಕೇಳಿ, ಮನಸ್ಸಿಗೆ ಅತೀವ ಕಳವಳವಾಯಿತು. ದಲಿತರ ಬಗ್ಗೆ ನಮ್ಮಂತಹವರಿಗೆಲ್ಲ ಅಪಾರ ಕಳಕಳಿ ಇದೆ. ಸಂಪ್ರದಾಯವಾದಿ ಲಿಂಗಾಯತರನ್ನು ಎದುರು ಹಾಕಿಕೊಂಡು ನಾವುಗಳು ದಲಿತರ ಏಳಿಗೆ ಬಗ್ಗೆ ಭಾಷಣ ಮಾಡುತ್ತೇವೆ. ಶತಶತಮಾನಗಳಿಂದ ತುಳಿತಕ್ಕೊಳಗಾದ ದಲಿತರನ್ನು ಮಾನವೀಯತೆಯಿಂದ

ಕಾಣಬೇಕೆಂದು, ಅಸ್ಪೃಶ್ಯತೆಯ ಆಚರಣೆ ಅಮಾನುಷ, ದೇವ ವಿರೋಧಿ. ಧರ್ಮಗುರು ಬಸವಣ್ಣನವರ ಕಳ ಕಳಿಯನ್ನಾದರೂ ಅರ್ಥಮಾಡಿಕೊಳ್ಳಿರಿ; ಅವರ ಆದೇಶ ಪಾಲಿಸಿರಿ ಎಂದು ಲಿಂಗಾಯತರನ್ನು, ಸವರ್ಣೀಯ ಹಿಂದುಗಳನ್ನು ಮೂದಲಿಸಿ ಬುದ್ಧಿ ಹೇಳುತ್ತೇವೆ. ಆದರೆ ದಲಿತರಲ್ಲಿನ ಕೆಲವು ಗುಂಪಿನವರ ವರ್ತನೆ ನೋಡಿದರೆ ನಮ್ಮ ಮಾತುಗಳನ್ನು ನಾವೇ ಪರಾಮರ್ಶೆ ಮಾಡಿಕೊಳ್ಳುವಂತಾಗುತ್ತಿದೆ.

ಶಿವಾಜಿ ಮಹಾರಾಜರು ಸ್ವತಃ ಶೂದ್ರ ವರ್ಣೀಯರಾದ ಕಾರಣ ಅವರು ಕ್ಷತ್ರಿಯರಲ್ಲವಾದ್ದರಿಂದ ಪಟ್ಟಾಭಿಷೇಕಕ್ಕೆ ಅರ್ಹರಲ್ಲ ಎಂಬ ವೈದಿಕರ ತಿರಸ್ಕಾರಕ್ಕೆ ಪಾತ್ರರಾಗಬೇಕಾಯಿತು. ನಂತರ ಶಾಹು ಮಹಾರಾಜರು ಸಹ ಅದೇ ತಿರಸ್ಕಾರಕ್ಕೆ ಗುರಿಯಾದರು. ಶಾಹು ಡಾ||ಅಂಬೇಡ್ಕರರನ್ನು ಗೌರವಯುತವಾಗಿ ನಡೆಸಿಕೊಂಡುದು ಮಾತ್ರವಲ್ಲ ಮಹಾರಾಷ್ಟ್ರದಲ್ಲಿ ದಲಿತರ ಉದ್ಧಾರಕ್ಕಾಗಿ ಅಪೂರ್ವವಾದ ಯೋಜನೆಗಳನ್ನು ರೂಪಿಸಿದ ಕ್ರಾಂತಿಕಾರಿ ರಾಜರು. ಅಲ್ಲಮ ಪ್ರಭು ಗಿರಿಗೆ ಹೋಗುವ ಮಾರ್ಗದಲ್ಲಿ ಹರಿಜನರಿಗೆ ಜಮೀನು ವಿತರಿಸುವ ಸಲುವಾಗಿ ನೂರು ಎಕರೆ ಜಮೀನು ದಾನ ನೀಡಿದ್ದಾರೆ. ಇಂಥ ಎಲ್ಲ ಮಹಾನುಭಾವರ ಋಣ ಮರೆತು ಅವರ ಭಾವಚಿತ್ರಗಳನ್ನು ಸುಟ್ಟುದು ಸರಿಯೆ? ಒಂದು ವೇಳೆ ತಮಗೆ ಹಿಂದೂ ದೇವತೆಗಳ ಮತ್ತು ಇನ್ನಿತರರ ಭಾವಚಿತ್ರ ಬೇಡವಾದರೆ ಮನೆಯಲ್ಲಿಂದ ತೆಗೆಯಲಿ; ಸಾರ್ವಜನಿಕವಾಗಿ ಚೌಕದಲ್ಲಿ ತಂದು ಸುಟ್ಟುದು ಸರಿಯೆ? ಇದು ತೀರಾ ಉದ್ಧಟತನ ಎನಿಸದೆ? ಡಾ||ಅಂಬೇಡ್ಕರ್ ಮನುಸ್ಮೃತಿಯನ್ನು ಸುಟ್ಟರು. ಈ ಎಲ್ಲ ವರ್ಣ ವಿಭಜನೆ, ಜಾತೀಯತೆ, ಅಸ್ಪೃಶ್ಯತೆ, ಸ್ತ್ರೀ ಶೋಷಣೆಗೆ ಕಾರಣೀಭೂತವಾದುದು ಮನು ಸ್ಮೃತಿ. ಹಾಗಾಗಿ ಅದನ್ನು ಸುಟ್ಟುದರಲ್ಲಿ ಅರ್ಥವಿದೆ. ಶಿವಾಜಿ, ಶಾಹೂ ಮಹಾರಾಜರ ಫೋಟೋ ಸುಟ್ಟುದು ಯಾವ ದೃಷ್ಟಿಯಿಂದಲೂ ಸಮರ್ಥನೀಯವಲ್ಲ.

ಗುಲಬರ್ಗಾ ವಿಶ್ವವಿದ್ಯಾಲಯ ನಾಮಕರಣ

ಕರ್ನಾಟದಲ್ಲಿಯೂ ಅಷ್ಟೆ. ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರರ ಹೆಸರನ್ನು ಇಡುವುದಕ್ಕೆ ಸದಾ ಅಡ್ಡಗಾಲನ್ನು ದಲಿತರ ಒಂದು (ಅಂಬೇಡ್ಕರ್) ಗುಂಪಿನವರು ಹಾಕುತ್ತಾರೆ. ಈಗಾಗಲೇ ಡಾ||ಅಂಬೇಡ್ಕರ ಅವರ ಹೆಸರುನ್ನು' 7-8 ವಿವಿಧ ವಿಶ್ವವಿದ್ಯಾಲಯಗಳಿಗೆ ಇಡಲಾಗಿದೆ. ಡಾ||ಅಂಬೇಡ್ಕರರ ವ್ಯಕ್ತಿತ್ವ, ಅವರ ಸಾಧನೆ ಕುರಿತು ವಿಚಾರಶೀಲರೆಲ್ಲರಿಗೆ ಅಪಾರ ಗೌರವವಿದೆ. ಹಾಗೆಂದ ಮಾತ್ರಕ್ಕೆ ಅವರೊಬ್ಬರೇ ಈ ದೇಶದಲ್ಲಿ ಗೌರವಾರ್ಹರೆ? ಅದರಲ್ಲಿಯೂ ಗುರು ಬಸವಣ್ಣನವರ ಹೆಸರನ್ನು ಇಡಲು ವಿರೋಧ ವ್ಯಕ್ತಪಡಿಸುವುದು ದೇವ ದ್ರೋಹ, ಆತ್ಮ ದ್ರೋಹ! ದೀನ ದಲಿತರ ಏಳಿಗೆಗಾಗಿ, ಪಾಪಿ ಪತಿತರ ಉದ್ಧಾರಕ್ಕಾಗಿ ಗುರು ಬಸವಣ್ಣವವರು ಶ್ರಮಿಸಿದ್ದರಿಂದ ಮೇಲ್ವರ್ಣೀಯ ಹಿಂದುಗಳಿಗೆ ಮಾತ್ರವಲ್ಲ ಉಚ್ಚ ಜಾತಿಯ ಲಿಂಗಾಯತರೆಂದು ಹೇಳಿಕೊಳ್ಳುವವರಿಗೆ ಸಹ ಅವರು ಬೇಡವಾಗಿದ್ದಾರೆ. ಇದು ಎಂಥಾ ಅನ್ಯಾಯ! ತಾವು ಬ್ರಾಹ್ಮಣರಾಗಿ ಹುಟ್ಟಿ ಪಡೆದುಕೊಂಡ ಸವಲತ್ತುಗಳನ್ನು ಎಲ್ಲರೂ ಪಡೆದುಕೊಳ್ಳಬೇಕೆಂದು ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಹೋರಾಟ ಆರಂಭಿಸಿದವರು ಗುರು ಬಸವಣ್ಣನವರು. ಡಾ|| ಅಂಬೇಡ್ಕರರು ಅಸ್ಪೃಶ್ಯತೆಯ ನೋವನ್ನು ಸ್ವತಃ ಅನುಭವಿಸಿದವರು. ಗುರು ಬಸವಣ್ಣನವರಿಗೆ ಆ ನೋವು ಎರಗಲಿಲ್ಲ; ಆದರೆ ಅಸ್ಪೃಶ್ಯರ ನೋವನ್ನು ಮಾನಸಿಕವಾಗಿ ಕಲ್ಪಿಸಿಕೊಂಡು, ಸ್ಪಂದಿಸಿದರು ಮತ್ತು ನಿವಾರಣೆಗೆ ಯತ್ನಿಸಿದರು. ಓರ್ವ ಕಾರ್ಮಿಕನ ಮಗ ಕಮ್ಯುನಿಸ್ಟ್ ವಾದಿಯಾಗುವುದು ವಿಶೇಷವಲ್ಲ; ಕೋಟ್ಯಧೀಶ ಫ್ಯಾಕ್ಟರಿಯ ಮಾಲಿಕನ ಮಗ ಕಾರ್ಮಿಕರ ಪರವಾಗಿ ಹೋರಾಡಿದರೆ ಅದು ವಿಶೇಷವಲ್ಲವೆ?

ಬುದ್ಧನದು ನೇರವಾದ ಸಮತಾವಾದವಲ್ಲ; ಅಧ್ಯಾತ್ಮವಾದದ ತಳಹದಿಯ ಮೇಲೆ ನಿಂತ ಸಮತಾವಾದ. ಗುರು ಬಸವಣ್ಣನವರದು ಜಾತೀಯತೆ, ಅಸ್ಪೃಶ್ಯತೆಯ ವಿರುದ್ಧ ನೇರ ಹೋರಾಟ. ಈ ಬಗ್ಗೆ ಲಿಂಗಾಯತರಿಗಿಂತಲೂ ದಲಿತರು ಹೆಚ್ಚು ಕೃತಜ್ಞರಾಗಿ ತಾವೇ ಮುಂದಾಗಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಗುರು ಬಸವಣ್ಣನವರ ಹೆಸರನ್ನು ಇಡಲು ಹೋರಾಡಬೇಕು. 12ನೆಯ ಶತಮಾನದಷ್ಟು ಹಿಂದೆಯೇ ದಲಿತರು ಮತ್ತು ಹಿಂದುಳಿದವರ ಸರ್ವಾಂಗೀಣ ಉದ್ಧಾರಕ್ಕೆ ಹೋರಾಡಿದ ಗುರು ಬಸವಣ್ಣನವರ ಕಳಕಳಿಯನ್ನು ಅರ್ಥ ಮಾಡಿಕೊಳ್ಳದೆ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರನ್ನು ಇಡಲು ದಲಿತರ ಒಂದು ಗುಂಪಿನವರು ವಿರೋಧಿಸುವುದು ನಿಜಕ್ಕೂ ವಿಷಾದನೀಯವೇ ಸರಿ!

4. ಧರ್ಮಕ್ಕೆ ದಟ್ಟಿಕೊಟ್ಟರೆ ಹಿತ್ತಲಿಗೆ ಹೋಗಿ ಮೊಳ ಹಾಕಿದರಂತೆ

ಪೋಪ್ ಬೆನೆಡಿಕ್ಟ್-ರೋಮನ್ ಕ್ಯಾಥೋಲಿಕ್ ಕ್ರೈಸ್ತರ ಜಗದ್ಗುರು ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಕಡಿಮೆಯಾಗುತ್ತಿದೆ ಎಂದು ಭಾರತದಲ್ಲಿ ಧಾರ್ಮಿಕ ತಾರತಮ್ಯವಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರಂತೆ. (ಸಂಯುಕ್ತ ಕರ್ನಾಟಕ ಸಂಪಾದಕೀಯ, ದಿ.25-5-2006) ಈ ಅಭಿಪ್ರಾಯದ ಬಗ್ಗೆ ಬಿ.ಜೆ.ಪಿಯು ತಕ್ಷಣವೇ ಪ್ರತಿಭಟನೆಯನ್ನು ಸೂಚಿಸಿದೆ. ಇದೀಗ ಸೋನಿಯಾ ಸೂಪರ್ ಪಿ.ಎಂ. ಆಗಿರುವ ಕೇಂದ್ರ ಸರ್ಕಾರವು ಸಹ ಪೋಪರ ಪ್ರತಿಪಾದನೆಗೆ ನಿರಾಕರಣೆಯನ್ನು ವ್ಯಕ್ತ ಪಡಿಸಿದೆ. ಈ ಬಗ್ಗೆ ಧೈರ್ಯದಿಂದ ಹೇಳಿಕೆ ನೀಡುವ ಎದೆಗಾರಿಕೆ ಇಲ್ಲದ ಕೇಂದ್ರ ಸರ್ಕಾರವು ಭಾರತದಲ್ಲಿ ವಸ್ತುಸ್ಥಿತಿ ಏನಿದೆ ಎಂದು ಅರಿಯದೆ ಪೋಪರು ಹೀಗೆ ಹೇಳಿರಬಹುದೆಂದು ಸೌಮ್ಯವಾಗಿಯೇ ಪ್ರತಿಕ್ರಿಯೆ ನೀಡಿದೆ.

ಭಾರತದ ನೂತನ ರಾಯಭಾರಿ ಅಮಿತಾವ ತ್ರಿಪಾಠಿ ಪೋಪರಿಗೆ ಪರಿಚಯ ಪತ್ರ ಸಲ್ಲಿಸಿದಾಗ ಭಾರತದ ಕೆಲವು ರಾಜ್ಯಗಳಲ್ಲಿ ಮತಾಂತರ ನಿಷೇಧ ಕಾನೂನು ಜಾರಿಯಲ್ಲಿರುವುದನ್ನು ಟೀಕಿಸಿ, ಅದು ಧಾರ್ಮಿಕ ಸ್ವಾತಂತ್ಯಕ್ಕೆ ವಿರುದ್ಧವಾದುದು ಎಂದು ಪೋಪ್ ಆಕ್ಷೇಪಿಸಿದರೆಂದು ವರದಿಯಾಗಿತ್ತು.

ಪೋಪ್ ಅವರ ಈ ಅಭಿಪ್ರಾಯ ನಿಜಕ್ಕೂ ಅಧಿಕ ಪ್ರಸಂಗಿತನ ; ಭಾರತ ದೇಶದ ತತ್ತ್ವಜ್ಞಾನ, ದಾರ್ಶನಿಕತೆ, ಯೋಗ, ಆಯುರ್ವೇದ ಎಲ್ಲವೂ ಅತ್ಯದ್ಭುತವಾಗಿದ್ದರೂ ಎಲ್ಲ ಬಣ್ಣವನ್ನು ಮಸಿ ನುಂಗಿತು ಎಂಬಂತೆ ಜಾತೀಯತೆ ಮತ್ತು ಅಸ್ಪೃಶ್ಯತೆಯ ಆಚರಣೆ ಭಾರತೀಯ ಸಂಸ್ಕೃತಿಯ ಎಲ್ಲ ಉತ್ತಮ ಅಂಶಗಳನ್ನು ನುಂಗಿ ಹಾಕುತ್ತಿರುವುದೇ ಅಲ್ಲದೆ ಇದರ ಕುರೂಪದ ಮುಖವನ್ನು ಜಗತ್ತಿಗೆ ಎತ್ತಿ ತೋರುತ್ತದೆ. ಜಾತೀಯ ವರ್ಗೀಕರಣ ಮತ್ತು ಅಸ್ಪೃಶ್ಯತೆಗಳು ವಿದೇಶಿ ಧರ್ಮಗಳು ಮತಾಂತರ ಮಾಡಲು ಹುಲುಸಾದ ಭೂಮಿಕೆ ಒದಗಿಸಿವೆ. ಸರ್ಕಾರಿ ಗೋಮಾಳದಂತಿರುವ ಭಾರತದಲ್ಲಿ ವಿದೇಶಿ ಧರ್ಮಗಳು ಮೇಯಲು ಉತ್ತಮ ಹುಲ್ಲುಗಾವಲುಗಳಾಗಿವೆ. ಧಾರ್ಮಿಕ ಸ್ವಾತಂತ್ರ್ಯವಿರುವ ಜಾತ್ಯತೀತ ರಾಷ್ಟ್ರ ಎಂಬ ವಿಶೇಷ ಗೌರವಕ್ಕೆ ಪಾತ್ರವಾಗಬಯಸುವ ಈ ದೇಶದ ಮೇಲೆ ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಸತತವಾಗಿ ದಾಳಿಯಾಗುತ್ತಿದೆ. ಅದನ್ನು ಎದುರಿಸಲು ಅಗತ್ಯವಿರುವ ಒಗ್ಗಟ್ಟು ಮೊದಲೇ ಇಲ್ಲ. ಒಗ್ಗಟ್ಟು ಇಲ್ಲದಿರಲು ಮುಖ್ಯ ಕಾರಣ ಜಾತೀಯ ವರ್ಗೀಕರಣ ಮತ್ತು ಅಸ್ಪೃಶ್ಯತೆ.

ಹಿಂದುಳಿದ ವರ್ಗಗಳು ಎನ್ನಿಸಿಕೊಳ್ಳುವ ಶೂದ್ರ ವರ್ಣದವರು ಮತ್ತು ಪರಿಶಿಷ್ಟ ಜಾತಿ ಎನ್ನಿಸಿಕೊಳ್ಳುವ ದಲಿತರು ಮಾನಸಿಕವಾಗಿ ಕ್ರೈಸ್ತ, ಮುಸಲೀಮರೊಡನೆ ಒಂದಾದಷ್ಟು ಮೇಲ್ಜಾತಿಯ ಹಿಂದುಗಳೊಡನೆಯಾಗಲಿ, ಇಂದು ಸವರ್ಣೀಯ ಹಿಂದುಗಳೇ ಆದಂತೆ ಬ್ರಾಹ್ಮಣೀಕರಣಗೊಂಡಿರುವ ಲಿಂಗಾಯತರೊಡನೆಯಾಗಲಿ ಬೆರೆಯುತ್ತಲಿಲ್ಲ ಮತ್ತು ಮುಂದಿನ ಯಾವ ವಿಪತ್ತುಗಳ ಅರಿವೂ ಇರದ ಈ ಮೇಲ್ಜಾತಿ ಜನರು ತಾವು ಹೊದೆದುಕೊಂಡಿರುವ ಜಾತೀಯತೆಯ ಹಳೆಯ ಕೌದಿಯ ಮುಸುಗು ಹಾಕಿಕೊಂಡು ಸುಖವಾಗಿ ನಿದ್ರಿಸುತ್ತಿದ್ದಾರೆ. ಯಾವ ಕಾರಣಕ್ಕಾಗಿ ಭಾರತವು ತುಂಡಾಗುತ್ತಿದೆ ಎಂಬ ಅರಿವೂ ಇಲ್ಲದೆ ತಾವು ತಮ್ಮ ಹೆಂಡತಿ ಮಕ್ಕಳು ಸುಖವಾಗಿ ಇದ್ದರಾಯಿತು ಎಂಬ ಅಲ್ಪಾಕಾಂಕ್ಷಿಗಳು. ಇನ್ನು ರಾಜಕಾರಣಿಗಳೋ ದೇಶವನ್ನು ಮಾರಿಕೊಂಡಾದರೂ ಆಸ್ತಿಪಾಸ್ತಿ ಗಳಿಸಿಕೊಂಡು ತಮ್ಮ ಭವಿಷ್ಯವನ್ನು ಭದ್ರಪಡಿಸಿಕೊಳ್ಳಬೇಕೆನ್ನುವರು. ಹೀಗಾಗಿ ಕ್ರೈಸ್ತ, ಇಸ್ಲಾಂ ಧರ್ಮಗಳು ಜಲ ಪ್ರವಾಹ, ಜ್ವಾಲಾಮುಖಿಗಳಂತೆ ಭಾರತೀಯ ಸಂಸ್ಕೃತಿಯ ಮೇಲೆ ಎರಗುತ್ತಿವೆ. ಜಗತ್ತಿನಲ್ಲಿ ಮೊಟ್ಟ ಮೊದಲು ಇದ್ದುದು ಶೈವ ಧರ್ಮ; ವಿಸ್ತಾರವಾಗಿ ಹರಡಿತ್ತು. ನಂತರ ಅಫ್‌ಘಾನಿಸ್ಥಾನ ಮುಂತಾದ ಕಡೆ ಬೌದ್ಧ ಧರ್ಮ ಹಬ್ಬಿತು. ಈ ಎಲ್ಲ ಸೌಮ್ಯ ಸ್ವಭಾವದ ಧರ್ಮಗಳನ್ನು ನಾಶಪಡಿಸುತ್ತ ಇಸ್ಲಾಂ ಅಲ್ಲೆಲ್ಲ ಹಬ್ಬಿ


ಅದು ಕಾಲಿಟ್ಟಲ್ಲೆಲ್ಲ ಹಿಂಸೆಯನ್ನು ಹಬ್ಬಿಸುತ್ತಿದೆ. ಉಗ್ರಗಾಮಿ ದಾಳಿಗೆ ಸೌಮ್ಯವಾದಿ ಮುಸಲೀಮರು ಸಹ ಬಲಿಯಾಗುತ್ತಿರುವುದನ್ನು ಕಾಶ್ಮೀರದಲ್ಲಿ ಕಾಣಬಹುದು. ಕಾಶ್ಮೀರವು ಭಾರತದ ಕಿರೀಟ, ಅವಿಭಾಜ್ಯ ಅಂಗ. ಜವಾಹರ್‌ಲಾಲ್ ಅವರ ಕಾಲದಿಂದಲೇ ಅದರ ಸಮಸ್ಯೆ ಪ್ರಾರಂಭವಾಯಿತು. ಅವರಿಂದಲೇ ಆರಂಭವಾಯಿತು ಎಂದರೂ ಉತ್ಪ್ರೇಕ್ಷೆಯಾಗದು. ಇಂದು ಕಾಶ್ಮೀರವು ಎಂಥಾ ಸಮಸ್ಯೆಯನ್ನು ಎದುರಿಸುತ್ತಿದೆ ಎಂಬುದನ್ನು ದಿನವೂ ನೋಡುತ್ತಿದ್ದೇನೆ. ತನ್ನ ಒಳಗಿನ ಜಾತೀಯತೆ ಅಸ್ಪೃಶ್ಯತೆಯ ದೌರ್ಬಲ್ಯದಿಂದಾಗಿ ಭಾರತವು ವಿದೇಶಿ ಧರ್ಮಗಳಿಗೆ ಹುಲುಸಾದ ಹುಲ್ಲುಗಾವಲಾಗಿದ್ದರೂ ಪೋಪರಿಗೆ ಸಮಾಧಾನವಿಲ್ಲವಲ್ಲ! ಅದಕ್ಕೇ ಹೇಳಿದ್ದು ಧರ್ಮಕ್ಕೆ ದಟ್ಟಿಕೊಟ್ಟರೆ ಹಿತ್ತಲಿಗೆ ಹೋಗಿ ಮೊಳ ಹಾಕಿದರಂತೆ ಎಂದು! ವಿಶ್ವ ಹಿಂದು ಪರಿಷತ್ ಮತ್ತು ಆರ್.ಎಸ್.ಎಸ್ ಸಾಂಸ್ಕೃತಿಕ ಆಕ್ರಮಣ ತಡೆಯಬೇಕೆಂದು ಕಿರುಚಾಡುತ್ತಾರೆ. ಆದರೆ ಅವರ ಬಳಿ ಹೋರಾಡಲು ಬೇಕಾದ ತಾತ್ತ್ವಿಕ ಅಸ್ತ್ರವೇ ಇಲ್ಲ. ಎದುರಾಳಿಯ ವಾದದ ಮುಂದೆ ತಲೆ ತಗ್ಗಿಸುವ ಅಂಶಗಳೆಂದರೆ ಮೂಢನಂಬಿಕೆ, ಬಹುದೇವತೋಪಾಸನೆ, ಜಾತೀಯತೆ, ಅಸ್ಪೃಶ್ಯತೆ. ಈ ನೋವು - ಅವಮಾನ ಮರೆಯಲೆಂದು ರಾಮ್‌ರಾಮ್ ಎಂಬ ಭಜನೆ ಮಾಡುವುದು ಬಿಟ್ಟರೆ ಇನ್ನಾವ ಶಸ್ತ್ರವೂ ಅವರ ಬಳಿ ಇಲ್ಲ.


ಅದೇನೇ ಇರಲಿ ಪೋಪ್ ಅವರ ಮಾತುಗಳು ಅನ್ಯ ದೇಶದ ವ್ಯವಹಾರದಲ್ಲಿ ಅನವಶ್ಯಕ ಹಸ್ತಕ್ಷೇಪ ಎಂದು ಕೇಂದ್ರ ಸರ್ಕಾರ ತೀವ್ರ ಪ್ರತಿಭಟನೆ ಮಾಡಬೇಕು? ಆದರೆ ಅದಕ್ಕೆ ಸೂಪರ್ ಪಿ.ಎಂ ಕ್ಯಾಥೋಲಿಕ್ ಕ್ರೈಸ್ತರಾದ ಸೋನಿಯಾ ಅವಕಾಶ ಕೊಡಲು ಸಾಧ್ಯವೆ?

ಲಿಂಗದೇವ - ಪರಮ ಸತ್ಯ

ಸತ್ಯ ಸತ್ಯ ಈ ಪರಮ ಸತ್ಯವನು ಕೇಳಿರಿ ಎಲ್ಲರು
ಕೂಡಲ ಸಂಗಮ ಅಂಕಿತನಾಮ ಒಪ್ಪುವ ಮಾನ್ಯರು
ಧರ್ಮದ ಜೀವಾಳ ಎನ್ನುವ ಅಷ್ಟಾವರಣವ ನೋಡಿರಿ
ಕೂಡಲ ಸಂಗಮದೇವರು ಎನ್ನುವ ಶಬ್ದವಿಲ್ಲ ಯಾಕರಿ?
ಪಂಚಾಚಾರವೆ ಪ್ರಾಣ ಅಂತ ಗುರು ಬಸವಣ್ಣ ಅಂತಾರ
ಏಕದೇವ ಉಪಾಸನೆಗೆ ಮಹತ್ವ ಕೊಟ್ಟಾಗ ಲಿಂಗಾಚಾರ ಎನ್ನುವ ಸೂತ್ರಕ
ನಂಬಿರಿ ಶ್ಯಾಣ್ಯಾರ ಕೂಡಲ ಸಂಗಮ ತೆಗೆದರೆ ಯಾಕ ಆಯ್ತಿ ಅವಾಂತರ
ಆರು ಸ್ಥಲದಲಿ ಅರಸಿ ಹುಡಿಕಿದರು ಇಲ್ಲ ಸಂಗನ ಹೆಸರು ಲಿಂಗವಂತರೇ
ಬಸವ ಲಿಂಗಾ ಇದು ನಿಮ್ಮ ಉಸಿರ ಸಂಗಮುದಲ್ಲಿ ಅಕ್ಷರ ಕಲ್ತಿ
ಬಸವಣ್ಣ ಬಂದಾರ ಗುರುಕುಲ ದೇವರ ಅಂಕಿತನಾಮ ಆಯಿತು ಪ್ರಚಾರ
ಶರಣ ಸತಿ ಲಿಂಗಪತಿ ಶರಣದ ಶಾಸ್ತ್ರದ ಪತಿಯ ಹೆಸರಿಗೆ ಕಳಂಕ
ತರವಲ್ಲ ಪತಿವ್ರತ ಸ್ತ್ರಿಯರ ತಿಳಿದು ತಿಳಿದು ನೀವು ವ್ಯಕ್ತಿ ಪ್ರತಿಷ್ಠೆಯಿಂ ಪಡತಿರಿ ಮತ್ಸರಾ,
ಕೂಡಲ ಸಂಗಮ ಅನ್ನುವ ಶಬ್ದ ಅಲ್ಲೇನು ಸ್ಥಾವರ ?
ಕೂಡಲ ಸಂಗಮ ಅಂಕಿತ ನಾಮ ಒಪ್ಪುವದಾದರು ಸಂಗಮ ದೇವರು
ಶರಣರ ದೃಷ್ಟಿಲಿ ಅಲ್ಲೇನು ಸ್ಥಾವರ ?
ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕಳಿವಿಲ್ಲ ಬಸವಣ್ಣ ಹೇಳ್ಯಾರ
ಸ್ಥಾವರ ಎನ್ನೋದು ಕೂಡಲ ಸಂಗಮ ಆಧಾರ ಮಂದಿರ
ಸರ್ವ ಜ್ಞಾನಿಗಳಿಗೆ ಮಠಾಧೀಶರಿಗೆ ದಾಡಗಿಯ ಸಿದ್ದನ ನಮಸ್ಕಾರ
ಇದ್ದ ಸತ್ಯವ ಶುದ್ಧ ಮನಸಿಲಿಂದ ಒಪ್ಪಿಕೊಳ್ಳಲು ಏಕೆ ತಕರಾರ ?
ಲಿಂಗದೇವನು ಲಿಂಗಾಯತ ಧರ್ಮಕೆ ಮೂಲ ಆಧಾರ
ಬಸವ ಗುರುವಿನ ತತ್ತ್ವವ ತಿಳಿದು ನೀವ್ ಆಗಿರಿ ಉದ್ಧಾರ!

-ಸಿದ್ರಾಮ ಶ.ಕಂಟೆಪ್ಪಾ ಧುಳೆ, ದಾಡಗಿ


ಕೇಂದ್ರ ಸಚಿವ ಕೆ. ಹೆಚ್. ಮುನಿಯಪ್ಪ ಅವರಿಂದ ದಿನಾಂಕ 6-5-2006 ರಂದು 5ನೆಯ ಕಲ್ಯಾಣ ಪರ್ವ ಉದ್ಘಾಟನೆ



ಶರಣ ಕೆ. ಹೆಚ್. ಮುನಿಯಪ್ಪನವರಿಗೆ ಪೂಜ್ಯ ಮಾತಾಜಿಯವರಿಂದ ಬಸವ ಮೂರ್ತಿಯ ನೀಡಿಕೆ



ಕಲ್ಯಾಣ ಪರ್ವದ ಉದ್ಘಾಟನಾ ಸಮಾರಂಭ ಎಡದಿಂದ ಬಲಕ್ಕೆ ಪೂಜ್ಯ ಚನ್ನಬಸವಾನಂದ ಸ್ವಾಮಿಗಳು, ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಗಂಗಾಮಾತಾಜಿ, ಪೂಜ್ಯ ಮಾತಾಜಿ, ಕೆ.ಹೆಚ್. ಮುನಿಯಪ್ಪ, ಗಂಗಶೆಟ್ಟಿ ಪಾಟೀಲ್, ಸುಭಾಷ್ ಪಾಟೀಲ್




ಕರ್ನಾಟಕ ಸರ್ಕಾರದ ಯುವಜನ ಹಾಗೂ ಕ್ರೀಡಾ ಸಚಿವರಾದ ಆಲ್ಕೋಡು ಹನುಮಂತಪ್ಪ ಅವರಿಗೆ ನೆನಪಿನ ಕಾಣಿಕೆ ನೀಡಿಕೆ




ಶರಣ ವಂದನ ಕಾರ್ಯಕ್ರಮ ಉದ್ಘಾಟಿಸುತ್ತಿರುವ ಶರಣೆ. ಯೋಗೀಶ್ವರಿ ಹಿಂದೆ ಅಧ್ಯಕ್ಷತೆ ವಹಿಸಿದ ಮಾಜಿ ಸಚಿವ ಸುಭಾಷ್ ಆಸ್ಪೂರೆ




ದಿನಾಂಕ 8-5-2006 ರಂದು ಮೆರವಣಿಗೆ ಜರುಗಿದಾಗ ಉರಿಬಿಸಿಲನ್ನೂ ಲೆಕ್ಕಿಸದೆ ಪಥ ಸಂಚಲನದಲ್ಲಿ ಭಾಗಿಗಳಾದ ಜನರ ಜೊತೆಗೆ ಶರಣೆ ಯೋಗೀಶ್ವರಿಯವರೂ ನಡೆದೇ ಸಾಗಿ ಬಂದರು



ದಿನಾಂಕ 7-5-2006 ಶರಣ ವಂದನೆಯಲ್ಲಿ ಆದಿ ಶರಣರಿಗೆ ಶರಣು ಶರಣಾರ್ಥಿ ಸಲ್ಲಿಸುತ್ತಿರುವ ಪೂಜ್ಯರು ಮತ್ತು ಗಣ ನಾಯಕ ನಾಯಕಿಯರು.



ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿಯವರಿಂದ "ಷಡಾಚಾರದ ವಚನಗಳು" ಕೃತಿ ಬಿಡುಗಡೆ



ದಿನಾಂಕ 8-5-2006 ಬಸವ ಕಲ್ಯಾಣದ ಪರುಷ ಕಟ್ಟೆಯಲ್ಲಿ ಪೂಜ್ಯರಿಂದ ಗುರು ಬಸವಣ್ಣನವರ ಪೂಜೆ



ಪೂಜ್ಯರು ಮತ್ತು ಶರಣ ಪ್ರಮುಖರಿಂದ ಪಾದಯಾತ್ರೆ




ಬಸವ ಕಲ್ಯಾಣ ನಗರದ ಪ್ರಮುಖ ಬೀದಿಯಲ್ಲಿ ಸಾಗಿ ಬಂದ ಮೆರವಣಿಗೆ



ಶರಣ ಹರಳಯ್ಯ ಚೌಕದಲ್ಲಿ ಹರಳಯ್ಯನವರ ಪ್ರತಿಮೆಗೆ ಗೌರವಾರ್ಪಣೆ




ಪೀಠಾರೋಹಣವನ್ನು ಉದ್ಘಾಟಿಸುತ್ತಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ




ಪೀಠಾರೋಹಣ ಸಭೆಯಲ್ಲಿ ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದ ಶರಣೆ ಇಂದುಮತಿ ದಿವಾಕರ್ ಮತ್ತು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶರಣೆ ಯೋಗೀಶ್ವರಿ. ಪೂಜ್ಯ ಗಂಗಾಮಾತಾಜಿಯವರಿಂದ ಪ್ರಾಸ್ತಾವಿಕ ನುಡಿ.



ಜಗದ್ಗುರು ಅಲ್ಲಮಪ್ರಭು ಶೂನ್ಯ ಪೀಠಾರೋಹಣಕ್ಕೆ ಮೊದಲು ಪೂಜ್ಯ ಲಿಂಗೈಕ್ಯ ಗುರುಗಳ ಪುತ್ಥಳಿಗೆ ಗೌರವಾರ್ಪಣೆ




ಪೀಠಾರೋಹಣದ ಬಳಿಕ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ
ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮಿಗಳಿಗೆ ರುದ್ರಾಕ್ಷಿ ಮುಕುಟ ಧಾರಣೆ.




ಪೀಠಾರೋಹಣ ಸಂದೇಶ ನೀಡುತ್ತಿರುವ ಪೂಜ್ಯ ಅಲ್ಲಮ ಪ್ರಭು ಸ್ವಾಮೀಜಿ



ಅನುಭವ ಮಂಟಪಕ್ಕೆ ಅಕ್ಕಮಹಾದೇವಿಯ ಆಗಮನ - ರೂಪಕ



ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ ರೂಪಕ ಮಾಡಿದ ಶರಣರು ಮತ್ತು ಮಕ್ಕಳು



ಹೊಸದಾಗಿ ಜಂಗಮ ದೀಕ್ಷೆ ಪಡೆದಿರುವ ಪೂಜ್ಯ ಶ್ರೀ ಬಸವ ಪ್ರಭು ಸ್ವಾಮಿಗಳಿಗೆ
ಪೂಜ್ಯ ಅಲ್ಲಮ ಪ್ರಭು ಸ್ವಾಮಿಗಳಿಂದ ಆಶೀರ್ವಾದ



ಬೀದರ್ ಗಣಾಚಾರ ದಳದವರಿಂದ ಕೋಲಾಟ ಪ್ರದರ್ಶನ

☹ ಸಮಸ್ಯೆ..? - ಸಮಾಧಾನ..! ☺

ಬಸವರಾಜ ನಾಡಗೌಡ, ಶಿಗ್ಗಾಂವ, ಜಿ-ಹಾವೇರಿ

? ವೀರಶೈವ ಪಂಚಮಸಾಲಿ ಜನರು ಪ್ರತ್ಯೇಕ ಗುರು ಪೀಠಕ್ಕೆ ಪ್ರಯತ್ನಿಸುತ್ತಿರುವುದರಿಂದ ಮುಂದಿನ ಜನ್ಮದಲ್ಲಿ ಹಂದಿ, ನರಿ, ನಾಯಿ, ಕುಷ್ಟರೋಗಿಗಳಾಗಿ ಹುಟ್ಟುವಿರೆಂದು ಹಿರೇಕೆರೂರಿನಲ್ಲಿ ನಡೆದ ಧಾರ್ಮಿಕ ಸಮಾವೇಶದಲ್ಲಿ ಶ್ರೀಶೈಲ ಜಗದ್ಗುರುಗಳು ಅಪ್ಪಣೆ (ಶಾಪ) ಕೊಟ್ಟರಂತೆ. ಇದು ನಿಜವಾಗಬಹುದೆ?

★ ಸ್ವಜನಾಂಗಕ್ಕೆ ದ್ರೋಹ ಬಗೆದು ಶ್ರೀರಾಮನಿಗೆ ನೆರವಾಗಿದ್ದಕ್ಕೆ ಹನುಮಂತನಿಗೆ ಸಿಕ್ಕಿದ್ದೇನು?! ರಾಮನ ಪಾದದ ಬಳಿಯ ಸ್ಥಾನ ಮತ್ತು ಮಂಗನ ಬಾಲ. ಹಾಗೆಯೇ ಈವರೆಗೂ ಪಂಚ ಪೀಠಾಧೀಶರನ್ನು ಅಡ್ಡಪಲ್ಲಕ್ಕಿಯಲ್ಲಿ ಹೊತ್ತುದಕ್ಕೆ ಸಿಕ್ಕುವ ಪ್ರತಿಫಲ ಶ್ರೀ ಶೈಲ ಪೀಠಾಧೀಶರು ಹೇಳಿದ್ದು. ಈಗಲಾದರೂ ಜಾಗೃತರಾಗಿ ಧರ್ಮಗುರು ಬಸವಣ್ಣನವರನ್ನು ನಂಬಿ, ವೀರಶೈವ ಪದದ ಗೊಂದಲ ಬಿಟ್ಟು ಲಿಂಗಾಯತರಾಗಿ ಪ್ರಜ್ಞಾವಂತರಾದರೆ ಮುಂದೆ ದೊರೆಯುವುದು ಶರಣ ಪದವಿ, ಪುನರ್ಜನ್ಮದಿಂದ ಬಿಡುಗಡೆ, ಆಗ ಪಂಚಪೀಠಾ(ಡಾ)ಧೀಶರ ' ಶಾಪ ಖಂಡಿತಾ ತಟ್ಟದು.

ಶರಣ.ಬಸಪ್ಪ ಪವಾಡಶೆಟ್ಟರು, ಗದಗ

? ಗದಗಿನ ತೋಂಟದಾರ್ಯ ಮಠದ ಬಸವ ಜಯಂತಿಯ ಆಹ್ವಾನ ಪತ್ರದಲ್ಲಿ ಸಪ್ತ ಸೂತ್ರಗಳನ್ನು ಮುದ್ರಿಸಲಾಗಿದೆ. ಅದರಲ್ಲಿ ಲಿಂಗಾಯತ ಧರ್ಮ ಲಾಂಛನ ವಿಶ್ವಾತ್ಮನ ಕುರುಹಾದ ಆತ್ಮಲಿಂಗ ಎಂದು ಬರೆಯಲಾಗಿದೆ. ಇದು ಸರಿಯೆ?

★ ಪಾಪ, ನಾವು ಬರೆದುದಕ್ಕೆ, ಘೋಷಿಸಿದುದಕ್ಕೆ ಬೇರೆಯೇ ಆಗಿ ಏನನ್ನಾದರೂ ಬರೆಯುವ ಚಪಲ ಹಲವರಿಗೆ. ಲಿಂಗಾಯತ ಧರ್ಮದ ಲಾಂಛನ ಸೃಷ್ಟಿಕರ್ತ ಲಿಂಗದೇವ(ವಿಶ್ವಾತ್ಮ)ನ ಕುರುಹಾದ ಇಷ್ಟಲಿಂಗವೇ ವಿನಾ ಆತ್ಮಲಿಂಗವಲ್ಲ. ಆತ್ಮಲಿಂಗ ಎಂದರೆ ಆತ್ಮ. ಆತ್ಮವು ಸಹ ದೇವನಂತೆ ನಿರಾಕಾರ ತತ್ತ್ವ. ಇನ್ನು ಆತ್ಮಲಿಂಗ ಎಂಬ ಪದವನ್ನು ಶಿವನ ಕುರುಹಾದ ಸ್ಥಾವರಲಿಂಗದ ಚಿಕ್ಕ ರೂಪವಾದ ಚರ ಲಿಂಗಕ್ಕೆ ಬಳಸಲಾಗುವುದು. ಉದಾ:ರಾವಣನು ಕೈಲಾಸಕ್ಕೆ ಹೋಗಿ ಶಿವನಿಂದ ಆತ್ಮ(ಚರ) ಲಿಂಗವನ್ನು ತಂದುದು. ಇಷ್ಟಲಿಂಗದ ಹೊರ ಆವರಣ ಕಂತೆ-ಬ್ರಹ್ಮಾಂಡದೊಡೆಯ ಲಿಂಗದೇವನ ಸಂಕೇತ, ಒಳಗಣ ಹುಟ್ಟುಲಿಂಗ ಅಂಗ-ಜೀವಾತ್ಮನ ಸಂಕೇತ. ಆದ್ದರಿಂದ ಇಷ್ಟಲಿಂಗಕ್ಕೂ ಆತ್ಮಲಿಂಗಕ್ಕೂ ಬಹಳ ವ್ಯತ್ಯಾಸವಿದೆ. ಆತ್ಮಲಿಂಗ ಎಲ್ಲ ಮಾನವರಲ್ಲಿ ನೆಲದ ಮರೆಯ ನಿಧಾನದಂತೆ ಇರುತ್ತದೆ. ಇಷ್ಟಲಿಂಗ ಧರಿಸಿದವನು ಮಾತ್ರ ಲಿಂಗಾಯತನಾಗುತ್ತಾನೆ.

ಚಂದನ್ ಮಿಣಜಗಿ, ಬೆಂಗಳೂರು

? ಬಸವೇಶ್ವರ ಮತ್ತು ಬಸವಣ್ಣ-ಈ ಎರಡರಲ್ಲಿ ಯಾವುದು ಸೂಕ್ತ?

★ ಬಸವಣ್ಣಾ ಎಂಬಲ್ಲಿ ಭಕ್ತಿಯ ಜೊತೆಗೆ ಅಕ್ಕರೆ ತುಂಬಿ ತುಳುಕುತ್ತದೆ. ಅವರು ನಮಗೆ ತುಂಬಾ ಆತ್ಮೀಯರು ಎಂಬ ಭಾವ ಉಂಟಾಗುತ್ತದೆ. ಬಸವೇಶ್ವರ ಎಂಬುದು ಮರ್ತ್ಯದ ಸಂಬಂಧವನ್ನು ಕಳಚಿ ಧರ್ಮಪಿತರನ್ನು ದೂರ ಒಯ್ಯುತ್ತದೆ. ಆ ಪದದಲ್ಲಿ ಆತ್ಮೀಯತೆಗಿಂತಲೂ ಭಯ ಸಹಿತ ಭಕ್ತಿ ಇದೆ ಮತ್ತು ಐತಿಹಾಸಿಕ ವ್ಯಕ್ತಿ ಬಸವಣ್ಣನವರನ್ನು ಪುರಾಣೀಕರಿಸಿ ನಂದಿಯನ್ನಾಗಿ ಮಾಡುವ ಸಂಭವವೂ ಬಸವೇಶ್ವರ ಪದದಲ್ಲಿ ಕಾಣಬರುತ್ತದೆ. ಉತ್ಕಟ ಭಕ್ತಿಯಿಂದ ಪಠಿಸಿದಾಗ ಬಸವಾ ಎಂಬ 3 ಅಕ್ಷರವು ಪ್ರಣವ (ಅ + ಉ + ಮ) ದ ಶಕ್ತಿಯಿಂದ ಮಿಡಿಯುತ್ತದೆ.

ರಾಷ್ಟ್ರೀಯ ಬಸವ ದಳ, ಫರಹತಾಬಾದ್, ಗುಲಬರ್ಗಾ

? ಗುಲಬರ್ಗಾದಲ್ಲಿ ಸರ್ಕಾರಿ ಆಡಳಿತದ ವತಿಯಿಂದ ಹಮ್ಮಿಕೊಂಡ ಬಸವ ಜಯಂತಿ ಉತ್ಸವದಲ್ಲಿ ಭಾಗಿಗಳಾಗಲು ಗುಲಬರ್ಗಾದ ಸುಲಫಲ್ ಮಠದ ಸ್ವಾಮಿಗಳನ್ನು ಆಹ್ವಾನಿಸಲಾಗಿತ್ತು. ಅವರು ಮಾತನಾಡುತ್ತ ಬಸವಣ್ಣನವರ ಸಾಧನೆ-ಸಂದೇಶ ಕುರಿತು ಹೇಳುವ ಬದಲು ತಮ್ಮನ್ನು (ಮಾತಾಜಿಯವರನ್ನು) ಅಶ್ಲೀಲ ಭಾಷೆಯಲ್ಲಿ ನಿಂದಿಸಿದರು. ಬೆಳಗಾಂದಲ್ಲಿ ಸಹ ಗದಗಿನ ತೋಂಟದಾರ್ಯ ಸ್ವಾಮಿಗಳು ಅದೇ ರೀತಿ ಬೇರೊಂದು ಸಂಘಟನೆಯ ಕಾರ್ಯಕ್ರಮದಲ್ಲಿ ಭಾಗಿಗಳಾದಾಗ ಅಷ್ಟೇ ಕೆಳಮಟ್ಟದ ಅಶ್ಲೀಲ ಭಾಷೆ ಬಳಸಿ ನಿಂದಿಸಿದರು ಎಂದು ಅಲ್ಲಿಂದ ಫೋನ್ ಬಂದಿತ್ತು. ಇದೆಂತಹ ಸಂಸ್ಕಾರ? ಅವರು ಹಾಕಿದ ಕಾವಿಗಾದರೂ ಬೆಲೆ ಬೇಡವೆ ?

★ ತಾಯಿಯಂತೆ ಮಕ್ಕಳು, ನೂಲಿನಂತೆ ಸೀರೆ, ಗುರುವಿನಂತೆ ಶಿಷ್ಯರು ಎಂಬ ಅನುಭವ ವಾಣಿಯಿಲ್ಲವೆ? ಸಂಸ್ಕೃತದಲ್ಲಿ ಯಥಾ ಗುರು ತಥಾ ಶಿಷ್ಯ ಎಂಬ ಲೋಕೋಕ್ತಿ ಇದನ್ನೇ ಪ್ರತಿಪಾದಿಸುತ್ತದಲ್ಲವೆ ? ಬಸವೇಶ್ವರ ವಿಶ್ವ ವಿದ್ಯಾಲಯ ಎಂದು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡಲು ಎರಡೇ ದಿನ ಸಮಯಕೊಡಿ ಎಂದು ಸನ್ಮಾನ್ಯ ದೇವೇಗೌಡರು ದೆಹಲಿಗೆ ಹೊರಟರು. ಕೆಲಸ ಆಗಿ ಬಿಡುತ್ತದೆ ಎಂಬ ಸಂಕಟದಿಂದ ಕೆಡಿಸಿದವರು ಗದಗಿನ ಶ್ರೀಗಳು ಸುಲಫಲ ಮಠದ ಸ್ವಾಮಿಗಳನ್ನು ಬಳಸಿಕೊಂಡು. ಇದಕ್ಕೆ ಪ್ರೇರಕ ಶಕ್ತಿ ಎಂ.ಪಿ.ಪ್ರಕಾಶ್, ರಾಷ್ಟ್ರೀಯ ಬಸವ ದಳದ ಶರಣರನ್ನು ತೆಗೆದುಕೊಂಡು ಚಳುವಳಿ ಆರಂಭಿಸುವಾಗ ಸುಲಫಲಮಠದ ಸ್ವಾಮಿಗಳ ನೇತೃತ್ವದಲ್ಲಿ ಸಣ್ಣ ಸಣ್ಣ ಮಠಾಧಿಕಾರಿಗಳ ಗುಂಪು ತಾವು ಕೈಗೂಡಿಸುತ್ತೇವೆ ಎಂದಾಗ ನಾನು ಆರ್. ಜಿ.ಶೆಟಗಾರ್ ಅವರಿಗೆ ಹೇಳಿದ್ದೆ "ಬೇಡಿ, ನಮ್ಮ ಶರಣ ಬಂಧುಗಳಷ್ಟು ಸ್ವಾಮಿಗಳು ದೃಢರಲ್ಲ, ತತ್ತ್ವನಿಷ್ಠರಲ್ಲ. ಮುಂದೆ ನೀವು ಪಶ್ಚಾತ್ತಾಪ ಪಡಬೇಕಾಗುತ್ತೆ" ಸ್ವಾಮಿಗಳು ಬಂದರೆ ಚಳುವಳಿಗೆ ಬಲ ಬರುತ್ತೆ ಎಂಬ ಭ್ರಾಂತಿಯಿಂದ ಸೇರಿಸಿಕೊಂಡು ಮಧ್ಯದಲ್ಲಿ ಸ್ವಾಮಿಗಳು ಕೈಕೊಟ್ಟಾಗ ರಾಷ್ಟ್ರೀಯ ಬಸವ ದಳದವರು ತುಂಬಾ ಪಶ್ಚಾತ್ತಾಪಪಟ್ಟರು. ಗೃಹಸ್ಥ ಶರಣರು ಇಷ್ಟಲಿಂಗ ತೀರ್ಥ ಬಿಟ್ಟು ಹೊರಗಿನ ನೀರು-ಆಹಾರ ಸೇವಿಸದೆ ಇರುವಾಗ ಸ್ವಾಮಿಗಳೆಂದು ಕಾವಿ ತೊಟ್ಟವರು ಬೇರೆಯವರ ಕಡೆಯಿಂದ ಮಸಾಲೆ ದೋಸೆ ಜೈಲಿನೊಳಕ್ಕೆ ತರಿಸಿಕೊಂಡು ತಿಂದರು. ಇದರಿಂದ ರಾಷ್ಟ್ರೀಯ ಬಸವ ದಳದ ಗೌರವ ಸಹ ಕಳೆದರು. ಜಂಗಮವನ್ನು ಜಾತಿಯನ್ನಾಗಿ ವಿಕೃತಗೊಳಿಸಿ ಅರ್ಹತೆ ಇರಲಿ ಬಿಡಲಿ ಅವರನ್ನು ಮಠಕ್ಕೆ ಹಿಡಿದು ತಂದು ಕೂರಿಸಿದರೆ ಬಸವಣ್ಣನವರ ಜೀವನ - ಸಾಧನೆ- ಸಂದೇಶ ಕುರಿತು ಹೇಳಲು ಸಾಮರ್ಥ್ಯ ಬರುವುದೆ? ಎಲ್ಲಿ ಹೋದರೂ ಅವರು ಮಾಡುವುದು ಅನ್ಯರ ನಿಂದೆಯನ್ನೆ।

?. ನಮ್ಮ ಭಾಗದಲ್ಲಿ ಒಂದು ದೊಡ್ಡ ಮಠವಿದೆ. ಅದು ವಿರಕ್ತರ ಮಠ; ಅಂದರೆ ವಿರಕ್ತ ಸಂಪ್ರದಾಯದ ಮಠವಲ್ಲ, ಮಠದ ಸ್ವಾಮಿಗಳು ಸನ್ಯಾಸಿಗಳಿರುತ್ತಾರೆ. ಅವರು ತಮ್ಮ ಹತ್ತಿರದ ಬಂಧುಗಳಿಂದ 10-12 ವರ್ಷದ ಹುಡುಗನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿದರು. ಅಷ್ಟು ಚಿಕ್ಕಹುಡುಗರನ್ನು ಆಯ್ಕೆ ಮಾಡುವುದು ಸರಿಯೆ ?

★ ಖಂಡಿತಾ ಸರಿಯಲ್ಲ; ಮುಂದೆ ಅವನ ಧ್ಯೇಯ ಆದರ್ಶಗಳು ಏನಾಗುತ್ತವೊ ? ವೈರಾಗ್ಯ ಜೀವನದ ಹೊಣೆಗಾರಿಕೆಯನ್ನೇ ಅರಿಯದ ಮಕ್ಕಳನ್ನು ಆಯ್ಕೆ ಮಾಡುವುದು ಬಹಳ ತಪ್ಪು. ಅವನು ಆದರ್ಶ ಗುರುವಾಗಿ ಕರ್ತವ್ಯ ನಿರ್ವಹಿಸಲಾಗಲಿಕ್ಕಿಲ್ಲ. ಸಂಪ್ರದಾಯ ಮಠಗಳಿಗೆ ಅಧಿಕಾರಿಯನ್ನು ಮಾಡುವುದು ವಿಲಕ್ಷಣವಾಗಿ ಜರುಗುತ್ತಿದೆ. ಕೆಲವು ಕಡೆ ಜಾತಿಯ ಆಧಾರದ ಮೇಲೆ, ಕೆಲವು ಕಡೆ ವಂಶದ ಆಧಾರದ ಮೇಲೆ (ಜಡ) ಸಂಪ್ರದಾಯ ಸಾಗುತ್ತದೆ. ಅದಕ್ಕೆ ತಕ್ಕಂತೆ ಸಮಾಜದ ಜನರೂ ಗುರುಗಳಿಂದ ಜ್ಞಾನ-ಆಶೀರ್ವಾದಗಳನ್ನು ನಿರೀಕ್ಷಿಸುವುದಕ್ಕಿಂತಲೂ ಆರ್ಥಿಕ ಲಾಭ, ಕಾಲೇಜಿನ ಸೀಟುಗಳನ್ನು ನಿರೀಕ್ಷಿಸುತ್ತಾರೆ. ವ್ಯಾವಹಾರಿಕ ಗುರು-ವ್ಯಾವಹಾರಿಕ ಭಕ್ತ ಇಬ್ಬರ ವಿಲಕ್ಷಣ ಸಂಬಂಧದಿಂದಾಗಿ ಧರ್ಮಶಾಸ್ತ್ರದಲ್ಲಿ ಅಕ್ರಮವಾದುದೆಲ್ಲ ವ್ಯಾವಹಾರಿಕವಾಗಿ ಸಕ್ರಮವಾಗುತ್ತದೆ.

ಮಲ್ಲಿಕಾರ್ಜುನಯ್ಯ, ರಾ.ಬ.ದಳ ಅಧ್ಯಕ್ಷರು, ತುರುವೇಕೆರೆ.

?. ಪ್ರಜಾವಾಣಿ ಪತ್ರಿಕೆಯ ಒಂದು ಪ್ರಕಟಣೆ ನೋಡಿದೆ. ದಾವಣಗೆರೆಯಿಂದ ಪತ್ರಿಕಾಗೋಷ್ಠಿ ಕರೆದಿದ್ದ ಕೆಲವರು ಲಿಂಗಾಯತ ಒಳಪಂಗಡಗಳಲ್ಲಿ ಒಂದಾದ ಪಂಚಮಸಾಲಿ ಮುಖಂಡರು ಅವರ ಜಾತಿಗಾಗಿ ಒಂದು ಪ್ರತ್ಯೇಕ ಗುರುಪೀಠ ಮಾಡಿಯೇ ತೀರುವುದಾಗಿ ಘೋಷಿಸಿದ್ದರು. ಮಾಡಿಕೊಳ್ಳಲಿ

ಬೇಡವೆನ್ನುವವರಾರು? ಪಂಚಪೀಠಾಧೀಶರು, ಮಾತೆ ಮಹಾದೇವಿಯವರು ಇವರೆಲ್ಲರಿಂದ ಸ್ವತಂತ್ರವಾದ ಗುರುಪೀಠ ಎಂದು ನಿಮ್ಮ ಹೆಸರನ್ನು ಪ್ರಸ್ತಾಪಿಸಿದ್ದರು. ನಿಮ್ಮ ಹೆಸರು ಪ್ರಸ್ತಾಪಿಸಿದ್ದೇಕೆ ಎಂದು ನಮಗೆ ಆಶ್ಚರ್ಯವಾಯಿತು. ಕಾರಣ ಏನಿರಬಹುದು? ಈ ಪ್ರಸ್ತಾಪದಿಂದ ನಮಗೆ ತುಂಬಾ ಅಸಮಧಾನವಾಗಿದೆ ?

★ ನನಗೂ ನಿಮ್ಮಷ್ಟೆ ಆಶ್ಚರ್ಯವಾಗಿದೆ. ಅಧಕ್ಕೆ ಅಂದರೆ ಪಂಚಮಸಾಲಿಯವರು ಜಾತಿಪೀಠ ಮಾಡಿಕೊಳ್ಳುವುದಕ್ಕೆ ನಮಗೆ ಯಾವ ಸಂಬಂಧವೂ ಇಲ್ಲ. ಹಿಂದಿನ ಕಲ್ಯಾಣ ಕಿರಣವೊಂದರಲ್ಲಿ ವಿಶ್ಲೇಷಿಸಿದ್ದೆ ಪ್ರಮುಖ ಮಠಗಳು ಕೆಲವೇ ಉಚ್ಚ ಜಾತಿಯ ಲಿಂಗಾಯತರ ಹಿಡಿತಕ್ಕೆ ಸಿಕ್ಕಿಬಿದ್ದುದರಿಂದ ಇತರ ಲಿಂಗಾಯತ ಉಪಜಾತಿಯಗಳವರು ತಮ್ಮ ಹಿತರಕ್ಷಣೆಗಾಗಿ ಪ್ರತ್ಯೇಕ ಮಠಗಳನ್ನು ಸ್ಥಾಪಿಸಿಕೊಂಡರು. ಪಂಚಮಸಾಲಿಯವರು ಅಜ್ಞಾನದಿಂದ ಪಂಚ ಎಂಬ ಒಂದು ಪದದ ಮೇಲೆ ಪಂಚ ಪೀಠದ ಭಕ್ತರಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಹೀಗಾಗಿ ಕೆಲವು ಜಾಗೃತ ಮುಖಂಡರು ಪ್ರತ್ಯೇಕ ಗುರು ಪೀಠದ ಪ್ರಯತ್ನದಲ್ಲಿದ್ದಾರೆ. ಎಂದು ಬರೆದಿದ್ದೆ. ನಾವೇನು ಚಿತ್ರದುರ್ಗದ ಬೃಹನ್ಮಠದವರಂತೆ ಎಲ್ಲ ಜಾತಿಜನಾಂಗಗಳ ಆಸ್ತಿಯ ಮೇಲೆ ಕಣ್ಣು ಹಾಕಿ, ಕಬಳಿಸಬೇಕೆಂಬ ಜಾಯಮಾನದವರಲ್ಲ. ಅಂದಾಗ ನಮ್ಮ ಹೆಸರನ್ನು ಏಕೆ ಎಳೆದು ತಂದರು ಎಂದು ನನಗೇ ಆಶ್ಚರ್ಯವಾಯಿತು. ಚಿತ್ರದುರ್ಗ ಬೃಹನ್ಮಠದ ಹಿಂದಿನ ಗುರುಗಳು ಸರ್ಪಭೂಷಣ ಮಠದ ಒಂದು ವ್ಯಾಜ್ಯ ನಡೆದಾಗ ಎಲ್ಲ ವಿರಕ್ತಮಠಗಳು ತಮ್ಮ ಮಠದ ಅಧೀನ ಮಠಗಳು ಎಂದು ಅಫಿಡವಿಟ್ ಸಲ್ಲಿಸಿದರು. ಆಗ ಅನೇಕ ಮಠಗಳವರು ಜಾಗೃತರಾಗಿ ತಮ್ಮ ಮಠಗಳ ದಾಖಲೆ ಪತ್ರ ಭದ್ರಪಡಿಸಿಕೊಂಡರು. ಈಗಿನವರು ಇನ್ನೂ ಬುದ್ಧಿವಂತರು. ಎಲ್ಲ ಜಾತಿ ಉಪಜಾತಿಗಳಿಗೆ ತಮ್ಮ ಗರಡಿಯಲ್ಲಿ ಪಳಗಿದವರನ್ನು ಸ್ವಾಮಿಯಾಗಲು ಬಿಟ್ಟು ಭಸ್ಮಾಸುರನಂತೆ ಎಲ್ಲ ಸಮಾಜಗಳ ತಲೆಯ ಮೇಲೆ ಕೈ ಇಡುತ್ತಿದ್ದಾರೆ. ಅದೇ ತಂತ್ರ ಆ ಪತ್ರಿಕಾ ಹೇಳಿಕೆಯಲ್ಲಿಯೂ ಕಾಣಬರುತ್ತಲಿದೆ.

☐ ಜಯಶ್ರೀ ಬಸವರಾಜ ಶಿವಪುರ, ಹಾವೇರಿ

?. ಲಿಂಗಾಯತ ಪಂಚಮಸಾಲೆ ಜನರು ಗುಡ್ಡಾಪುರದ ದಾನಮ್ಮನನ್ನು ತಮ್ಮ ಕುಲದೇವತೆ ಎಂದು ತಿಳಿದಿರುವ ಕಾರಣವೇನು? ಆ ತಾಯಿ ಪಂಚಮಸಾಲೆ ಜನಾಂಗದವರೆ?

★ ನಾನು ಮೊದಲು ಹಾಗೆಯೇ ಭಾವಿಸಿದ್ದೆ. ನಂತರ ದಾನಮ್ಮನ ಚರಿತ್ರೆ, ಓದಿ, ತಿಳಿದ ಮೇಲೆ ಆ ಊಹೆ ಸರಿಯಲ್ಲವೆನಿಸಿತು. ಶ್ರೀ ಸಿದ್ಧರಾಮೇಶ್ವರರನ್ನು ನೊಳಂಬ ಸಮಾಜದವರು, ಮರುಳು ಸಿದ್ಧರನ್ನು ಸಾದರ ಸಮಾಜದವರು, ದಾನಮ್ಮನನ್ನು ಪಂಚಮಸಾಲೆಯವರು ತಮ್ಮ ಕುಲಗುರುಗಳೆಂದು ಗೌರವಿಸುವರು. ಆ ಮಹಾತ್ಮರು ಅದೇ ಜಾತಿಗಳಲ್ಲಿ ಹುಟ್ಟಿದ್ದಕ್ಕಿಂತ ಮಿಗಿಲು ಈ ಸಮಾಜಗಳನ್ನು ಲಿಂಗಾಯತ ಧರ್ಮಕ್ಕೆ ಕರೆ ತಂದವರಾಗಿದ್ದಾರೆ. ಸಿದ್ಧರಾಮೇಶ್ವರರು ಕುಡು ಒಕ್ಕಲಿಗ ಮನೆತನದವರು, ನೊಳಂಬ ಸಮುದಾಯಕ್ಕೆ ದೀಕ್ಷಾಗುರುಗಳು, ಮರುಳು ಸಿದ್ಧರು ಮಾದಾರ ಸಮಾಜದವರು,, ಶೂದ್ರ ಸಮುದಾಯಕ್ಕೆ ಸೇರಿದ್ದ ಒಕ್ಕಲುತನವೇ ಪ್ರಮುಖ ಕಾಯಕವಾಗಿದ್ದ ಸಾದರನ್ನು ಲಿಂಗಾಯತ ಧರ್ಮಕ್ಕೆ ಕರೆತಂದರು. ದಾನಮ್ಮನ ಹೆಸರು ಲಿಂಗಮ್ಮ; ಅಕ್ಕಸಾಲಿ ಮನೆತನದಲ್ಲಿ ಹುಟ್ಟಿದವರು. ಉತ್ತರ ಕರ್ನಾಟಕದ ಪಂಚಮಸಾಲಿಯವರನ್ನು ದೀಕ್ಷೆಯ ಮೂಲಕ ಲಿಂಗಾಯತ ಧರ್ಮಕ್ಕೆ ತಂದಳು. ಹೀಗಾಗಿ ದೀಕ್ಷೆ ನೀಡಿದವರನ್ನು ಕುಲಗುರುಗಳೆಂದು ಗೌರವಿಸುವ ಸಂಪ್ರದಾಯ ಸಾಗಿ ಬಂದಿದೆ.

☐ ಫ.ಸೊ.ಬೇವಿನಗಿಡದ, ನಿವೃತ್ತ ಶಿಕ್ಷಕರು, ಬಸವ ನಗರ, ಧಾರವಾಡ

?. ದಾವಣಗೇರಿಯಲ್ಲಿ ಪಂಚಮಸಾಲಿಯವರು ಒಂದು ರ್‍ಯಾಲಿ ಮಾಡಿ, ಆ ಜನಾಂಗಕ್ಕೆ ಪ್ರತ್ಯೇಕ ಗುರುಪೀಠ ಸ್ಥಾಪಿಸಲು ಠರಾವು ಮಾಡಿದ್ದಾಗಿ ದಿನ ಪತ್ರಿಕೆಯಲ್ಲಿ ಓದಿದ್ದೇವೆ. ಹಾಗೇನಾದರೂ ಆದರೆ ಪಂಚಪೀಠಾಧೀಶರು ಪರದೇಶಿಗಳಾಗುವುದಿಲ್ಲವೆ?

★ ಪ್ರಶ್ನೆ ಬಹಳ ಸ್ವಾರಸ್ಯಕರವಾಗಿದೆ. ಭೂ ಮಾಲಿಕರು, ಶ್ರೀಮಂತರು ಆಗಿರುವ ಪಂಚಮಸಾಲಿಯವರ

ಪುಷ್ಕಳ ಗುರುಭಕ್ತಿಯಿಂದಲೇ ಪಂಚ ಪೀಠಗಳು ಮತ್ತು ಅವರ ಪರಂಪರೆಯ ಶಾಖಾ ಮಠಗಳು ಅತ್ಯಂತ ಸಮೃದ್ಧವಾಗಿವೆ. ಅವರ ಜನಾಂಗದ ಪ್ರತ್ಯೇಕ ಗುರುಪೀಠವಾದರೆ. ಪಂಚಪೀಠಾಧೀಶರಿಗೆ ಮೂಲ ಸೆಲೆ ಬತ್ತಿದಂತಾಗುತ್ತದೆ. ಆದರೂ ಅವರು ಧೈರ್ಯಗೆಡುವುದಿಲ್ಲ. ಅಡ್ಡಪಲ್ಲಕ್ಕಿ ಉತ್ಸವದಂತಹ ಲಾಭದಾಯಕ ದಂಧೆ ಮೂಲಕ ಹಣ ಗಳಿಸಬೇಕೆಂಬ ಕೆಲವು ವ್ಯಾಪಾರಸ್ಥರು, ರಾಜಕೀಯ ಮುಖಂಡರು ಪ್ರತಿ ಊರಲ್ಲಿ ಇದ್ದೇ ಇರುತ್ತಾರೆ. ಅವರು ಜಾತಿ ಪಂಥಾತೀತರು. ಅವರು ಅಡ್ಡಪಲ್ಲಕ್ಕಿ ಮಾಡಿಸುತ್ತಾರೆ.

?. ಎಸ್.ಜಿ.ಮಹಾದೇವಪ್ಪನವರು ಹೊಲೆಗಂಡಲ್ಲದೆ ಪಿಂಡದನೆಲೆಗೆ ಎಂಬ ವಚನಕ್ಕೆ ವ್ಯಾಖ್ಯಾನ ಮಾಡುತ್ತ ಕರ್ಣದಲ್ಲಿ ಜನಿಸಿದವರುಂಟೆ ಬದಲು 'ವರ್ಣ' ದಲ್ಲಿ ಎಂದಿರಬೇಕು ಎನ್ನುತ್ತಾರೆ. ಈ ಬಗ್ಗೆ ತಮ್ಮ ಅಭಿಪ್ರಾಯವೇನು?

★ ಅದು ಕರ್ಣದಲ್ಲಿ ಎಂದಿರಬೇಕು. ಈ ವಚನದ ಭಾವವೇನೆಂದರೆ ದೇವರ ಸೃಷ್ಟಿಯಲ್ಲಿ ಕೆಲವು ನಿಯಮ ನಿಬಂಧನೆ ಇವೆ. 'ಹೊಲೆ' (ಮುಟ್ಟು) ನಿಂತೇ ಮನುಷ್ಯ ಪಿಂಡವಾಗುವುದು. ಸಪ್ತಧಾತುಗಳಿಂದ ದೇಹ ಸಿದ್ಧವಾಗುವುದು, ಎಲ್ಲರೂ ಹುಟ್ಟುವುದೂ ಒಂದೇ ರೀತಿ, ಎಲ್ಲರಲ್ಲೂ ಆತ್ಮ-ದೇಹಗಳ ಸಂಯೋಗವಿದೆ. ಹೀಗಿದ್ದಾಗ ಹುಟ್ಟುತ್ತಲೇ ವರ್ಣ ವರ್ಗೀಕರಣ ಮಾಡುವುದು ಯಾವ ನ್ಯಾಯ? ಎಂದು ಹೇಳುತ್ತಾ ಜಗತ್ತಿನಲ್ಲಿ ಯಾರೂ ಕಿವಿಯಿಂದ ಹುಟ್ಟಲು ಸಾಧ್ಯವಿಲ್ಲ ಎಂದು ಹೇಳಿರುತ್ತಾರೆ. ಒಂದು ವೇಳೆ ಮಹಾಭಾರತದ ಕರ್ಣ ಹಾಗೆ ಹುಟ್ಟಿದ್ದಾನೆ ಎಂದರೆ ಅದು ಅಸಂಬದ್ಧ ನಂಬಿಕೆ, ಅಸಾಧ್ಯ ಕ್ರಿಯೆ! ಎಲ್ಲರ ಹುಟ್ಟು ಒಂದೇ ಬಗೆಯಾದ್ದರಿಂದ ಹುಟ್ಟಿನಿಂದಲೇ ಮೇಲು-ಕೀಳೆಂದು ಯಾರನ್ನೂ ವಿಂಗಡಿಸಬಾರದು ಎಂದು ಗುರು ಬಸವಣ್ಣನವರ ಅಭಿಪ್ರಾಯ. ಆದ್ದರಿಂದ ಕರ್ಣ-ಕಿವಿ ಎಂಬ ಪದವೇ ಸರಿ!

☐ ಅಶೋಕ ಅಳ್ನಾವರ, ಅವರಾದಿ, ತಾ-ಕಿತ್ತೂರು

?. ನಮ್ಮ ತಾಲ್ಲೋಕಿನ ವಿವಿಧ ಗ್ರಾಮಗಳಲ್ಲಿ ತರುಣರ ಸಂಘಟನೆ ಮಾಡುತಿದ್ದೇವೆ. ನಮ್ಮ ಒಬ್ಬ ಮಿತ್ರ ಎರಡು ಪ್ರಶ್ನೆಗಳನ್ನು ಕೇಳುತ್ತಿದ್ದಾನೆ. ಒಂದು, ನಿಮ್ಮ ಮಾತಾಜಿಯವರು ಷಡ್‌ಗಣಾಧೀಶರ ಪರಿಕಲ್ಪನೆ ಕೊಟ್ಟುದು ಬಹಳ ಸಂತೋಷ. ಆದರೆ ಅಷ್ಟಗಣಾಧೀಶರು ಎಂದು ಹೊಸದಾಗಿ ಮಾಡಿ ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಮತ್ತು ತಮ್ಮ ಹೆಸರನ್ನು ಸೇರಿಸಿದ್ದಾರೆ. ಇದು ಸರಿಯೆ? ಈ ಪ್ರಶ್ನೆಗೆ ನಾನು ಹೇಳಿದ್ದೇನೆ. ಏನು ತಪ್ಪು? 12ನೆಯ ಶತಮಾನದ ನಂತರ ಬಸವ ತತ್ತ್ವದ ಪುನರುತ್ಥಾನದ ಚಳುವಳಿ ಆರಂಭಿಸಿ, ಸ್ಥಾಯಿಗೊಳಿಸಿದವರು ಇವರುಗಳಲ್ಲವೆ? ನನ್ನ ಈ ಉತ್ತರ ಸರಿಯೆ? ಆತನ ಎರಡನೆಯ ಪ್ರಶ್ನೆ, ಪಾದ ನಮಸ್ಕಾರ, ಪಾದ ಪೂಜೆ ನಿಷೇಧದ ಘೋಷಣೆ ಪೂಜ್ಯ ಮಾತಾಜಿ ಮಾಡಿ, ವಿಚಾರಶೀಲರ ಮೆಚ್ಚುಗೆ ಗಳಿಸಿಕೊಂಡರು. ಆದರೆ ಅದನ್ನು ನಿಲ್ಲಿಸಲಿಲ್ಲ. ಮುಂದುವರಿಸಿದ್ದಾರೆ. ಇವೆರಡು ಪ್ರಶ್ನೆಗಳಿಗೆ ಉತ್ತರ ಸಿಕ್ಕರೆ ನಮ್ಮ ಸಂಘಟನೆಗೆ ದುಡಿಯುವುದಾಗಿ ಹೇಳುತ್ತಾನೆ.

★ ಈವರೆಗೂ ನಾವಂತೂ ಅಷ್ಟಗಣಾಧೀಶರ ಪರಿಕಲ್ಪನೆ ಎಲ್ಲೆಲ್ಲೂ ಘೋಷಿಸಿಲ್ಲ, ಪ್ರಕಟಿಸಿಲ್ಲ ಷಡ್‌ಗಣಾಧೀಶರ ಬಗ್ಗೆ ಮಾತ್ರ ಮಾಲೆ ಮಾಡಿದ್ದೇವೆ. ಒಂದು 8 ನುಡಿಗಳ ಲಿಂಗಾಷ್ಟಕದ ದಾಟಿಯಲ್ಲಿ ಶರಣರ ಅಷ್ಟಕ ಬರೆದು 6 ಜನ ಗಣಾಧೀಶರ ಜೊತೆಗೆ ಹುತಾತ್ಮ ಚೇತನ ಹರಳಯ್ಯ, ವಚನ ಸಾಹಿತ್ಯ ರಕ್ಷಣೆ ಮಾಡಿದ ವೀರಮಾತೆ ಅಕ್ಕಗನಾಲಾಂಬಿಕೆ, ದಾಸೋಹ ಮೂರ್ತಿ ನೀಲಾಂಬಿಕೆಯ ಹೆಸರು ಸೇರಿಸಿದ್ದೇನೆ. ಆದ್ದರಿಂದ ನಿಮ್ಮ ಮಿತ್ರರಲ್ಲಿ ಉಂಟಾಗಿರುವ ಈ ಸಂದೇಹ ಸರಿಯಲ್ಲ. ನಮಗೆ ಗೊತ್ತಿಲ್ಲದೆ ಯಾರಾದರೂ ಹಾಗೆ ಷಡ್‌ಗಣಾಧೀಶರ ಹೆಸರಿನ ಜೊತೆ ಪೂಜ್ಯ ಗುರುಗಳ ಮತ್ತು ನಮ್ಮ ಹೆಸರು ಸೇರಿಸಿರುವರೋ ಗೊತ್ತಿಲ್ಲ. ಅತಿ ಅಭಿಮಾನದಿಂದ ಯಾರಾದರೂ ಹಾಗೆ ಮಾಡಿದ್ದರೆ ಆರಂಭದಲ್ಲೇ ಅವರನ್ನು ತಿದ್ದಬೇಕು. ಒಮ್ಮೆ ಶರಣ.ಕೊಂಡಾ ಬಸವರಾಜ್ ತೆಲುಗಿನಲ್ಲಿ ಪ್ರಕಟವಾದ ಒಂದು ಪುಸ್ತಕದಲ್ಲಿ ನಮ್ಮ ಷಟ್‌ಸೂತ್ರದ ಬದಲು ಸಪ್ತ ಸೂತ್ರ ಹಾಕಿದ್ದರು. ನಮಗಿಂತಲೂ ಒಂದು ಹೆಜ್ಜೆ ಮುಂದಿದ್ದೇವೆ ಎಂದರು. ಏಳನೆಯ ಸೂತ್ರ ಲಿಂಗಾಯತ ಧರ್ಮದ ಧರ್ಮಪೀಠ ಕೂಡಲ ಸಂಗಮದ ಬಸವ ಧರ್ಮ ಪೀಠ ಎಂದು ಘೋಷಿಸಿದ್ದರು. ಹೀಗೇಕೆ ಮಾಡಿದಿರಿ? ಎಂದು

ಆಕ್ಷೇಪಿಸಿದಾಗ, ಜನರು ಒಬ್ಬರಿಗೊಬ್ಬರು ಮಾತನಾಡುವಾಗ ನಿಮ್ಮದು ಯಾವ ಪೀಠ? ಎಂದು ಕೇಳುತ್ತಾರೆ. ಅನೇಕ ಲಿಂಗಾಯತರು ಗೊತ್ತಿಲ್ಲದೆ ತಬ್ಬಿಬ್ಬಾಗುತ್ತಾರೆ. ಅದಕ್ಕೆ ನಮ್ಮದು ಬಸವ ಧರ್ಮ ಪೀಠ ಎಂದು ಹೇಳಲು ತರಬೇತಿ ಕೊಡುತ್ತಿದ್ದೇವೆ ಎಂದರು. ಹೀಗೆ ನಮಗೇ ಗೊತ್ತಿಲ್ಲದೆ ಕೆಲವರು ತಾವು ತಾವೇ ಏನೇನೋ ಮಾಡಿರುತ್ತಾರೆ. ಅದು ಅಧಿಕೃತ ನಿರ್ಣಯವಲ್ಲ. ಅದಕ್ಕೆ ನಾವು ಹೊಣೆಗಾರರಲ್ಲ. ಇನ್ನು ಪಾದಪೂಜೆ, ಪಾದ ನಮಸ್ಕಾರದ ವಿಷಯ. ಇದನ್ನು ನಿಷೇಧಿಸಬೇಕೆಂದು 1996ರ ಜನವರಿಯಲ್ಲೇ ಘೋಷಿಸಲಾಯಿತು. ಆಶ್ಚರ್ಯದ ಸಂಗತಿ ಎಂದರೆ ಕೂಡಲ ಸಂಗಮದೇವ ವಚನಾಂಕಿತ ಬಿಟ್ಟು ಲಿಂಗದೇವ ವಚನಾಂಕಿತ ಅಳವಡಿಸಿಕೊಂಡ ತತ್ತ್ವನಿಷ್ಠರು, ಏಕದೇವೋಪಾಸಕರು ಸಹ ಪಾದ ನಮಸ್ಕಾರ/ ಪೂಜೆ ಬಿಡಲು ಒಪ್ಪಲಿಲ್ಲ. ಗುರುಗಳ ಅನುಗ್ರಹ ಪಡೆಯುವ ವಿಧಾನವಿದು; ಇರಲೇ ಬೇಕು ಎಂದರು. ಪಾದೋದಕ ಕೊಡುವ / ತೆಗೆದುಕೊಳ್ಳುವ ಪದ್ಧತಿ ಕೈಬಿಡಲಾಗಿದೆ. (ಧಾರವಾಡದ 4-5 ಜನ ಶರಣೆಯರಷ್ಟೇ ಹಟ ಮಾಡಿ ಪಾದೋದಕ ಪಡೆಯುತ್ತಾರೆ.) ನಾವು ಮಾತ್ರ ಕರುಣೋ(ಹಸ್ತೋ)ದಕ, ಇಷ್ಟಲಿಂಗೋದಕ ಮಾತ್ರ ಈಗ ಕೊಡುವುದು. ಕ್ರಿಯಾ ಮೂರ್ತಿಗಳಿಗೂ ಅದೇ ರೀತಿ ತರಬೇತಿ ನೀಡುತ್ತಿದ್ದೇವೆ.

ಪಾದ ನಮಸ್ಕಾರದ ಬಗ್ಗೆ ನನಗೆ ಅದನ್ನು ಬಿಡಿಸಲೇಬೇಕೆಂಬ ಇಚ್ಛೆ ಇದೆ. ಯಾವ ರೀತಿ ಜಾರಿಗೆ ತರಬೇಕು ಆಲೋಚಿಸುತ್ತಿದ್ದೇನೆ. ಕಾವಿಬಟ್ಟೆಯವರನ್ನು ಕಂಡ ತಕ್ಷಣ ಗ್ರಾಮಾಂತರ ಪ್ರದೇಶದ ಜನ ದುಡು ದುಡು ಕಾಲಿಗೆ ಬೀಳುತ್ತಾರೆ. ಅದರಲ್ಲಿ ಗುರು-ಶಿಷ್ಯ ಬಾಂಧವ್ಯವೂ ಇರದು; ತಿಳುವಳಿಕೆಯೂ ಇರದು. ಕಾರ್ಯಕ್ರಮಕ್ಕೆ ಹೋಗುವಾಗ ಮುಗಿಬೀಳುತ್ತಾರೆ; ಎಲ್ಲೆಂದರಲ್ಲೇ ಮುಖ ಕಂಡ ತಕ್ಷಣ ನಮಸ್ಕರಿಸುವುದರಿಂದ ಧೂಳು ಎದ್ದು ಗಂಟಲು, ಮೂಗು ಸೇರುತ್ತದೆ. ಹೊಟ್ಟೆ ಕೆಡುತ್ತದೆ. ಸೋಂಕು ಕಾಯಿಲೆಗಳವರು ಹತ್ತಿರ ಬಂದು ಬಗ್ಗಿ ನಮಸ್ಕರಿಸುವುದು ಆರೋಗ್ಯಕರವೂ ಅಲ್ಲ. ರಸ್ತೆಗಳಲ್ಲಿ ಸಾಗುವಾಗ ಕೊಡಗಟ್ಟಲೆ ನೀರು ತಂದು ಪಾದಕ್ಕೆ ಸುರಿದು ನೀರನ್ನು ವ್ಯರ್ಥ ಮಾಡಿ, ನೆಲವನ್ನು ರಾಡಿ ಮಾಡುವುದೇ ಅಲ್ಲದೆ ನಮ್ಮ ಬಟ್ಟೆಗಳನ್ನು ನೀರು ಸುರಿದು ತೋಯಿಸುತ್ತಾರೆ. ಜನಗಳ ಈ ಅತಿರೇಕದ ಭಕ್ತಿ ನೋಡಿದಾಗ ಹಸನ್ಮುಖಿಗಳಾಗಿ ಆಶೀರ್ವದಿಸಬೇಕೆಂಬ ಬದಲಿಗೆ ಸಿಟ್ಟು ಬರುತ್ತದೆ. ನಮಸ್ಕಾರಕ್ಕೆ ಜನರು ನುಗ್ಗುವುದು ಕಂಡಾಗ ಎಂಥಾ ಅನಾಗರೀಕತೆ, ಅಸಂಸ್ಕೃತಿ! ಎನಿಸುತ್ತದೆ. ಸಾಲಾಗಿ ನಿಂತು ಶರಣು ಎಂದು ಕೈ ಜೋಡಿಸಿ ನಮಸ್ಕರಿಸಿ, ಪ್ರಸಾದ ಪಡೆದು ಮುಂದೆ ಸಾಗಿದರೆ ಸುಸಂಸ್ಕೃತಿ ಎಂದು ಎನಿಸುತ್ತದೆ. ಕೆಲವರು ಅನ್ನುತ್ತಾರೆ, "ಪಾದ ನಮಸ್ಕಾರ ಬಿಡಿಸಿದರೆ ಕಾಣಿಕೆ ಕೊಡುವವರ ಸಂಖ್ಯೆ ಕಡಿಮೆಯಾಗುತ್ತದೆ. ಗುರುಗಳು, ಮಠಗಳು ಹೇಗೆ ಬೆಳೆಯಬೇಕು?'' ಗುರುಗಳಿಗೆ, ಮಠಗಳಿಗೆ ಕೊಡುವುದು ಕರ್ತವ್ಯ ಎಂಬ ಭಾವ ಬೆಳೆಸಿ, ಕೈ ಜೋಡಿಸಿ ಶರಣು ಮಾಡಿ ಕಾಣಿಕೆ ಕೊಡುವ, ನಂತರ (ಕಲ್ಲು ಸಕ್ಕರೆ) ಪ್ರಸಾದ ಪಡೆಯುವ ಅಭ್ಯಾಸ ರೂಢಿ ಮಾಡಿದರೆ ನೋಡಲು ಶಿಸ್ತು ಎನಿಸುತ್ತದೆ; ಅನ್ಯ ಧರ್ಮೀಯರ ಅಪಹಾಸ್ಯಕ್ಕೂ ತುತ್ತಾಗುವುದು ತಪ್ಪುತ್ತದೆ. ಇದನ್ನು ರೂಢಿಸುವ ಉಪಾಯ ಯೋಜಿಸಬೇಕು ನಾವು-ನೀವುಗಳೆಲ್ಲರು.

ನಾಗಶೆಟ್ಟಿ ಶೆಟಕಾರ, ರಾ.ಬ.ದಳ, ಬೀದರ

?. ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ಸಮಿತಿಯಲ್ಲಿ ರಾಜೇಶ್ವರದ ಪಂಚಾಚಾರ್ಯ ಸ್ವಾಮಿಗಳನ್ನು ತೆಗೆದುಕೊಳ್ಳಲಿಲ್ಲ ಎಂದು ಆಕ್ಷೇಪಿಸಿ, ಇದಕ್ಕೆ ಕಾರಣ ಶಾಸಕ ಪ್ರಕಾಶ್ ಖಂಡ್ರೆ ಎಂದು ಭೀಮಣ್ಣ ಖಂಡ್ರೆ ಬಸವ ಜಯಂತಿಯಂದು ನಡೆದ ಸಾರ್ವಜನಿಕ ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಆರೋಪ-ಪ್ರತ್ಯಾರೋಪಗಳು ವೇದಿಕೆಯ ಮೇಲೆಯೇ ನಡೆದವು. ಇನ್ನು ಸ್ವಾಮಿಗಳು ತಾವು 20 ಲಕ್ಷ ರೂ ವಾರ್ಷಿಕವಾಗಿ ಭೂಮಿಯಲ್ಲಿ ಬೆಳೆ ತೆಗೆಯುವುದಾಗಿ ಠೇಂಕರಿಸಿದರು? ನಿಮ್ಮನ್ನು ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿಗೆ ಸದಸ್ಯರನ್ನಾಗಿ ತೆಗೆದುಕೊಳ್ಳಲು ನಾವು ಪ್ರಯತ್ನಿಸಬೇಕೆಂದು ಇದ್ದೇವೆ.

★ ರಾಜಕಾರಣಿಗಳು ಯಾವುದೇ ವೇದಿಕೆ ಇರಲಿ, ತಮ್ಮನ್ನು ಮೆರೆಸಿಕೊಳ್ಳಲು ತಮ್ಮ ವಿರೋಧಿಗಳನ್ನು ಟೀಕಿಸಲು ಸದಾ ಕಾಳಗಕ್ಕೆ ಸಿದ್ಧವಾದ ಟಗರಿನಂತೆ ರೆಡಿ ಇರುತ್ತಾರೆ. ಬಸವ ಜಯಂತಿ ದಿನ ಗುರು ಬಸವಣ್ಣನವರ ಗುಣಗಾನ ಮಾಡಲು ಮನಸ್ಸೂ ಇರದು; ಬುದ್ಧಿಯೂ ಇರದು. ಇನ್ನು ಸ್ವಾಮಿಗಳು ತಾವು 20 ಲಕ್ಷ ರೂ ವಾರ್ಷಿಕವಾಗಿ ಭೂಮಿಯಲ್ಲಿ ಬೆಳೆ ತೆಗೆಯುವುದಾಗಿ ಠೇಂಕರಿಸಿದರು. ಬಹುಪಾಲು ಸ್ವಾಮಿಗಳು ದೊಡ್ಡ ಗೌಡರು ಆಗಿ ಬೆಳೆ ತೆಗೆಯುತ್ತಾರೆ. ವಿದ್ಯಾ ಸಂಸ್ಥೆಗಳ ವಿಪುಲ ಹಣದ ಮೂಲಕ ಮಾರ್ವಾಡಿಗಳಂತೆ ಹಣ ಸಂಪಾದನೆ ಮಾಡುತ್ತಾರೆ. ಗುರುಗಳ ಕರ್ತವ್ಯವಾದ ಧರ್ಮಬೋಧೆ ಬಿಟ್ಟು ಬೇರೆ ಮಾಡುತ್ತಿರುವುದರಿಂದಲೇ ಲಿಂಗಾಯತ ಸಮಾಜವೂ ಅಜ್ಞಾನದ ದಾರಿಯಲ್ಲಿ ಸಾಗುತ್ತಿರುವುದು. ಅದ್ಯಾವ ದೊಡ್ಡ ಸಾಧನೆ ಎಂದು ಸ್ವಾಮಿಗಳು ಹೇಳಿಕೊಂಡರೋ!

ನೀವು ಮಾತ್ರ ಅಂಥ ಸಮಿತಿಗೆ ನಮ್ಮನ್ನೂ ತೆಗೆದುಕೊಳ್ಳುವುದಕ್ಕೆ ಯಾವುದೇ ರೀತಿ ಪ್ರಯತ್ನಿಸಬೇಡಿ. ಅಲ್ಲಿ ಏನಿದ್ದರೂ ಶ್ರೀ ಜಾಮದಾರರವರು ಹೇಳಿದ್ದು ಸರಿ ಇರಲಿ, ತಪ್ಪಿರಲಿ ಮೌನವಾಗಿ ತಲೆ ಹಾಕುವವರಿಗೆ ಸ್ಥಾನವೇ ವಿನಾ ಸ್ವತಂತ್ರ ಬುದ್ಧಿ ಇದ್ದವರಿಗಲ್ಲ. ಇದಕ್ಕೆ ಜ್ವಲಂತ ಸಾಕ್ಷಿ ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರ ಕಟ್ಟಿರುವ ಧಾರ್ಮಿಕ ಅರ್ಥವೇ ಇಲ್ಲದ ಮೊದಲ ಮಹಾದ್ವಾರ, ಅದರ ಮೂಲೆಗಳಲ್ಲಿರುವ ಎತ್ತುಗಳು; ನಂತರ ಸರ್ಕಲ್‌ದಲ್ಲಿರುವ ಕುರೂಪದ ಮುದ್ದೆಯಾಗಿರುವ ಬಸವಣ್ಣನವರ ಮೂರ್ತಿ. ಅವು ಸೂಕ್ತವಲ್ಲ ಎಂದು ಸ್ಥಳೀಯರು, ಪ್ರವಾಸಿಕರು ಗಂಟಲು ನೋಯುವಂತೆ ಹೇಳಿದರೂ ಜಾಮದಾರ್ ತಮ್ಮ ವಿಚಾರ ಬದಲಿಸುವುದಿಲ್ಲ. ಆದ್ದರಿಂದ ಅವರು ಮಾಡುವುದನ್ನು ನೋಡಿ ಚಂದವಿದ್ದರೆ ಸಂತೋಷಪಡೋಣ; ಒಳಗಿದ್ದು ತಪ್ಪಿನಲ್ಲಿ ಪಾಲುಗಾರರಾಗುವುದು ಬೇಡವೇ ಬೇಡ.

ಕರಿಬಸಪ್ಪ ಕೋರಿಶೆಟ್ಟರು, ಹಾನುಗಲ್

?. ಲಿಂಗಾಯತ ಧರ್ಮೀಯರನ್ನೆಲ್ಲ ತತ್ತ್ವದ ಆಧಾರದ ಮೇಲೆ ಒಟ್ಟುಗೂಡಿಸಬೇಕೆಂಬ ಉತ್ಕಟ ಹಂಬಲದಿಂದ ನೀವು ಶ್ರಮಿಸುತ್ತಿದ್ದೀರಿ. ಆದರೆ ದಿನದಿನಕ್ಕೆ ಒಳ ಪಂಗಡಗಳ ಸೀಳುವಿಕೆ ಜಾಸ್ತಿಯಾಗುತ್ತಿದೆ, ಜಾತಿ ಪ್ರಜ್ಞೆ ಬೆಳೆಯುತ್ತಿದೆ. ಇದರಿಂದ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಸಿಗುವುದು ಅಸಾಧ್ಯವಾಗುವುದಲ್ಲವೆ?

★ ರಾಜಕೀಯ ಆಕಾಂಕ್ಷೆಯ ಜನ ಸಮಾಜ ಮತ್ತು ಧರ್ಮದ ಶುಚಿಯನ್ನು ಕೆಡಿಸುತ್ತಿದ್ದಾರೆ. ಉದಾತ್ತ ಉದ್ದೇಶವಿಲ್ಲದೆ ಸ್ವಹಿತಕ್ಕಾಗಿ ಏನೆಲ್ಲ ಕಾರ್ಯದಲ್ಲಿ ನಿರತರಾಗುತ್ತಾರೆ, ಒಬ್ಬ ವಿದೇಶಿ ಒಮ್ಮೆ ಹೇಳಿದನಂತೆ, ನಾನು ಮಹಾರಾಷ್ಟ್ರೀಯರನ್ನು ಕಂಡೆ, ಬೆಂಗಾಲಿಯನ್ನು ಕಂಡೆ, ಗುಜರಾತಿಯನ್ನು ಕಂಡೆ ಭಾರತದಲ್ಲಿ ಭಾರತೀಯನನ್ನು ಕಾಣಲಿಲ್ಲ" ಎಂದು. ಅದೇ ರೀತಿ ಸಾದರನ್ನು ಕಂಡೆ, ಇಂದಿನ ಲಿಂಗಾಯತ ಸಮಾಜದಲ್ಲಿ ಆಯ್ನೋರನ್ನು ಕಂಡೆ, ಬಣಜಿಗರನ್ನು ಕಂಡೆ, ಪಂಚಮಸಾಲಿಯವರನ್ನು ಕಂಡೆ, ರೆಡ್ಡಿಯವರನ್ನು ಕಂಡೆ ಆದರೆ ಲಿಂಗಾಯತರನ್ನು ಕಾಣಲಿಲ್ಲ ಎಂದು ನಾವು ವಿಷಾದದಿಂದ ಹೇಳಬೇಕಾಗುತ್ತಿದೆ.

ಒಂದು ಧರ್ಮಕ್ಕೆ ಮಾನ್ಯತೆ ಸಿಗುವುದು ಸಂಖ್ಯಾ ಗಾತ್ರದ ಮೇಲಲ್ಲ; ಅದರ ಸತ್ವದ ಮೇಲೆ! ಒಮ್ಮೊಮ್ಮೆ ಈ ಸಮಾಜದಲ್ಲಿ ಏಕಾದರೂ ಹುಟ್ಟಿದೆವೊ ಎಂಥಾ ಸಂಕುಚಿತತೆ, ದ್ವೇಷ, ಮತ್ಸರ, ಜಾತೀಯತೆ ತುಂಬಿ ತುಳುಕುತ್ತದೆ ಎಂಬ ನೋವಿನ ಛಳುಕು ಮನದಲ್ಲಿ ಹಾಯ್ದು ಹೋದರೂ ಅಪ್ಪ ಗುರು ಬಸವಣ್ಣನವರ ಮುದ್ದು ಮುಖ ನೋಡುತ್ತ ಅವರ ಜೊತೆ ಮಾತನಾಡುತ್ತ ಅವರ ವ್ಯಕ್ತಿತ್ವ ಅರಿತು ಅವರ ಮಾತೃ ಹೃದಯದ ವಾತ್ಸಲ್ಯವನ್ನು ಉಂಡಾಗ ಮತ್ತು ಆದಿ ಶರಣರ ವಚನಗಳನ್ನು ಓದುತ್ತಾ ಮನದಲ್ಲಿ "ಬಸವ ಮಹಾಮನೆ" ಯ ಭವ್ಯ-ದಿವ್ಯ ಸೌಧವನ್ನು ಕಟ್ಟಿ ಅದರಲ್ಲಿ ಅಲೆದಾಡಿ ಆನಂದಿಸುವಾಗ "ಇಂಥ ಮಹಾಗುರುವನ್ನು ಪಡೆದ ನಾವು ಧನ್ಯರು, ಇಂಥ ಧರ್ಮದಲ್ಲಿ ಹುಟ್ಟಿದ್ದಕ್ಕೆ ಪಾವನರಾದೆವು." ಎಂಬ ಧನ್ಯತಾ ಭಾವ ಮೂಡಿ ಹರ್ಷವೆನಿಸುತ್ತದೆ. ಆದ್ದರಿಂದ ಗುರು

ಬಸವಣ್ಣ-ವಚನ ಸಾಹಿತ್ಯ ಇವೆರಡರ ಬಲದ ಮೇಲೆಯೇ ಸ್ವತಂತ್ರ ಧರ್ಮದ ಮಾನ್ಯತೆಯ ಭರವಸೆಯ ಬೆಳಕು ಇರುವುದೇ ವಿನಾ ಕೊಳಚೆ ಗುಂಡಿಯಂತಾಗಿರುವ ಲಿಂಗಾಯತ ಸಮಾಜದ ಬಲದ ಮೇಲಿಂದಲ್ಲ.

ಶಿವಶರಣಪ್ಪ ವಲ್ಲೇಪುರೆ, ಶಿಕ್ಷಕ, ಬೆಳಕುಣಿ, ಬೀದರ್

? ದಿ.11-5-2006ರಂದು ಎಕಲಾರ ಗ್ರಾಮದಲ್ಲಿ ನಿಮ್ಮ ಸನ್ನಿಧಿಯಲ್ಲಿ ಆದ ಬಸವ ತತ್ತ್ವ ಸಮಾವೇಶ ಅದ್ಭುತ ಪರಿಣಾಮ ಉಂಟು ಮಾಡಿದೆ. ನಮ್ಮ ಭಾಗದಲ್ಲಿ ಕೆಲವರು ಪಂಚಾಚಾರ್ಯ ಗುಂಪಿನ ಸ್ವಾಮಿಗಳಿದ್ದು ಧಾರ್ಮಿಕ ಕ್ರಿಯೆ ಮಾಡಲು ಬಂದು ಜನರಿಗೆ ದಿಕ್ಕು ತಪ್ಪಿಸುವ ವಿಚಾರ ಹೇಳುತ್ತಾರೆ. ಬಸವಣ್ಣ ಗುರುವಲ್ಲ, ಗೃಹಸ್ಥರು ರುದ್ರಾಕ್ಷಿ ಧರಿಸಬಾರದು. ಮದುವೆಯಲ್ಲಿ ಅಕ್ಷತೆ-ಅಕ್ಕಿ ಅಥವಾ ಜೋಳ ಹಾಕಬೇಕೇ ವಿನಾ ಹೂವು ಹಾಕಬಾರದು. ಸತ್ತವರ ತಲೆ ಮೇಲೆ ಮಾತ್ರ ಹೂವು ಹಾಕುವುದು. ಪಂಚಪೀಠದವರ ಸಂಕೇತವಾಗಿಯೇ ಕೆಂಪು ಕುಂಕುಮ, ಹಸಿರು ಬಳೆ ಮುಂತಾಗಿ ಹಾಕುವುದು. ಹೆಣ್ಣು ಮಕ್ಕಳು ಕೈಲಿ ಬಳೆ ಹಾಕಬೇಕೇ ವಿನಾ ರುದ್ರಾಕ್ಷಿ ಕಟ್ಟಬಾರದು. ಇತ್ಯಾದಿ ಇವರನ್ನು ತಿದ್ದುವುದು ಹೇಗೆ?

★ ಪುರೋಹಿತ ವರ್ಗವನ್ನು ತಿದ್ದುವುದು ಸಾಧ್ಯವಿಲ್ಲ, ಜನರು ಮುಗ್ಧರಿರುತ್ತಾರೆ. ಅವರನ್ನು ತಿದ್ದಬೇಕು. ಅದಕ್ಕೆ ಹೆಚ್ಚು ಜನ ಬೋಧಕರು ಮತ್ತು ಕ್ರಿಯಾ ಮೂರ್ತಿಗಳು ತಯಾರಾಗಬೇಕು. ರಜಾ ದಿನಗಳಲ್ಲಿ ನಿಮಗೆ ತಿಳಿದಷ್ಟು ಬೋಧೆ ಮಾಡಿರಿ. ರುದ್ರಾಕ್ಷಿ ಅಷ್ಟಾವರಣಗಳಲ್ಲೊಂದು. ಯಾರು ಬೇಕಾದರೂ ಧರಿಸಬಹುದು. ಪುಷ್ಪವು ಮಂಗಲದ ಸಂಕೇತ. ಅಂತೆಯೇ ಮಹಿಳೆಯರು ಮುಡಿಯುತ್ತಾರೆ, ಪೂಜೆಗೆ ಬಳಸಲಾಗುತ್ತದೆ. ಅಕ್ಕಿಯ ಕಾಳನ್ನು ಜನರು ಎಸೆದು, ಕಾಲಲ್ಲಿ ತುಳಿದು ವ್ಯರ್ಥ ಮಾಡುವುದು ಕಂಡಾಗ ತುಂಬಾ ದುಃಖವೆನಿಸುತ್ತದೆ. ಪುಷ್ಪವನ್ನು ಹಾಕಬೇಕೆಂದು ತಿಳಿಸಿದ್ದರೂ ನಮಗೆ ಗೊತ್ತಾಗದಂತೆ ಜನರ ಕೈಗೆ ಅಕ್ಷತೆ ಕೊಟ್ಟೇ ಬಿಡುತ್ತಾರೆ. ಹೆಣ್ಣು ಮಕ್ಕಳು ಧರಿಸುವ ಕುಂಕುಮ, ಬಳೆಯಂತಹ ಸಾಮಾನ್ಯ ಲಾಂಛನಗಳಿಗೆ ಪಂಚಪೀಠದವರು ಧ್ವಜದ ಬಣ್ಣ ಕಲ್ಪಿಸುತ್ತಾರೆ ಎಂಬುದು ಅವರಲ್ಲಿ ಯಾವ ತಾತ್ತ್ವಿಕ ಹಿನ್ನೆಲೆ ಇಲ್ಲದ್ದಕ್ಕೆ ಸಾಕ್ಷಿಯಾಗುತ್ತದೆ. ಜನಸಾಮಾನ್ಯರು ವಚನ ಸಾಹಿತ್ಯ ಓದುವುದು ಬಿಡಿಸಿ, ಪುನಃ ವೇದಾಗಮಗಳ ಮೊರೆ ಹೋಗುವಂತೆ ಮಾಡಿ ವೈದಿಕ ಆಚರಣೆಗಳನ್ನು ಜನರಲ್ಲಿ ತುರುಕಿದ್ದು ಪುರೋಹಿತ ವರ್ಗವೆ! ಆದ್ದರಿಂದ ಅವರನ್ನು ತಿದ್ದುವ ಬದಲು ನೀವೆಲ್ಲರೂ ಜ್ಞಾನಿಗಳಾಗಿ ಕುಂತಲ್ಲಿ ನಿಂತಲ್ಲಿ ವಚನ ಸಾಹಿತ್ಯವನ್ನು ಪ್ರಚಾರ ಮಾಡುವುದೇ ಅಲ್ಲದೆ ಕ್ರಿಯಾ ಮೂರ್ತಿಗಳಾಗಿ ಧಾರ್ಮಿಕ ವಿಧಿ ವಿಧಾನ ನೆರವೇರಿಸಲು ಆರಂಭಿಸಿರಿ.

ಕಲ್ಯಾಣ ಕಿರಣ ತಲುಪುವಲ್ಲಿ ಅಸ್ತವ್ಯಸ್ಥತೆ

ಕೆಲವೊಂದು ತಾಂತ್ರಿಕ ಕಾರಣಗಳಿಂದಾಗಿ ಕಲ್ಯಾಣ ಕಿರಣ ಮಾಸಪತ್ರಿಕೆ ಓದುಗರಿಗೆ ಸರಿಯಾಗಿ ತಲುಪುತ್ತಿಲ್ಲ. ವಿಳಾಸಗಳನ್ನು ಸರಿ ಪಡಿಸುವ ಕೆಲಸ ನಡೆಯುತ್ತಿದೆ. ಆದ್ದರಿಂದ ಶರಣ ಬಂಧುಗಳು ಪತ್ರಿಕೆಯು ಬೇರೆಯವರ ಮನೆಗೆ ತಲುಪಿ, ತಮ್ಮ ಮನೆಗೆ ಬಂದಿಲ್ಲದಿದ್ದರೆ ಒಂದು ಪತ್ರ ಬರೆದು ತಿಳಿಸಬೇಕಾಗಿ ನಮ್ರ ವಿನಂತಿ. ಬಹುಶಃ ಪತ್ರಿಕೆ ಮುದ್ರಣಗೊಂಡಿರಲಿಕ್ಕಿಲ್ಲ ಎಂದು ಸುಮ್ಮನಿದ್ದು ಬಿಡುವ ಸಂಭವವಿದೆ. ಅವರ ಮನೆಗೆ ತಲುಪಿಸುವವರು ತಮ್ಮ ಪರಿಚಿತ ಶರಣ ಬಂಧುಗಳಲ್ಲಿ ಅವರಿಗೆ ಬಂದಿದೆಯೋ ಇಲ್ಲವೋ ಎಂದು ಕೇಳಿರಿ. ದೂರವಾಣಿ ಮೂಲಕ ಮತ್ತು ನಮ್ಮ ಸಂಸ್ಥೆಯ ಯಾರಾದರೂ ಭೇಟಿಯಾದಾಗ ಅವರಿಗೆ ತಿಳಿಸುವ ಮೂಲಕ ಕೆಲಸವಾಯಿತೆಂದು ಭಾವಿಸಬಾರದು. ಅವರು ಬೇರೆ ಕಡೆ ಪ್ರವಾಸಕ್ಕೆ ಹೊರಟು ನಿಮ್ಮ ವಿಷಯ ಮರೆಯಬಹುದು. ಪತ್ರಿಕೆ ಬರದೆ ಇದ್ದರೆ ಒಂದು ಪೋಸ್ಟ್ ಕಾರ್ಡ್ ಬರೆದು ಬೆಂಗಳೂರಿನ ಬಸವ ಮಂಟಪಕ್ಕೆ ಕಳಿಸಿರಿ. ನಿಮ್ಮ ಪತ್ರದಲ್ಲಿ ಮರೆಯದೆ ನಿಮ್ಮ ಪೂರ್ತಿ ವಿಳಾಸವನ್ನು ಕೊಡಿರಿ. ಕೆಲವರು ತಮಗೆ ಪತ್ರಿಕೆ ಬರಲಿಲ್ಲವೆಂದು ಕೋಪದಿಂದ ಪತ್ರ ಬರೆದಿರುತ್ತಾರೆ. ಆದರೆ ಪತ್ರದಲ್ಲಿ ವಿಳಾಸವನ್ನೇ ಬರೆದಿರುವುದಿಲ್ಲ. ಆಗ ವ್ಯವಹರಿಸುವವರು ಹೇಗೆ ವ್ಯವಹರಿಸಲು ಸಾಧ್ಯ? ಆದ್ದರಿಂದ ಪತ್ರದಲ್ಲಿ ನಿಮ್ಮ ಕ್ರಮ ಸಂಖ್ಯೆ ಮತ್ತು ಪೂರ್ಣ ವಿಳಾಸ ಇರಲಿ.

-ವ್ಯವಸ್ಥಾಪಕರು, ಕಲ್ಯಾಣ ಕಿರಣ

ಲಿಂಗನಿಷ್ಠೆ

-ಮಾತೆ ಕಸ್ತೂರಿದೇವಿ

ಅನ್ಯ ದೈವವ ಬಿಟ್ಟುದಕ್ಕೆ ಆವುದು ಕ್ರಮವೆಂದರೆ
ಅನ್ಯ ದೈವವ ಮನದಲ್ಲಿ ನೆನೆಯಲಾಗದು
ಅನ್ಯ ದೈವದ ಮಾತನಾಡಲಾಗದು.
ಅನ್ಯ ದೈವದ ಪೂಜೆಯ ಮಾಡಲಾಗದು
ಸ್ಥಾವರಲಿಂಗಕ್ಕೆರಗಲಾಗದು, ಆ ಲಿಂಗ ಪ್ರಸಾದವ ಕೊಳಲೆಂತೂ ಬಾರದು
ಇಷ್ಟು ನಾಸ್ತಿಯಾದರೆ ಆತ ಅನ್ಯದೈವವ ಬಿಟ್ಟು ; ಲಿಂಗವಂತನೆನಿಸಿಕೊಂಬನು
ಇವರೊಳಗೆ ಅನುಸರಣೆಯ ಮಾಡಿಕೊಂಡು
ನಡೆದನಾದೊಡೆ ಅವರಿಗೆ ಕುಂಭೀ ಪಾತಕ
ನಾಯಕ ನರಕ ತಪ್ಪದು ಕಾಣಾ ಕೂಡಲ ಚನ್ನಸಂಗಮ ದೇವಾ

- ಚನ್ನಬಸವಣ್ಣನವರು, 117

ಚಿನ್ಮಯ ಜ್ಞಾನಿ, ಷಟಸ್ಥಲಾಚಾರ್ಯರೆನಿಸಿದ ಚನ್ನಬಸವಣ್ಣನವರು ನಿಜಲಿಂಗಾಯತನು ತನ್ನ ಜೀವನದಲ್ಲಿ ಅನುಸರಿಸಬೇಕಾದ ಅತಿಮುಖ್ಯವಾದ ಏಕಲಿಂಗ ನಿಷ್ಠೆಯ ಬಗ್ಗೆ ಹೇಳುತ್ತಾ, ಈ ವಚನದಲ್ಲಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಅನ್ಯ ದೈವವ ಅಂದರೆ ಜಗತ್ಕರ್ತ, ವಿಶ್ವದ ಪರಮೋನ್ನತ ಶಕ್ತಿಯಾದ ಪರಮಾತ್ಮನನ್ನು ಬಿಟ್ಟು ಉಳಿದ ಬೇರೆ ಕಾಕು ಪೋಕು ದೇವತೆಗಳ ವಿಷಯವನ್ನು ಬಿಟ್ಟಿರುವುದಕ್ಕೆ ಸಾಕ್ಷಿಯಾಗಿ ನಮ್ಮ ನಡೆ ನುಡಿ ಹೇಗಿರಬೇಕೆಂಬ ನಿಯಮಾವಳಿಯನ್ನು ರೂಪಿಸಿ ಕೊಟ್ಟಿದ್ದಾರೆ. ಮೊದಲು ಬೇರೆ ದೈವಂಗಳನ್ನು ಮನದಲ್ಲಿ ನೆನೆಯುವುದು ಅಪರಾಧ, ಇವರ ದೃಷ್ಟಿಯಲ್ಲಿ ಅಂಥ ಅನಗತ್ಯ ಜೀವನಕ್ಕೆ ಯಾವುದೇ ರೀತಿಯಲ್ಲಿ ಉಪಯೋಗವಿಲ್ಲದ ವ್ಯರ್ಥ, ಕಾಲ್ಪನಿಕ ವಿಷಯಗಳ ಬಗ್ಗೆ ಮಾತಾಡುವುದು ಸಲ್ಲದು. ಮಾತ್ರವಲ್ಲ ಅನ್ಯ ದೈವಗಳ ಪೂಜೆ ಸಹ ನಿಷಿದ್ಧ. ಅಷ್ಟೇ ಏಕೆ ?! " ಲಿಂಗ ಅಂದರೆ ಎಲ್ಲವೂ ಒಂದೇ" ಎಂಬ ಅಜ್ಞಾನದಿಂದ ಅಥವಾ ಹಿಂದಿನಿಂದ ಬಂದ ಸಂಪ್ರದಾಯವೆಂದು, ಹಾದಿ ಬೀದಿಗಳಲ್ಲಿ ಪ್ರತಿಷ್ಠಾಪನೆಗೊಂಡಿರುವ ಸ್ಥಾವರಲಿಂಗಗಳಿಗೆ ನಮಸ್ಕರಿಸಬಾರದು ; ಅದರ ತೀರ್ಥ - ಪ್ರಸಾದಗಳನ್ನು ಸ್ವೀಕರಿಸಬಾರದು ಎಂದು ಆದೇಶಿಸುತ್ತಾರೆ. ಈ ನಿಷ್ಠೆಯನ್ನು ಅಳವಡಿಸಿಕೊಂಡಾಗ ಮಾತ್ರ ಅವನು ಲಿಂಗವಂತ; ಲಿಂಗಾಯತ ಎಂದು ಅನಿಸಿಕೊಳ್ಳಲು ಸಾಧ್ಯ. ಇಂಥ ನಡೆ-ನುಡಿಗಳನ್ನು ಅಳವಡಿಸಿಕೊಳ್ಳಲು ಅಸಮರ್ಥವಾಗಿ ಅನ್ಯದೈವದ ಪೂಜೆ, ಸ್ಮರಣೆ, ಭಜನೆ ಮುಂತಾದುವನ್ನು ಮಾಡುವವನು ಅನೇಕ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾನೆ. ಎಂದು ಅಂಥವನನ್ನು ಕರ್ಮಬಂಧನಕ್ಕೆ ದೂಡುತ್ತಿದ್ದಾರೆ. ತನ್ಮೂಲಕ ದಾರಿ ತಪ್ಪಿರುವ; ತಪ್ಪುತ್ತಿರುವ ಲಿಂಗಾಯತರಿಗೆ ಬುದ್ಧಿ ಹೇಳುತ್ತಿದ್ದಾರೆ.

ಇಂಥ ವಚನಗಳನ್ನು ನೇರವಾಗಿ ಪ್ರತಿಪಾದಿಸಿದಾಗ ಕೆಲವರಿಗೆ ಸಿಟ್ಟು ಬರುತ್ತದೆ. ಮತ್ತೆ ಕೆಲವು ದುರ್ಬಲ ಮನಸು-ಬುದ್ಧಿ ಇರುವ ಜನ ಅದುರುತ್ತಾರೆ; ಹೆದರುತ್ತಾರೆ; ನಡುಗುತ್ತಾರೆ. ಕಾರಣಗಳಂತೂ ಬಲು ವಿಚಿತ್ರವಾಗಿವೆ. ಮೊದಲಿಗೆ "ಇಂಥ ಸದೃಢ ವಿಚಾರಗಳನ್ನು ತಡೆದುಕೊಳ್ಳುವ ಶಕ್ತಿಯಿಲ್ಲ" ಎಂದು ಸುಲಭವಾಗಿ ತಮ್ಮ ದುರ್ಬಲತೆಯನ್ನು ಒಪ್ಪಿಕೊಳ್ಳುತ್ತಾರೆ. ಇನ್ನು ಕೆಲವರು ಕೂಡಲ ಸಂಗಮದೇವ -ಲಿಂಗದೇವ ಇದರ ಸರಿಯಾದ ಸ್ಪಷ್ಟವಾದ ತಾತ್ತ್ವಿಕ ಪರಿಕಲ್ಪನೆ ಹೊಂದದೆ ಅರೆ ಪ್ರಜ್ಞಾವಸ್ಥೆಯ ಅಭಿಪ್ರಾಯಗಳನ್ನು ತಮ್ಮ ಭಾಷಣಗಳಲ್ಲಿ, ಪತ್ರಿಕೆಗಳಲ್ಲಿ ವ್ಯಕ್ತಪಡಿಸಿ ಜನಸಾಮಾನ್ಯರನ್ನು ಮತ್ತಷ್ಟು ಗೊಂದಲಕ್ಕೆ ದೂಡಿ ತಾವು "ಕೈಲಾಗದವನು ಮೈ ಪರಚಿಕೊಂಡ" ಎಂಬಂತೆ ಅಸಮರ್ಥತೆಯಲ್ಲಿ ತೊಳಲುತ್ತಾರೆ; ಬಳಲುತ್ತಾರೆ. ಕೆಲವು ಸಂಘ ಸಂಸ್ಥೆಗಳ ಗಣ್ಯರೂ, ನೇತಾರರೂ, ಜನನಾಯಕರೂ, ಮಠಾಧೀಶರೂ ಲಿಂಗಾಯತ ಸಮಾಜದ ಅನೈಕ್ಯತೆಯ ವಿಷಾದ ಗೀತೆಯೊಂದಿಗೆ; ಐಕ್ಯತೆಯ ಅಂತರ್ಗತ ಬಯಕೆಯ ಆಲಾಪನೆಯೊಂದಿಗೆ, ಯಾವ ತತ್ತ್ವದ ಅಡಿಯಲ್ಲಿ ಸಂಘಟಿಸಬೇಕೆಂಬ ದ್ವಂದ್ವಗಳ ನಡುವೆ ದಿಕ್ಕು ತೋಚದ ದುಃಸ್ಥಿತಿಯಲ್ಲಿ ವ್ಯರ್ಥ ಪ್ರಯತ್ನ-ಸಾಹಸದಲ್ಲಿ ತೊಡಗಿದ್ದಾರೆ. ಗುಂಪುಗಾರಿಕೆಯ ಬಿಡಿ

ಬಿಡಯಾದ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಾರೆ. ಅದರಲ್ಲೇ ಒಣ ಹೆಮ್ಮೆ ಪ್ರದರ್ಶಿಸುತ್ತಾರೆ.

ಲಿಂಗಾಯತ ಸಮಾಜದ ಜನನಾಯಕರೊಬ್ಬರು ಸಮಾರಂಭದಲ್ಲಿ ಮಾತನಾಡುತ್ತಾ "ಲಿಂಗಾಯತರ ಮನೆಯ ಪೂಜಾಗೃಹಗಳು ಅನೇಕ ದೇವತೆಗಳಿಂದ ಅಲಂಕರಿಸಲ್ಪಟ್ಟು ಮ್ಯೂಸಿಯಂಗಳಾಗಿವೆ. ಇದನ್ನು ಬಿಟ್ಟು ಲಿಂಗಾಯತರು ಇಷ್ಟಲಿಂಗ ಪೂಜೆಗೆ ಮರಳಬೇಕು." ಎಂದು ಹೇಳಿದ್ದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಲಿಂಗಾಯತರಲ್ಲಿ ಸ್ವಲ್ಪಮಟ್ಟಿಗೆ ಪ್ರಜ್ಞಾವಂತಿಕೆ ಮೂಡುತ್ತಿದೆ ಎನಿಸಿತು. ಅಷ್ಟರಲ್ಲೇ ಆ ಗಣ್ಯರು ಬೇರೆ ಬೇರೆ ಗುಡಿಗುಂಡಾರಗಳಿಗೆ ಭೇಟಿ ಕೊಟ್ಟು ಶ್ರದ್ಧೆಗಳಿಂದ ಶಿರಬಾಗಿ ನಮಸ್ಕರಿಸುತ್ತಿರುವ ಚಿತ್ರಗಳನ್ನು ಪತ್ರಿಕೆಗಳು ಪ್ರಕಟಿಸಿದವು. ಇದರಿಂದ ಕೆಲವರು ತಿಳಿದೂ ತಿಳಿದೂ ತಪ್ಪುಗಳನ್ನು ಮಾಡುತ್ತಿರುತ್ತಾರೆ ಎಂಬುದು ಗೋಚರವಾಗುತ್ತಿದೆ.

"ದೇವನೊಬ್ಬ; ನಾಮ ಹಲವು" ಎಂಬ ತತ್ತ್ವವನ್ನು ಕಂಡರೇ ದೂರ ಸರಿಯುತ್ತಾರೆ. ಬದಲಿಗೆ "ದೇವರು ನೂರು; ರೂಪವೂ ನೂರು" ಎಂದು ನಂಬಿ ಮುನ್ನಡೆಯುತ್ತಾರೆ.

ವಿಶ್ವಗುರು ಬಸವಣ್ಣನವರು "ವಿಶ್ವದಾಕಾರದಲ್ಲಿ ರೂಪಿಸಿಕೊಟ್ಟಿರುವ ವಿಶ್ವಾತ್ಮನ ಕುರುಹಾದ ಇಷ್ಟಲಿಂಗವನ್ನು" ಪಾತಿವ್ರತ್ಯ ಭಕ್ತಿಯಿಂದ ದೃಢವಾಗಿ ನೆರೆನಂಬಲು ಹಿಂಜರಿಯುತ್ತಾರೆ. ಇಂಥವರನ್ನು ಕುರಿತೇ ಧರ್ಮಪಿತರು,

ನಂಬರು ನಚ್ಚರು ಬರಿದೇ ಕರೆವರು
ನಂಬಲರಿಯರೀ ಲೋಕದ ಮನುಜರು

ಎಂದು ಆಕ್ಷೇಪಿಸುತ್ತಿರುವುದು. ಅಂದಾಗ ಇಂಥವರಿಗೆ ತಾತ್ತ್ವಿಕ ಪ್ರತಿಪಾದನೆಯಾದ ಲಿಂಗದೇವನ ಪಾಠ ಹೇಗೆ ಹಿಡಿಸುತ್ತದೆ; ಒಗ್ಗುತ್ತದೆ?! ಇಂಥ ಜಡಮತಿಯರಿಗೆ ನಂಬುವುದನ್ನು ಕಲಿಸುವುದು ಹೇಗೆ? ತಿಳಿಸಿ ಹೇಳುವುದು ಹೇಗೆ? ಧರ್ಮಪಿತರ ವಚನವೊಂದು ಹೀಗೆ ನುಡಿಯುತ್ತದೆ.

ನಂಬಿದ ಹೆಂಡತಿಗೆ ಗಂಡನೊಬ್ಬನೇ ಕಾಣಿರೋ,
ನಂಬ ಬಲ್ಲ ಭಕ್ತಂಗೆ ದೇವನೊಬ್ಬನೇ ಕಾಣಿರೋ,
ಬೇಡ ! ಬೇಡ ! ಪರ ದೈವದ ಸಂಗ ಹೊಲ್ಲ
ಬೇಡ ! ಬೇಡ ! ಅನ್ಯ ದೈವವೆಂಬುದು
ಹಾದರ ಕಾಣಿರೋ
ಲಿಂಗದೇವ ಕಂಡಡೆ ಮೂಗ ಕೊಯ್ಯುವ ಕಾಣಿರೋ !

-ಬ.ವ.ದೀ-615

ಇದಕ್ಕಿಂತ ಸ್ಪಷ್ಟವಾದ ವಚನ ಬೇಕೆ? ನೋಡಿ, ಅದೆಷ್ಟು ಚನ್ನಾಗಿ ಹೇಳಿದ್ದಾರೆ. ಈಗಾಗಲೇ ಮದುವೆ ಮಾಡಿಕೊಂಡು ಪತಿಯನ್ನು ಹೊಂದಿರುವ ಸದ್‌ಗೃಹಿಣಿಯೋರ್ವಳು ತನ್ನ ಪತಿಯ ಹೊರತಾಗಿ ಉಳಿದ ಪರಪುರುಷರ ಬಗ್ಗೆ ಹೇಗೆ ಅಲಕ್ಷ್ಯದಿಂದಿರುತ್ತಾಳೋ ಹಾಗೇ ನಂಬಬಲ್ಲ ಅಂದರೆ ಸದೃಢವಾದ, ಸಚ್ಚಾರಿತ್ರ್ಯವುಳ್ಳ ನಂಬಿಕೆಯನ್ನು ಬೆಳೆಸಿಕೊಳ್ಳಲು ಸಮರ್ಥನಾದ ಸದ್ಭಕ್ತನಿಗೆ ದೇವರು ಒಬ್ಬನೇ ಆಗಿರುತ್ತಾನೆ ಅವನ ಪಾಲಿಗೆ ಉಳಿದ ದೈವಂಗಳ ಸಂಗ, ಆರಾಧನೆ ಎಲ್ಲಾ ಹಾದರಕ್ಕೆ ಸಮಾನ ಎಂದು ಸತ್ಯ ನಿಷ್ಠುರವಾಗಿ ಆದೇಶಿಸುತ್ತಾರೆ. ತಾಯಿ ತಂದೆಯರು ತಮ್ಮ ಮಕ್ಕಳು ತಪ್ಪುದಾರಿಗೆ ಹೋಗದಿರಲಿ ಎಂದು ಎಚ್ಚರಿಸುವಂತೆ, ಬುದ್ಧಿಹೇಳುವಂತೆ "ಬೇಡ ! ಬೇಡ !" ಎಂದು ಅತ್ಯಂತ ಕಳಕಳಿ, ಪ್ರೀತಿ, ಮಮತೆಗಳಿಂದ ಬುದ್ಧಿ ಹೇಳುತ್ತಿದ್ದಾರೆ. ಆದರೆ ಇಂಥ ಮಮತಾಮಯಿ ಗುರು, ತಂದೆ, ಬಂಧು, ಬಳಗ ಎಲ್ಲವೂ ಆಗಿರುವ ಬಸವಣ್ಣನವರನ್ನು ಹೊಂದಿರುವುದು ನಮ್ಮ ಭಾಗ್ಯ ಎಂದು ಎಷ್ಟು ಜನರಿಗೆ ಅನಿಸುತ್ತಿದೆ ?!

ಧರ್ಮಪಿತರ ವಚನಗಳಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ತಮ್ಮ ದಾರಿಗೆ ಬರಲಪೇಕ್ಷಿಸುವ ಭಕ್ತನನ್ನು ತಿದ್ದಿ ತೀಡಿ, ಪರಿಪೂರ್ಣನನ್ನಾಗಿ ಮಾಡಬೇಕೆಂಬ ಹಂಬಲದಲ್ಲಿ ಆತನ ಉಳಿದ ದೌರ್ಬಲ್ಯಗಳನ್ನು ಮರುಕದಿಂದ ನೋಡಿದರೂ, ಅವಗುಣಗಳನ್ನು ಕೆಲವೊಮ್ಮೆ ಕ್ಷಮಿಸಿದರೂ,

"ಏಕದೇವ ವಿಶ್ವಾಸವನ್ನು" ಬಿತ್ತುವ ಮತ್ತು ಕಲಿಸುವ ವಿಷಯದಲ್ಲಿ ಮಾತ್ರ ಇಂಥ ಕರುಣೆ, ಸಹನೆ, ತಾಳ್ಮೆ ಎಲ್ಲಿಯೂ ಕಂಡುಬರುವುದಿಲ್ಲ. ಮಾತ್ರವಲ್ಲ ತಮ್ಮೊಂದು ವಚನದಲ್ಲಿ ಹೀಗೆ ಅಸಹನೆಯನ್ನು ವ್ಯಕ್ತಪಡಿಸುತ್ತಾರೆ.

ನೀನಲ್ಲದನ್ಯ ದೈವವುಂಟೆಂಬವನ ಬಾಯ
ಕೆನ್ನೆವಾರೆ ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯ
ಎನ್ನ ಕೋಪವಡಗದಯ್ಯ !
ಎನ್ನ ಬಿನ್ನಪವನವಧರಿಸು ಲಿಂಗದೇವಾ

-ಬ.ವ.ದೀ-748

ಧರ್ಮಪಿತರ ಲಿಂಗನಿಷ್ಠೆಯನ್ನು ಅನುಸರಿಸಿ ಇತರ ಶರಣರು ಬರೆದ ಕೆಲವು ವಚನಗಳನ್ನು ಉಲ್ಲೇಖಿಸೋಣ.

ಶ್ರೀಗುರು ಕರುಣಿಸಿ ಕೊಟ್ಟ ಇಷ್ಟಲಿಂಗವನು
ಉರದಲಿ ಧರಿಸಿಕೊಂಡು, ಅದು ದೇವರೆಂದು ನಂಬದೆ
ಧರೆಯ ಮೇಲಣ, ಕಂಡ ಕಂಡ ಕಲ್ಲ ದೈವವೆಂದು
ಕಲ್ಪಿಸಿ ಹರಿದಾಡುವ ಭಂಡ ಮಾದಿಗರ ಭಕ್ತರೆಂದರೆ
ಅಘೋರ ನರಕ ತಪ್ಪದಯ್ಯ ಅಖಂಡೇಶ್ವರಾ

- ಶ್ರೀ ಷಣ್ಮುಖ ಶಿವಯೋಗಿಗಳು

ಈ ವಚನದ ಪ್ರಕಾರ ಹಲವು ದೈವಂಗಳ ಹಿಂದೆ ಹರಿದಾಡುವವರನ್ನು "ಭಕ್ತರು" ಎಂದು ಪರಿಗಣಿಸುವುದು ಅಪರಾಧವಾಗಿದೆ. ಏಕೆಂದರೆ ವಚನ ಸಾಹಿತ್ಯದ ಮೊದಲ ಪಾಠವೇ ಜಗತ್ತಿನ ಪಿತನಾದ ಪರಮಾತ್ಮನು ಒಬ್ಬನೇ ಎಂದು ನಂಬಲು ಕಲಿಸುವುದು. ಅಂದಾಗ ಇವರು ಒಂದನೇ ತರಗತಿಗೆ ಸೇರಲು ಸಹ ಅರ್ಹರಲ್ಲ ಎಂದಂತಾಯಿತು. ಈ ಮಾತಿಗೆ ಪುಷ್ಟಿ ಕೊಡಲು ಸಿದ್ಧವಾಗಿದೆ ಮಡಿವಾಳ ಮಾಚಿ ತಂದೆಯವರ ಮತ್ತೊಂದು ಪುಟ್ಟದಾದ ವಚನ :

ತನ್ನ ಲಿಂಗವ ಬಿಟ್ಟು
ಅನ್ಯ ಲಿಂಗಕ್ಕೆ ಶರಣೆಂಬ
ಕುನ್ನಿಗಳನೇನೆಂಬೆನಯ್ಯಾ ಕಲಿದೇವರ ದೇವಾ ?

- ವ.ಸಂ-615

ಮೇಲಿನ ವಚನಭಾವಕ್ಕೆ ಮೈಲಾರದ ಬಸವ ಲಿಂಗ ಶರಣರ ವಚನವೊಂದು ಹೇಗೆ ಹೆಗಲು ಕೊಡುತ್ತಿದೆ ಎಂದು ನೋಡಿರಿ.

ಕುನ್ನಿಗನ್ನ ಪಾನವ ಹಾಕಲು ನಿನ್ನ
ಮನೆಯ ರಾತ್ರಿಯೊಳೆಲ್ಲ ಕಾಯುವುದು
ಶುನಿಗಿಂತ ಕರಕಷ್ಟ ದೈವವ
ನಿನ್ನ ಮನೆಯ ದೇವರೆಂದು ಭಜಿಸುವೆ
ಛೀ ಹೆಡ್ಡ, ನೀ ಎಂಥ (ಶಿವ) ಭಕ್ತ?
ಕ್ರಿಯಾ ಬಾಹ್ಯ ದೈವಂಗಳಿಗೆರಗುವೆ.

(ಆಧಾರ-ಲಿಂಗ ತತ್ತ್ವದರ್ಪಣ)

ಇಂಥ ಅಸಂಖ್ಯಾತ ವಚನಗಳು ಸಿಗುತ್ತವೆ. ಆದರೆ ಇವರೆಲ್ಲ ಈ ವಚನಗಳನ್ನು ತಮಾಷೆಗಾಗಿ ಬರೆದರೆ ಅವರಿಗೆ ಮಾಡಲು ಬೇರೆ ಕೆಲಸ ಇರಲಿಲ್ಲವೆ ? ಯಾವ ಉದ್ದೇಶದಿಂದ ವಚನಗಳನ್ನು ರಚಿಸಿದರು? ಅವುಗಳನ್ನು ಉಳಿಸಿ ಬೆಳೆಸಲು ತಮ್ಮ ತನು-ಮನ-ಧನ-ಪ್ರಾಣ - ಅಭಿಮಾನಗಳನ್ನು ಮೀಸಲಿಟ್ಟು ದುಡಿದಿದ್ದು ಏಕೆ ? ಮುಂದಿನ ಜನಾಂಗ ವಚನಗಳ ಬಲದಿಂದ ಯಾರ ಹಂಗಿಗೂ ಒಳಗಾಗದೆ ಸ್ವತಂತ್ರವಾಗಿ ಸದೃಢವಾಗಿ ರೂಪುಗೊಳ್ಳಲಿ ಎಂದಲ್ಲವೆ ? ಆದರೆ ಎಷ್ಟು ಜನ ಶರಣರ

ಇಂಥ ಪರಿಶ್ರಮ, ತ್ಯಾಗ, ಬಲಿದಾನಗಳನ್ನು ಅರ್ಥಮಾಡಿಕೊಂಡು ಋಣ ತೀರಿಸುವ ಸಂಕಲ್ಪ ಮಾಡುತ್ತಾರೆ? ಇಂಥ ವಚನಗಳನ್ನು ಕೇಳಿದರೂ, ಓದಿದರೂ, ಪಕ್ವ ಆಗಲಾರದಷ್ಟು ಮನಸ್ಸು, ಬುದ್ಧಿಗಳು ನಿಸ್ಸತ್ವಗೊಂಡಿವೆಯೆ ? ಜಡವಾಗಿವೆಯೆ ? ಈ ಪ್ರಶ್ನೆಗಳಿಗೆ ಸಾಮಾಜಿಕ ಹೊಣೆಗಾರಿಯುಳ್ಳ ಬೌದ್ಧಿಕ ಪ್ರಾಮಾಣಿಕತೆಯುಳ್ಳ ಪ್ರಾಜ್ಞರು ಉತ್ತರಿಸಬೇಕು.

ಇಷ್ಟೆಲ್ಲ ನಿಟ್ಟುಸಿರಿನೊಂದಿಗೆ ಕೆಲವು ಲಿಂಗಾಯತರಲ್ಲಿ ಕೊಂಚಮಟ್ಟಿಗೆ "ಲಿಂಗನಿಷ್ಠೆ" ಆಳವಟ್ಟಿದೆ ಎಂದು ನಂಬುವುದಾದರೆ ಅದು ಬಸವ ಧರ್ಮದ ಎರಡು ಧ್ರುವತಾರೆಗಳಾದ ಪ್ರವಚನ ಪಿತಾಮಹ ಪೂಜ್ಯ ಲಿಂಗಾನಂದ ಸ್ವಾಮೀಜಿಯವರ ಮತ್ತು ಅವರ ಅಗ್ರ ಗಣ್ಯ ಶಿಷ್ಯರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ತಾಯಿಯವರ ತ್ಯಾಗ, ಪರಿಶ್ರಮ ಮತ್ತು ಪ್ರಾಮಾಣಿಕ ಪ್ರಯತ್ನಗಳಿಂದ ಎಂಬುದನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳಬೇಕು. ಏಕೆಂದರೆ ಅಂಥ ಒಂದು ಅನುಭವವನ್ನು ನೋಡಿರಿ.

ಹದಿನಾಲ್ಕನೆಯ ಶರಣ ಮೇಳದಲ್ಲಿ, ಕೂಡಲ ಸಂಗಮದ ಬಸವ ಧರ್ಮ ಪೀಠದ ಆವರಣದಲ್ಲಿ, ಲಿಂಗಾಯತರನ್ನು ಬಸವ ಭಕ್ತರನ್ನು ಒಂದು ತತ್ತ್ವದ, ನಂಬಿಕೆಯ ಛಾವಣಿಯ ಕೆಳಗೆ ಸಂಘಟಿಸಬೇಕೆಂಬ ಘನ ಉದ್ದೇಶದಿಂದ ಗಣ ಲಿಂಗ ಮಂಟಪವನ್ನು ಸ್ಥಾಪಿಸಿದ್ದಾರೆ. ಇದರ ಒಂದು ಮುಖ್ಯವಾದ ನಿಯಮ, ಆಚರಣೆ ಏನೆಂದರೆ ಗಣಲಿಂಗದ ಆಂತರಂಗಿಕ ದರ್ಶನವನ್ನು ಪಡೆಯಬೇಕೆನ್ನುವವರು ಏಕಲಿಂಗ ನಿಷ್ಠೆಯ ಬಗ್ಗೆ ನಂಬಿಕೆಯುಳ್ಳವರಾಗಿ ಪ್ರತಿಜ್ಞೆಯನ್ನು ಸ್ವೀಕರಿಸಬೇಕೆಂಬುದು. ಅದರಂತೆ ದರ್ಶನಾಪೇಕ್ಷಿಗಳಾಗಿ ಬಂದವರಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಲು ನನ್ನನ್ನು ನೇಮಿಸಲಾಗಿತ್ತು. ಇದರಿಂದ ಲಿಂಗಾಯತ ಸಮಾಜದ ಒಳಹೊಕ್ಕು ನೋಡುವ ಸದವಕಾಶ ಸಿಕ್ಕಿದ್ದಕ್ಕೆ ನನಗೆ ಬಲು ಸಂತೋಷವಾಯಿತು. ಅಂದು ಸುಮಾರು ಬೆಳಿಗ್ಗೆ 6 ಗಂಟೆಯ ಸಮಯ ; ಸುಮಾರು 15-16 ವರ್ಷದ ಬಾಲಕನೋರ್ವ ಪ್ರತಿಜ್ಞೆ ಸ್ವೀಕರಿಸಲು ಸಿದ್ಧನಾಗಿ ಬಂದಿದ್ದು ನನಗೆ ಬಹಳ ಆಶ್ಚರ್ಯವನ್ನುಂಟು ಮಾಡಿತು. ದೊಡ್ಡ ದೊಡ್ಡ ಮಠಾಧೀಶರೇ ಲಿಂಗನಿಷ್ಠೆಗೆ ಹಿಂಜರಿಯುತ್ತಿರುವಾಗ ಚಿಕ್ಕ ಬಾಲಕನಲ್ಲಿ ಅದು ಹೇಗೆ ಬೇರೂರಿತು ಎಂದು ತಿಳಿಯುವ ಕುತೂಹಲವೂ ಉಂಟಾಯಿತು. ಅದರಂತೆ ಬಾಲಕನ ಸಂದರ್ಶನ ಪ್ರಾರಂಭವಾಯಿತು.

ನಾನು : ನಿನ್ನ ಹೆಸರೇನು ?
ಬಾಲಕ : ಬಸವ ಪ್ರಕಾಶ್.
ನಾನು : ವಯಸ್ಸು
ಬಾಲಕ : 16 ವರ್ಷ
ನಾನು : ಊರು.....?
ಬಾಲಕ : ಭದ್ರಾವತಿ
ನಾನು : ಈಗ ಇಲ್ಲಿಗೆ ಬಂದಿರುವ ಕಾರಣ ?
ಬಾಲಕ : ಶರಣ ಮೇಳಕ್ಕೆ ಬಂದಿರುವೆ. ಹಾಗೇಯೇ ಪ್ರತಿಜ್ಞೆ ಸ್ವೀಕರಿಸಲು ಇಲ್ಲಿಗೆ ಬಂದಿದ್ದೇನೆ.
ನಾನು : ಯಾರ್‍ಯಾರು ಬಂದಿದ್ದಾರೆ ? ನಿಮ್ಮ ತಾಯಿ ತಂದೆ ?
ಬಾಲಕ : ನಮ್ಮ ತಾಯಿ, ತಂದೆ ಬಂದಿದ್ದಾರೆ
ನಾನು : ಸರಿ ಅವರೇಕೆ ಪ್ರತಿಜ್ಞೆ ಸ್ವೀಕರಿಸಲು ಬಂದಿಲ್ಲ
ಬಾಲಕ : ಅವರು ಕಳೆದ ವರ್ಷವೇ ಸ್ವೀಕರಿಸಿದ್ದಾರೆ ಅದಕ್ಕೆ ಬಂದಿಲ್ಲ. ಈ ವರ್ಷ ನಾನು ಸ್ವೀಕರಿಸುತ್ತೇನೆ.
ನಾನು : ಸರಿ. ನಿನಗೆ "ದೇವರು ಒಬ್ಬನೇ ಅವನೇ ಜಗತ್ತಿನ ಪರಮೋನ್ನತ ಶಕ್ತಿ. ಅವನನ್ನು ಇಷ್ಟಲಿಂಗಾಕಾರದಲ್ಲಿ ಆರಾಧಿಸಬೇಕು" ಎಂಬುದರಲ್ಲಿ ನಂಬಿಕೆ ಇದೆಯೆ ?
ಬಾಲಕ : ಹೌದು !! ನಂಬಿಕೆ ಇರುವುದರಿಂದಲೇ ನಾನು ಇಲ್ಲಿಗೆ ಬಂದಿದ್ದು
ನಾನು : ಅಂದರೆ ಈಗ ನೀನಿನ್ನು ಚಿಕ್ಕವನು. ಮುಂದೆ ಜೀವನದಲ್ಲಿ ಈ ನಂಬಿಕೆ ಸಡಿಲಗೊಳ್ಳುವ

ಬಾಲಕ : ಹಾಗಾಗಲು ಸಾಧ್ಯವೇ ಇಲ್ಲ.(ಎಂದು ದೃಢಮನಸ್ಕನಾಗಿ ಹೇಳಿದ)
ನಾನು : ಏಕೆ ಸಾಧ್ಯವಿಲ್ಲ ?!
ಬಾಲಕ : ಏಕೆಂದರೆ ನಾನು ಚಿಕ್ಕವನಿದ್ದಾಗ ಅಂದರೆ 5-6 ವರ್ಷದವನಿದ್ದಾಗ ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರು ನಮ್ಮ ಊರಿನಲ್ಲಿ ಪ್ರವಚನ ಮಾಡಿದರು. ಆಗ ನಾನು ದಿನವೂ ತಪ್ಪದೆ ಪ್ರವಚನಕ್ಕೆ ಹೋಗುತ್ತಿದ್ದೆ. ಆಗ ಪೂಜ್ಯ ಅಪ್ಪಾಜಿಯವರ ದೇವರ ಸ್ವರೂಪ, ಅಸ್ತಿತ್ವ, ಇಷ್ಟಲಿಂಗದ ಅವಶ್ಯಕತೆಯ ಬಗ್ಗೆ ನಮಗೆಲ್ಲಾ ಚನ್ನಾಗಿ ಮನವರಿಕೆ ಮಾಡಿಕೊಟ್ಟಿದ್ದಾರೆ. ಆದ್ದರಿಂದ ನನ್ನಲ್ಲಿ ಈಗಾಗಲೇ ಬೇರೂರಿರುವ ನಂಬಿಕೆಯನ್ನು ಯಾರೂ ಅಲ್ಲಾಡಿಸಲಾರರು.

ಆ ಬಾಲಕನು ಹೀಗೆ ಹೇಳಿದ್ದು ಕೇಳಿ ಆಶ್ಚರ್ಯದೊಂದಿಗೆ ಸಂತೋಷವುಂಟಾಗಿ ಪ್ರತಿಜ್ಞೆಯನ್ನು ಬೋಧಿಸಿ ಕಳಿಸಿದೆ.

ನಂತರ ಮತ್ತೊಂದು ಗುಂಪು ಬಂತು. ಅವರೆಲ್ಲ ಸುಮಾರು 20ರಿಂದ 25 ವರ್ಷದ ತರುಣರು. ಪ್ರತಿಜ್ಞೆ ಸ್ವೀಕರಿಸಲು ಕುಳಿತುಕೊಂಡರು. ತಮ್ಮ ಇಷ್ಟಲಿಂಗಗಳನ್ನು ತೆಗೆದು ಅಂಗೈಯಲ್ಲಿರಿಸಿಕೊಳ್ಳಿರಿ ಎಂದಾಗ ನಾವು ಅದನ್ನು ಕಟ್ಟಿಲ್ಲ ಎಂಬ ಉತ್ತರ ಅವರಿಂದ ಬಂದಿತು.

ನಾನು : ಏಕೆ ಕಟ್ಟಿಲ್ಲ ? ನೀವು ಲಿಂಗಾಯತರಲ್ಲವೆ ?
ಅವರು : ಹೌದು ! ನಾವೆಲ್ಲ ಲಿಂಗಾಯತರೇ. ಆದರೆ ನಮಗೆ ಲಿಂಗ ಕಟ್ಟುವುದರಲ್ಲಿ ನಂಬಿಕೆಯಿಲ್ಲ.
ನಾನು : ಹಾಗಾದರೆ ಇಲ್ಲಿಗೇಕೆ ಬಂದಿರಿ ?
ಅವರು : ನಮಗೆ ದೇವರಲ್ಲಿ ನಂಬಿಕೆಯಿಲ್ಲ; ಗುಡಿಗುಂಡಾರಗಳಿಗೆ ಹೋಗುವುದಿಲ್ಲ. ಆದ್ದರಿಂದ ಅದೇ ರೀತಿ ಪ್ರತಿಜ್ಞೆಯನ್ನು ಸ್ವೀಕರಿಸಲು ಬಂದಿದ್ದೇವೆ. ಎಂದಾಗ ಅವರ ಅಜ್ಞಾನಕ್ಕೆ ದಂಗಾಗುವ ಸರದಿ ನನ್ನದಾಗಿತ್ತು. ಇಷ್ಟಲಿಂಗಧಾರಣೆ ಇಲ್ಲದೆ ಪ್ರತಿಜ್ಞೆ ಸ್ವೀಕರಿಸಲು ಬರುವುದಿಲ್ಲ ಎಂದು ಹೇಳಿಕಳಿಸಿದೆ.

ನಂತರ ಮತ್ತೊಂದು ಗುಂಪು ಬಂತು; ನಾವು ದರ್ಶನ ಮಾಡುತ್ತೇವೆ. ಆದರೆ ನೀವು ಹೇಳಿದಂತೆ ಪ್ರತಿಜ್ಞೆಯನ್ನು ಸ್ವೀಕರಿಸುವುದಿಲ್ಲ. ನಾವು ಯಾರು ಗೊತ್ತೆ? ವೀರಶೈವರು. ನಮಗೆ ಆ ಮಂತ್ರ ಈ ಮಂತ್ರ ಎಲ್ಲಾ ಗೊತ್ತಿದೆ. ಎಂದು ಅಸಂಬದ್ಧವಾಗಿ ಗದ್ದಲ ಮಾಡುತ್ತಾ ಹೋದರು.

ಲಿಂಗಾಯತ ಸಮಾಜದ ಅಂತರಂಗ ಹೀಗಿರುವಾಗ ಅಖಂಡವಾಗಿ ಇದನ್ನು ಸರಿದಾರಿಗೆ ಹಚ್ಚುವುದಾದರೂ ಹೇಗೆ ?! ಲಿಂಗಾಯತರು ಅಥವಾ ವೀರಶೈವರು ಎಂದು ಕರೆದುಕೊಳ್ಳುತ್ತಿರುವ ಈ ಜನರ ಅವಿಶ್ವಾಸವನ್ನು ನಿರಭಿಮಾನವನ್ನು ಕಂಡೇ ಅನ್ಯಜಾತಿಯವರು ಹೀಗೆ ಮೂದಲಿಸುತ್ತಿರುವುದು; ಅಪನಂಬಿಕೆಯಿಂದ ಈ ಜನರನ್ನು ಕಾಣುವುದು. "ಎದೆ ಮೇಲೆ ಕಲ್ಲು ಕಟ್ಟಿದವರನ್ನು ನಂಬಬಾರದು" ಎಂದು ಛೇಡಿಸುವುದು. ಆದರೂ ಚಿಂತೆಯಿಲ್ಲ; ಈಗಲೂ ಕಾಲ ಮಿಂಚಿಲ್ಲ. ಏಕೆಂದರೆ "ಎದೆಯ ಮೇಲಿರುವ ಕಲ್ಲು ಸಾಮಾನ್ಯವಾದ ಕಲ್ಲಲ್ಲ; ಅಸಾಮಾನ್ಯವಾದುದು" ಎಂದು ತೋರಿಸಲು ಈಗಲೂ ಅವಕಾಶವಿದೆ. ಹೇಗೆಂದರೆ ಲಿಂಗಾಯತರಿಗೆ ಆತ್ಮವಿಶ್ವಾಸವನ್ನು ತುಂಬಲು ಪ್ರಯತ್ನಿಸುತ್ತಿರುವ ಹಡದಪ್ಪಣ್ಣಗಳ ಪುಣ್ಯ ಸ್ತ್ರೀ ಲಿಂಗಮ್ಮ ತಾಯಿಯ ಈ ವಚನವನ್ನು ನೋಡಿರಿ. ಓದಿರಿ, ಮನನ ಮಾಡಿರಿ, ಅನುಷ್ಠಾನಕ್ಕೆ ತರಲು ಪ್ರಯತ್ನಿಸಿರಿ.

ನಾನೊಂದು ಹಾಳೂರಿಗೆ ಹೋಗುತ್ತಿರಲು
ಆ ಹಾಳೂರು ಹೊಕ್ಕಡೆ
ಅಲ್ಲಿ ನಾಯಿಗಳು ಅಟ್ಟಿಕೊಂಡು ಬಂದವು
ಹುಲಿ ಕರಡಿಗಳು ಅಡ್ಡಲಾದವು
ಇವ ಕಂಡು ನಾ ಹೆದರಿಕೊಂಡು
ನನ್ನ ಕೈಗೊಂದು ಕಲ್ಲ ತಕ್ಕೊಂಡು ನೋಡುತ್ತಾ ಬರುತ್ತಿರಲು
ಆ ನಾಯಿಗಳು ಓಡಿ ಹೋದವು

ಪ್ರಸಂಗ ಬಂದರೆ ಏನು ಮಾಡುವೆ?
ಹುಲಿ ಕರಡಿಗಳು ಅಲ್ಲಿಯೇ ಬಯಲಾದವು
ಆ ಊರು ನಿರ್ಮಲವಾಯಿತು
ಆ ನಿರ್ಮಲವಾದ ಊರ ಹೊಕ್ಕು ನೋಡಲು
ಆ ನೋಡುವ ನೋಟವು ಆ ಊರನಾಳುವ ಅರಸು
ಆ ಊರು ಕೂಡಿ ಒಂದಾದವು
ಆ ಒಂದಾದುದನೆ ನೋಡಿ ದ್ವಂದ್ವವನೆ ಹರಿದು
ನಿಮ್ಮ ಸಂಗ ಸುಖದೊಳಗೋಲಾಡಿ ಸುಖಿಯಾದೆನಯ್ಯ
ಅಪ್ಪಣ್ಣ ಪ್ರಿಯ ಚನ್ನಬಸವಣ್ಣಾ - 1066

ಪಂಚಭೂತಗಳಿಂದಾದ ಅಜ್ಞಾನ ತುಂಬಿದ ಕಾಯವೆಂಬ ಹಾಳಾದ ಊರನ್ನು ನಾನು ಪ್ರವೇಶಿಸಲು ಅಲ್ಲಿ ಇಂದ್ರಿಯ ವಿಕಾರಗಳೆಂಬ, ಅರಿಷಡ್ವರ್ಗಗಳೆಂಬ ನಾಯಿಗಳು ಅಟ್ಟಿಸಿಕೊಂಡು ಬಂದವು. ಅವುಗಳಿಂದ ಪಾರಾಗಬೇಕೆಂದು ಓಡುತ್ತಿರಲು ಎದುರಿಗೆ ಮಾಯೆ, ಅಹಂಕಾರ ಎಂಬ ಹುಲಿ ಕರಡಿಗಳು ಬಂದು ಅಡ್ಡ ನಿಂತವು. ಅವುಗಳನ್ನು ನೋಡಿ ನಾನು ಹೆದರಿಕೊಂಡು ಓಡಿಸಲೆಂದು ಕೈಗೊಂದು ಕಲ್ಲನ್ನು(ಇಷ್ಟಲಿಂಗ) ತೆಗೆದುಕೊಂಡು ತ್ರಾಟಕ ಯೋಗದ ಮೂಲಕ ನೋಡುತ್ತಿರಲು ಆ ನಾಯಿಗಳು - ಕಾಮ, ಕ್ರೋಧ, ಲೋಭ, ಮದ, ಮತ್ಸರಾದಿಗಳು ಹೆದರಿಕೊಂಡು ಓಡಿ ಹೋದವು ! ಮಾಯೆಯೆಂಬ ಹುಲಿ ಕರಡಿ ಮಾಯವಾದವು. ಈ ಅನಿಷ್ಟಗಳಿಂದ ಬಿಡುಗಡೆಗೊಂಡ ಶರೀರವೆಂಬ ಊರು ಈಗ ನಿರ್ಮಲವಾಯಿತು. ಆ ನಿರ್ಮಲವಾದ ಊರಿನ ಒಳಗೆ ಹೋಗಿ ನೋಡಲು ಆ ಊರನ್ನು ಆಳುತ್ತಿದ್ದ ಅರಸ- ಆತ್ಮತತ್ತ್ವವು ಗೋಚರಿಸಿ-ಅನುಭವಕ್ಕೆ ಬಂದಿತು. ಅಲ್ಲಿ ಎಲ್ಲಾ ರೀತಿಯ ದ್ವಂದ್ವಗಳು ಹರಿದು ಪರಮಾನಂದ ನಿತ್ಯ ಸುಖ ನೆಲೆಗೊಂಡು ನಾನು ಪರಮಸುಖಿಯಾದೆನು. ಆಹಾ ಎಂಥಾ ಅನುಪಮವಾದ ಪರಮಾನಂದ!.

ಇಂಥ ಚೈತನ್ಯಶಾಲಿಯಾದ, ಅತ್ಯಂತ ವೈಶಿಷ್ಟ್ಯ ಪೂರ್ಣವಾದ ಕಲ್ಲಿನ ಬಗ್ಗೆ ಲಿಂಗಾಯತರೇಕೆ ಅಭಿಮಾನ ಶೂನ್ಯರಾಗಿದ್ದಾರೆ?! ಲಿಂಗತತ್ತ್ವವನ್ನು ಲಿಂಗಾಯತರು ಅರ್ಥಮಾಡಿಕೊಳ್ಳಲಿ ಬಿಡಲಿ; ಲಿಂಗ ನಿಷ್ಠೆಯನ್ನು ಅಳವಡಿಸಿಕೊಳ್ಳಲಿ ಬಿಡಲಿ ವೀರಶೈವರು ಸದಾ ವಿರೋಧಿಸುತ್ತಲೇ ಇರಲಿ. ಚಿಂತೆಯಿಲ್ಲ. ಆದರೆ ಇಷ್ಟೆಲ್ಲ ಗೊಂದಲ-ವಿರೋಧಗಳ ನಡುವೆಯೇ ಶಾಶ್ವತವಾದ ಇಷ್ಟ ಲಿಂಗದೇವ ನಿಷ್ಠೆಯ ನಿತ್ಯಸತ್ಯವೊಂದನ್ನು ಈ ಇಳೆಯ ಮೇಲೆ ಪುನರ್‌ಪ್ರತಿಷ್ಠಾಪಿಸಿದ ಸತ್ಕೀರ್ತಿಗೆ ಪೂಜ್ಯ ಮಾತಾಜಿಯವರು ಸಲ್ಲುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ.

ಇಷ್ಟಲಿಂಗವು ಶಿವನ ಕುರುಹಲ್ಲ

ಪರಬೊಮ್ಮವೆ ಶರಣನ ಶಿರದರಮನೆಯಿಂದ ಕರದರಮನೆಗೆ
ಗುರುಕೃಪೆಯಿಂದ ಲಿಂಗಮೂರ್ತಿಯಾಗಿ ಬಿಜಯಂಗೈದಿರ್ಪುದು ಕಂಡಾ!
ಅದು ಕಾರಣ, ಶರಣಂಗೆಯೂ ಲಿಂಗಕ್ಕೆಯೂ
ಭೇದಾಭೇದ ಸಂಬಂಧವಿರ್ಪುದು ಕಂಡಾ!
ಈ ಗೊತ್ತನರಿಯದೆ ಯುಕ್ತಿಗೆಟ್ಟ ಮನುಜರು
ಲಿಂಗವು ಕೈಲಾಸದ ಶಿವನ ಕುರುಹಾದುದರಿಂದ ಪೂಜ್ಯವೆಂಬರು ;
ಶರಣನು ಮನುಜನಾದುದರಿಂದ ಅವನು ಪೂಜಕನೆಂಬರು.
ಇಂತೀ ಕೇವಲ ಭೇದಸಂಬಂಧವ ಕಲ್ಪಿಸುವ ಭವಭಾರಿಗಳು
ಶಿವಾದ್ವೈತಕ್ಕೆ ದೂರವಾಗಿಪ್ಪರು ಕಂಡಾ!
ಅರೆಯರುವಿನ ನರಜೀವಿಗಳು ಶರಣರ ಸಾಮರಸ್ಯಕ್ಕೆ ಹೊರಗಾಗಿರ್ಪರು ಕಂಡಾ,
ಕೂಡಲ ಚನ್ನ ಸಂಗಮದೇವಾ!

ಲಿಂಗಾಯತ ವೀರಶೈವರ ಮಧ್ಯೆ ಒಡಕಿಗೆ ಯತ್ನ

ಚಿತ್ರದುರ್ಗ, ಫೆ.18-ವೀರಶೈವ, ಲಿಂಗಾಯತ ಬೇರೆ-ಬೇರೆ ಎಂಬ ತಾರತಮ್ಯ ಭಾವನೆ ಬೆಳೆಸುವ ದುಷ್ಟ ಶಕ್ತಿಗಳ ವಿರುದ್ಧ ಎಚ್ಚರದಿಂದಿರಬೇಕು ಎಂದು ಬಾಳೇ ಹೊನ್ನೂರಿನ ರಂಭಾಪುರಿ ಶ್ರೀಗಳು ಕರೆ ನೀಡಿದರು.

ಅವರು ಭಾನುವಾರ ನಗರದ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನ ನವೀಕರಣ, 'ಶ್ರೀ ನಂದಿ, ನವಗ್ರಹ ಹಾಗೂ ನೂತನ ಗೋಪುರ ಕಳಸ ಪ್ರತಿಷ್ಠಾಪನೆ ಸಮಾರಂಭದಲ್ಲಿ ಆಶೀರ್ವಚನ ನೀಡಿ ಮಾತನಾಡಿದರು.

ವೀರಶೈವ-ಲಿಂಗಾಯತ ಪದಗಳ ಮಧ್ಯೆ ದ್ವಂದ್ವ ಹುಟ್ಟುಹಾಕಲಾಗಿದೆ. ವೀರಶೈವ ಸೈದ್ಧಾಂತಿಕ ಹಾಗೂ ಶಾಸ್ತ್ರ ಸಮ್ಮತ ಪದ. ಲಿಂಗಾಯತ ಎಂಬುದು ರೂಢನಾಮ, ವೀರಶೈವ ಧರ್ಮದ ರೀತಿ, ನೀತಿಗೆ ವ್ಯತಿರಿಕ್ತವಾಗಿ ಯಾರಾದರೂ ಕೆಲಸ ಮಾಡಿದಾಗ ಪಂಚ ಪೀಠಾಧೀಶ್ವರರು ಅದನ್ನು ಖಂಡಿಸುತ್ತ ಬಂದಿದ್ದಾರೆ. ಎಂದು ಎಚ್ಚರಿಸಿದರು.

ವೀರಶೈವ ಧರ್ಮದ ಎಲ್ಲ ಒಳ ಪಂಗಡಗಳಿಗೂ ಸರಕಾರದ ಸವಲತ್ತು ಪ್ರಾಪ್ತವಾಗಲಿ. ಆದರೆ, ಒಳ ಪಂಗಡಗಳು ಪ್ರತ್ಯೇಕ ಎಂಬ ಭಾವನೆ ಬೇಡ. ರೇಣುಕರಾದಿಯಾಗಿ ಪಂಚಾಚಾರ್ಯರು ವೀರಶೈವ ಧರ್ಮ ಸ್ಥಾಪಿಸಿದರೆ, ಬಸವಾದಿ ಶರಣರು ಈ ಧರ್ಮವನ್ನು ಪುನರುಜ್ಜೀವನ ಗೊಳಿಸಿದರು ಎಂದು ಹೇಳಿದರು.

ವೀರಶೈವ ಧರ್ಮ ಒಂದೇ ಬಾರಿಗೆ ಬೃಹದಾಕಾರವಾಗಿ ಬೆಳೆದ ಧರ್ಮವಲ್ಲ. ಉಗಮ, ಉತ್ಥಾನ, ಪುನರುಜ್ಜೀವನ ಮತ್ತು ಜಾಗೃತ ಕಾಲ - ಇವು ಧರ್ಮದ ಬೆಳವಣಿಗೆಯ ನಾಲ್ಕು ಮುಖ್ಯ ಮಜಲುಗಳು ಎಂದು ನುಡಿದರು.

ರಂಭಾಪುರಿ ಶ್ರೀಗಳ ಅಭಿಮತ ಅಸಮಂಜಸ

(ವಿಮರ್ಶೆ)

ವಿಜಯ ಕರ್ನಾಟಕ ಪ್ರತಿಕೆಯಲ್ಲಿ 14-2-2005ರಂದು ವರದಿಯಾಗಿರುವಂತೆ, ಚಿತ್ರದುರ್ಗದಲ್ಲಿ 13-2-2005ರಂದು ಬಾಳೆಹೊನ್ನೂರಿನ ರಂಭಾಪುರಿ ಪೀಠದ ಜಗದ್ಗುರು ಪ್ರಸನ್ನ ರೇಣುಕ ವೀರ ಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಯವರು, ನೀಲಕಂಠೇಶ್ವರ ಸ್ವಾಮಿ ದೇವಸ್ಥಾನ ನವೀಕರಣ, ಶ್ರೀ ನಂದಿ, ನವಗ್ರಹ ಹಾಗೂ ನೂತನ ಗೋಪುರ ಕಳಸ ಪ್ರತಿಸ್ಥಾಪನೆ ಸಮಾರಂಭದಲ್ಲಿ, ವೀರಶೈವ-ಲಿಂಗಾಯತ ಬೇರೆ ಬೇರೆ ಎಂಬ ತಾರತಮ್ಯ ಭಾವನೆ ಬೆಳೆಸುವ ದುಷ್ಟಶಕ್ತಿಗಳ ವಿರುದ್ಧ ಎಚ್ಚರದಿಂದಿರಬೇಕು, ಪಂಚಾಚಾರ್ಯರು ವೀರಶೈವ ಧರ್ಮ ಸ್ಥಾಪಿಸಿದರೆ, ಬಸವಾದಿ ಶರಣರು ಈ ಧರ್ಮವನ್ನು ಪುನರುಜ್ಜೀವನಗೊಳಿಸಿದರು ಎಂದು ಹೇಳಿರುವುದು ಆಕ್ಷೇಪಣಾರ್ಹ.

ವೀರಶೈವ-ಲಿಂಗಾಯತ ಬೇರೆ ಬೇರೆ ಎಂದು ಹೇಳುತ್ತಿರುವುದು, ಸತ್ಯಾಂಶವನ್ನು ತಿಳಿಸಿ, ಸಮಾಜ ಸಂಘಟನೆ ಮಾಡುವುದಕ್ಕಾಗಿಯೆ ಹೊರತು ತಾರತಮ್ಯ ಭಾವನೆ ಬೆಳೆಸುವುದಕ್ಕಲ್ಲ. ವೀರಶೈವ-ಲಿಂಗಾಯತ ಸಮಾನ ಅರ್ಥದ ಪದಗಳಲ್ಲ. ಲಿಂಗಾಯತರು ಇಷ್ಟಲಿಂಗವನ್ನು ಕೊರಳಲ್ಲಿ ಧರಿಸಿ, ಅನ್ಯ ದೈವಗಳನ್ನು ಪೂಜಿಸದೆ, ಉಪಾಸ್ಯ ಮೂರ್ತಿಗಳಾದ ಗುರುಲಿಂಗಜಂಗಮರನ್ನು ಮಾತ್ರ ಪೂಜಿಸಬೇಕೆಂಬುದು ಸಿದ್ಧಾಂತ. ದೇಹವೇ ದೇವಾಲಯ, ದೇವನೊಬ್ಬ, ಅನ್ಯ ದೈವದ ಸಂಗ ಬೇಡ ಎಂದು ಲಿಂಗಾಯತ ಧರ್ಮ ಸ್ಥಾಪಕ ಬಸವಣ್ಣನವರು ಹೇಳಿದ್ದಾರೆ. ಆದರೆ ರಂಭಾಪುರಿ ಶ್ರೀಗಳು ಅಂದು ನೀಲಕಂಠೇಶ್ವರಸ್ವಾಮಿ ದೇವಸ್ಥಾನ ನವೀಕರಣ, ಶ್ರೀ ನಂದಿ, ನವಗ್ರಹ ಹಾಗೂ ನೂತನ ಗೋಪುರ ಕಳಸ ಪ್ರತಿಷ್ಠಾಪನೆಯಲ್ಲಿ ಭಾಗವಹಿಸಿರುವುದೇ ವೀರಶೈವ-ಲಿಂಗಾಯತ ಬೇರೆ ಬೇರೆ ಎಂಬುದನ್ನು ದೃಢಪಡಿಸಿದೆ. ಕ್ರಿ.ಪೂ. 6ನೆಯ ಶತಮಾನದಲ್ಲಿ, ವೈದಿಕದ ವಿರುದ್ಧ ಬುದ್ಧನು ಬೌದ್ಧ ದರ್ಮವನ್ನು ಸ್ಥಾಪಿಸಿದಂತೆ, ಕ್ರಿ.ಶ. 12ನೆಯ ಶತಮಾನದಲ್ಲಿ ಅದೇ ವೈದಿಕದ ವಿರುದ್ಧ ಬಸವಣ್ಣನವರು ಲಿಂಗಾಯತ

ಧರ್ಮವನ್ನು ಹೊಸದಾಗಿ ಸ್ಥಾಪಿಸಿದಾಗ, ಅನೇಕ ಜಾತಿ ಕಸುಬುಗಳವರು ಬಂದು ಲಿಂಗಾಯತ ಧರ್ಮವನ್ನು ಸೇರಿಕೊಂಡು, ಲಿಂಗಾಯತರಾಗಿರುವರು. ಅಂದಾಗ ಲಿಂಗಾಯತವು ವೀರಶೈವಕ್ಕೆ ಪರ್ಯಾಯವಾಗಲಿ, ಶೈವದ ಮುಂದುವರಿಕೆಯಾಗಲಿ, ವೈದಿಕಜನ್ಯವಾಗಲಿ, ಸಂಸ್ಕೃತಜನ್ಯವಾಗಲಿ ಅಲ್ಲ. ಅಂಗದ ಮೇಲೆ ಲಿಂಗವುಳ್ಳವರೆಲ್ಲ ಲಿಂಗಾಯತರೇ ವಿನಾ ವೀರಶೈವರಲ್ಲ. ಹೀಗಾಗಿ ವೀರಶೈವವು ಬಸವ ಪೂರ್ವದ, ವೈದಿಕ ಮೂಲಕ, ಶೈವ ಮತದ ಸಪ್ತ ಪಂಥಗಳಲ್ಲಿ ಕೇವಲ ಒಂದು ಪಂಥವೇ ಹೊರತು ಅದು ಸ್ವತಂತ್ರ ಧರ್ಮವಲ್ಲ.

ಆದರೆ, ಲಿಂಗಾಯತ ಎಂಬ ಪದ ಲಿಂಗ ಮತ್ತು ಆಯತ ಪದಗಳಿಂದ ಉಂಟಾಗಿದೆ. ಲಿಂಗ ಎಂದರೆ ಇಷ್ಟಲಿಂಗ, ಆಯತ ಎಂದರೆ ಧರಿಸಿದವನು, ಲಿಂಗಾಯತ ಎಂದರೆ ಇಷ್ಟಲಿಂಗವನ್ನು ಧರಿಸಿದವನು ಎಂದರ್ಥ. ಇದನ್ನು ಅನುಸರಿಸಿ, ನಮ್ಮ ಧರ್ಮ ಲಿಂಗಾಯತ ಆಗಿದೆ. ಲಿಂಗಾಯತ ಎಂಬುದು ಕುಲವಲ್ಲ, ಗೋತ್ರವಲ್ಲ, ಜಾತಿಯಲ್ಲ, ಶಾಖೆಯಲ್ಲ, ಪಂಗಡವಲ್ಲ, ಪಂಥವಲ್ಲ. ಅದು ಗುರು ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟಿರುವ, ವಚನ ಸಾಹಿತ್ಯ ಸಂವಿಧಾನದ, ರಾಜ್ಯ, ರಾಷ್ಟ್ರ, ವಿಶ್ವಧರ್ಮವಾಗಿರಲು ತಕ್ಕುದಾದ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಮೆರೆದು, ಜಗತ್ತನ್ನು ಎಚ್ಚರಿಸಬಲ್ಲ ಪರಂಪರೆ ಪಡೆದ, ಕಾಲದೇಶಕ್ಕತೀತವಾದ, ವೈಜ್ಞಾನಿಕವಾದ, ವೈಚಾರಿಕವಾದ, ಪ್ರಗತಿಪರವಾದ, ಸಮನ್ವಯವಾದ, ಸಕಲ ಜೀವಾತ್ಮರಿಗೆ ಲೇಸನೇ ಬಯಸಿದ, ಮಾನವತೆ -ಸಮಾನತೆ-ಸೋದರತೆಗಳನ್ನು ಬೋಧಿಸಿದ, ದಯೆ - ಅಹಿಂಸೆ-ಸಸ್ಯಾಹಾರಗಳನ್ನು ಕಲಿಸಿದ, ಉದ್ಯೋಗ-ಲಿಂಗ-ಜಾತಿ ಭೇದಗಳಿಲ್ಲದೆ ಆಸಕ್ತಿ ಹೊಂದಿದ ಎಲ್ಲ ಮಾನವರಿಗೆ ಲಿಂಗ-ಧರ್ಮ-ಸಂಸ್ಕಾರ ಕೊಡಬಲ್ಲ, ಒಂದು ಧರ್ಮಕ್ಕೆ ಇರಬೇಕಾದ ಎಲ್ಲ ಲಕ್ಷಣಗಳನ್ನು ಹೊಂದಿದ ಪರಿಪೂರ್ಣ ಸ್ವತಂತ್ರ ಧರ್ಮ.

ವೀರಶೈವ - ಲಿಂಗಾಯತ ಬೇರೆ ಬೇರೆ ಎನ್ನುವುದಕ್ಕೆ ಇರುವ ಹಲವಾರು ವ್ಯತ್ಯಾಸಗಳಲ್ಲಿ ಕೆಲವು ಹೀಗಿವೆ.

1.ಲಿಂಗಾಯತ ಧರ್ಮ ಬಸವಣ್ಣನವರಿಂದ ಸ್ಥಾಪನೆಯಾದುದು	ವೀರಶೈವ ಮತ ಬಸವ ಪೂರ್ವದಲ್ಲಿ ಇದ್ದುದು.
2.ಲಿಂಗಾಯತ ಒಂದು ಪರಿಪೂರ್ಣ ಸ್ವತಂತ್ರ ಧರ್ಮ	ವೀರಶೈವ ಒಂದು ವಿಶಿಷ್ಟ ಶೈವ ಪಂಥ
3.ಲಿಂಗಾಯತ ವೈದಿಕದ ವಿರುದ್ಧ ಹುಟ್ಟಿದ ಧರ್ಮ	ವೀರಶೈವ ವೈದಿಕ ಮೂಲದ ಶೈವ ಮತದ ಶಾಖೆ
4.ಲಿಂಗಾಯತ ಧರ್ಮ ಒಂದು ದೊಡ್ಡ ಸಮುದ್ರವಿದ್ದಂತೆ	ವೀರಶೈವ ಆ ಸಮುದ್ರದಲ್ಲಿ ಸೇರಿಕೊಂಡಿರುವ ಸಣ್ಣ ನದಿಯಂತೆ
5.ಲಿಂಗಾಯತ ವರ್ಣಾಶ್ರಮವನ್ನು ನಿರಾಕರಿಸುತ್ತದೆ.	ವೀರಶೈವವು ವರ್ಣಾಶ್ರಮವನ್ನು ಪಾಲಿಸುತ್ತದೆ.
6.ಲಿಂಗಾಯತ ಧರ್ಮಕ್ಕೆ ವಚನ ಸಾಹಿತ್ಯ ಆಧಾರ	ವೀರಶೈವ ಮತಕ್ಕೆ ವೇದ, ಆಗಮ, ಸಿದ್ಧಾಂತಶಿಖಾಮಣಿ ಆಧಾರ.
7.ಲಿಂಗಾಯತರ ದೇವ ಮಂತ್ರ ಓಂ ಲಿಂಗಾಯ ನಮಃ	ವೀರಶೈವರ ಶಿವ ಮಂತ್ರ ಓಂ ನಮಃ ಶಿವಾಯ
8.ಲಿಂಗಾಯತರು ತ್ರಿಮೂರ್ತಿಗಳಿಗೆ ಅತೀತನಾದ ಸೃಷ್ಟಿಕರ್ತ ಲಿಂಗದೇವನ ಪೂಜಕರು	ವೀರಶೈವರು ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನ ಪೂಜಕರು.
9.ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ ಶಿವಭಕ್ತರನ್ನೆಲ್ಲ ಒಂದೇ ಎನ್ನುವುದು ವಚನ ಪ್ರಣೀತ ಲಿಂಗಾಯತ ಧರ್ಮ.	ಗುರುವರ್ಗ ಬೇರೆ, ಭಕ್ತವರ್ಗ ಬೇರೆ, ಎಂದು ಜಾತಿ ವ್ಯತ್ಯಾಸ ಮಾಡುವುದು ಸಿದ್ಧಾಂತ ಶಿಖಾಮಣಿ ಪ್ರಣೀತ ವೀರಶೈವ ಮತ.

ಬ್ರಿಟಿಷ್ ಸರ್ಕಾರ, ಮುಂಬಯಿ, ಮದ್ರಾಸು, ಮೈಸೂರು, ಕರ್ನಾಟಕ ಸರ್ಕಾರಗಳ ದಾಖಲೆಗಳಲ್ಲಿ ಲಿಂಗಾಯತ ಪದವೇ ಹೆಚ್ಚಾಗಿ ಬಳಸಲ್ಪಟ್ಟಿದೆ. ಕೆರೆಯ ಪದ್ಮರಸನ ದೀಕ್ಷಾಬೋಧೆಯಲ್ಲಿ ಲಿಂಗಾಯತ ಪದವಿದೆ. ಷಟಸ್ಥಲ ವಚನಗಳಲ್ಲಿ 'ಎಲ್ಲಿಯೂ ವೀರಶೈವ ಪದ ಬಳಕೆಗೆ ಬಂದಿಲ್ಲ ಎಂದು ಹೇಳಲಾಗಿದೆ. ಡೆಪ್ಯುಟಿ ಚನ್ನಬಸಪ್ಪನವರು ಬೆಳಗಾವಿಯಲಿ 1868ರಲಿ ಸ್ಥಾಪಿಸಿದ ಲಿಂಗಾಯತ ಉಚಿತ ಪ್ರಸಾದ ನಿಲಯ, ಧಾರವಾಡದ ಕಿಟೆಲ್ 1975ರಲ್ಲಿ ಪ್ರಕಟಿಸಿದ ಲಿಂಗಾಯತ ಸಂಘ, ಮೈಸೂರು 1905ರ

ಲಿಂಗಾಯತ ಸಾಹಿತ್ಯ, ಅರಟಾಳ ರುದ್ರಗೌಡರು ಧಾರವಾಡದಲ್ಲಿ 1883ರಲ್ಲಿ ಸ್ಥಾಪಿಸಿದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಮೈಸೂರು 1905ರ ಲಿಂಗಾಯತ ವಿದ್ಯಾನಿಧಿ ಸಂಸ್ಥೆ, ವಾರದ ಮಲ್ಲಪ್ಪನವರು ಸೊಲ್ಲಾಪುರದಲ್ಲಿ 1907ರಲ್ಲಿ ಸ್ಥಾಪಿಸಿದ ಲಿಂಗಾಯತ ಸಂಘ, ಹಳಕಟ್ಟಿಯವರು ಬಿಜಾಪುರದಲಿ 1910ರಲ್ಲಿ ಸ್ಥಾಪಿಸಿದ ಬಿಜಾಪುರ ಜಿಲ್ಲ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾವಿಯ 1916ರ ಕರ್ನಾಟಕ ಲಿಂಗಾಯತ ವಿದ್ಯಾಸಂಸ್ಥೆ ಮುಂತಾದವುಗಳು ಲಿಂಗಾಯತ ಹೆಸರಿನಲ್ಲಿಯೇ ಹುಟ್ಟಿವೆ. ಧಾರವಾಡದ ಲಿಂಗಾಯತ ಭವನ, ಉತ್ತರ ಕರ್ನಾಟಕದ ಖಾನಾವಳಿಗಳ ನಾಮಫಲಕಗಳು ಲಿಂಗಾಯತ ಹೆಸರಿನಲ್ಲಿವೆ. ಗದುಗಿನ ಶ್ರೀ ಶ್ರೀ ಡಾ. ಸಿದ್ಧಲಿಂಗಸ್ವಾಮಿಗಳು, ವೀರಶೈವ ಅಧ್ಯಯನ ಸಂಸ್ಥೆಯನ್ನು 29-3-2004ರಂದು ಲಿಂಗಾಯತ ಅಧ್ಯಯನ ಸಂಸ್ಥೆ ಎಂದು ಮರುನಾಮಕರಣ ಮಾಡಿರುವುದು ಗಮನಾರ್ಹ. ಅನೇಕ ಜಾತಿ ಒಳಪಂಗಡಗಳ ಹೆಸರುಗಳ ಹಿಂದೆ ಲಿಂಗಾಯತ ಪದವಿದೆ. ಜನಸಾಮಾನ್ಯರಲ್ಲಿ, ಅವಿದ್ಯಾವಂತರಲ್ಲೂ ಲಿಂಗಾಯತ ಪದವೇ ಹೆಚ್ಚು ಪ್ರಚಲಿತವಿದ್ದು, ಲಿಂಗಾಯತವು ಧರ್ಮವಾಚಕ ಮತ್ತು ತತ್ತ್ವವಾಚಕವಾದ ಅತ್ಯಂತ ಸೂಕ್ತ ಪದ. ಆದರೆ 1904ರ ವೇಳೆಗೆ ಉತ್ತರ ಕರ್ನಾಟಕದಲ್ಲಿ ವೀರಶೈವ ಹೆಸರಿನಲ್ಲಿ ಮಹಾಸಭೆ ತಲೆಯೆತ್ತಿ ಲಿಂಗಾಯತ ಪದವನ್ನೇ ಹಿಂದೆ ಹಾಕಿತು.

ಈ ಎಲ್ಲ ಅಂಶಗಳನ್ನು ಮುಕ್ತ ಮನಸ್ಸಿನಿಂದ ಪರಿಶೀಲಿಸಿದರೆ, ಲಿಂಗಾಯತ ಎಂಬುದೇ ನಮ್ಮ ಧರ್ಮಡ ನಿರ್ದಿಷ್ಟವಾದ ಹೆಸರು ಎಂದು ಸ್ಪಷ್ಟವಾಗುತ್ತದೆ. ಆದರೆ, ಬಸವಣ್ಣನವರ ಪ್ರಗತಿಪರ ವಿಚಾರಧಾರೆಗಳನ್ನು ಒಪ್ಪದ ಕೆಲವರು ಹೆಸರೇ ಸೂಚಿಸುವಂತೆ, ಶೈವ ಮೂಲದ ವೀರಶೈವ ಪದಕ್ಕೆ ಜೋತುಬಿದ್ದಿರುವುದನ್ನು ಕಾಣಬಹುದು. ಬಸವಣ್ಣನವರು ಜಾತ್ಯತೀತ ಪರಿಕಲ್ಪನೆಯಲ್ಲಿ, ಸಮಾನತೆಯ ವೇದಿಕೆ ಸೃಷ್ಟಿಸಲು, ಸರ್ವ ಜನಾಂಗಕ್ಕಾಗಿ ಲಿಂಗಾಯತ ಧರ್ಮವನ್ನು ಹುಟ್ಟುಹಾಕಿದರು. ವೀರಶೈವ-ಲಿಂಗಾಯತ ನಡುವಿನ ಅಂತರವನ್ನು ಅರಿಯದೆ, ಅರಿತಿದ್ದರೂ ಒಪ್ಪದೆ, ಎರಡನ್ನೂ ಒಂದೇ ಎಂದು ಹೇಳಿ, ಜನರಿಗೆ ತಪ್ಪಿಸುವ ಪ್ರಯತ್ನ ಮಾಡುವುದು ಸರಿಯಲ್ಲ. ಲಿಂಗಾಯತ ಧರ್ಮವು ಜಾಗತಿಕ ಮಟ್ಟದಲ್ಲಿ ಬೆಳೆಯಬೇಕಾದರೆ ಲಿಂಗಾಯತ ಪದ ಬಳಕೆಗೆ ತಂದಾಗ ಮಾತ್ರ ಸಾಧ್ಯ.

ಲಿಂಗೋದ್ಭವರಾದ ಪಂಚಾಚಾರ್ಯರು ಕಾಲ್ಪನಿಕರು. ವೀರಶೈವ, ಬಸವ ಪೂರ್ವದಲ್ಲೇ ಇದ್ದಿತಾದರೂ ಪಂಚಾಚಾರ್ಯರು ಯಾವುದೇ ರೀತಿ ವೀರಶೈವದ ಸ್ಥಾಪಕರಲ್ಲ. ಪಂಚಾಚಾರ್ಯರು ಯಾರು ? ಅವರ ತಂದೆ ತಾಯಿಗಳು ಯಾರು? ಅವರು ಹುಟ್ಟಿದ ಸ್ಥಳ ಯಾವುದು ? ಅವರು ಹುಟ್ಟಿದ ವರ್ಷ ಯಾವುದು? ಅವರು ಇದ್ದುದಕ್ಕೆ ಇರುವ ಐತಿಹಾಸಿಕ ಮೂಲಾಧಾರಗಳು ಯಾವುವು? ಅವರು ಬೋಧಿಸಿದ ತತ್ತ್ವಗಳು ಯಾವುವು? ಮಹಾಪುರುಷ ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರೇ ಹೊರತು ಬೇರೆ ಯಾರೂ ಅಲ್ಲ. ಇದಕ್ಕೆ ಆಧಾರಗಳಿವೆ. " ಬಸವಣ್ಣ ನಿನ್ನಿಂದ ಹುಟ್ಟಿತ್ತು ಲಿಂಗ ಎಂದು ಪ್ರಭುದೇವರು, ಆದಿ ಲಿಂಗ ಅನಾದಿ ಬಸವಣ್ಣ, ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು ಎಂದು ಚನ್ನಬಸವಣ್ಣನವರು, ಲಿಂಗ ಬಸವಣ್ಣನಿಂದ ಎಂದು ಮಾಚಿದೇವರು, ಲಿಂಗವನು ಕರಕೆ ತಂದುಕೊಟ್ಟ ಗುರುವೇ ಬಸವಣ್ಣ ಎಂದು ಸರ್ವಜ್ಞ, ನಿಮಗೂ, ಎನಗೂ ಬಸವಣ್ಣನ ಧರ್ಮವಯ್ಯಾ" ಎಂದು ಸಿದ್ಧರಾಮೇಶ್ವರರು ಹೇಳಿರುವರು. ಆದ್ದರಿಂದ, ಲಿಂಗಾಯತ ಧರ್ಮದ ಉಗಮ ಮತ್ತು ಇತಿಹಾಸ ಬಸವಣ್ಣನವರಿಂದಲೇ ಪ್ರಾರಂಭ ಎಂಬುದು ಸುಸ್ಪಷ್ಟ.

- ಸು. ಮಲ್ಲಿಕಾರ್ಜುನಪ್ಪ, ಮತ್ತೀಪುರ

ಅಂತಃಕರಣಗಳ ಕಾರ್ಯಕಲಾಪ

ಮನ ಆವ ವಸುನಾದಡೂ ನೆನದಡೆ ಬುದ್ಧಿ ನಿಶ್ಚೈಸುವುದು,
ಚಿತ್ತ ವಾಕ್ಯಕ್ಕೆ ತೆಂದು ಮಾಡಬೇಕೆಂಬುದು,
ಅಹಂಕಾರ ಕಾಯದ ಕೈಯಿಂದ ಮಾಡಿಸುವುದು.
ಇಂತೀ ಅಂತಃಕರಣಚತುಷ್ಟಯಂಗಳ ಅಂತುವನರಿತು ಸಮವೇದಿಸಲು,
ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯನೆನಿಸುವನು.

ಶಿವಾಜಿ ಮಹಾರಾಜರ ಮೂಲ ಲಿಂಗಾಯತವೆ ?

-ಶ್ರೀ ಸಿದ್ಧರಾಮ ಸ್ವಾಮಿಗಳು
ರುದ್ರಾಕ್ಷಿಮಠ, ನಾಗನೂರ - ಬೆಳಗಾವಿ.

ಛತ್ರಪತಿ ಶಿವಾಜಿ ಮಹಾರಾಜರ ವಂಶಾವಳಿಯ ಮೇಲೆ ಬೆಳಕು ಚೆಲ್ಲುವ ಇತ್ತೀಚಿನ ಸಂಶೋಧನಾತ್ಮಕ ಗ್ರಂಥಗಳ ಅವಲೋಕನದಿಂದ ಶಿವಾಜಿ ಮಹಾರಾಜರ ಮೂಲ ಲಿಂಗಾಯತವೆಂದು ಊಹಿಸಲು ಸಾಕಷ್ಟು ಅವಕಾಶವಿದೆ. ಮಹಾರಾಷ್ಟ್ರದ ಸುಪ್ರಸಿದ್ಧ ಸಂಶೋಧಕ ಡಾ||ರಾಮಚಂದ್ರ ಚಿಂತಾಮಣಿ ಡೇರೆ ಅವರ "ಶಿಖರ ಶಿಂಗಣಾಪುರಚಾ ಶಂಭು ಮಹಾದೇವ" ಎಂಬ ಬೃಹತ್ ಸಂಶೋಧನಾತ್ಮಕ ಕೃತಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೂಲ ಪುರುಷರು ಕರ್ನಾಟಕದ ಗದಗ ಜಿಲ್ಲೆಯ ಸೊರಟೂರಿನವರಾಗಿದ್ದರೆಂದೂ, ಅವರ ಮನೆ ದೈವ ಶ್ರೀಶೈಲದ ಮಲ್ಲಿಕಾರ್ಜುನ ನಾಗಿದ್ದನೆಂದೂ ಸಾಧಾರಪೂರ್ವಕವಾಗಿ ಪ್ರತಿಪಾದಿಸಲಾಗಿದೆ.

ಶಿವಾಜಿ ಮಹಾರಾಜರ ಮೂಲ ಪುರುಷ ಬಳಿಯಪ್ಪ ಸೊರಟೂರಿನಿಂದ ಇಂದಿನ ಮಹಾರಾಷ್ಟ್ರದ ಶಿಂಗಣಾಪುರಕ್ಕೆ ಬಂದನೆಂದೂ, ಶಿವಭಕ್ತನಾಗಿದ್ದ ಆತ ಗವಳಿ ಸಮಾಜದ ನಾಯಕನಾಗಿದ್ದನೆಂದೂ, ಹದಿಮೂರನೆಯ ಶತಮಾನದ ಪೂರ್ವದಲ್ಲಿ ಶಿಖರ ಶಿಂಗಣಾಪುರ ಪ್ರದೇಶವನ್ನು ಆಳಿದ ಬಗ್ಗೆ ದಾಖಲೆಗಳಿವೆ.

ಶಿವಾಜಿ ಮಹಾರಾಜರ ಪಟ್ಟಾಭಿಷೇಕ ಸಂದರ್ಭದಲ್ಲಿ ಅವರ ವಂಶವನ್ನು ಗಗಾಭಟ್ಟನು ರಾಜಸ್ಥಾನದ ಸಿಸೋದಿಯಾ ವಂಶಕ್ಕೆ ಜೋಡಿಸಿದನೆಂಬ ಸತ್ಯವನ್ನು ಸಂಶೋಧನ ಮಹರ್ಷಿ ಶ್ರೀ ಗ.ಹ. ಖರೆ ಅವರು (ಭಾರತ ಇತಿಹಾಸ ಸಂಶೋಧನ ಮಂಡಳ ತ್ರೈಮಾಸಿಕ 8.1-2-1927 ಪು.10-3) ಸ್ಪಷ್ಟ ಪಡಿಸಿದ್ದಾರೆ. ಇದೂ ಅಲ್ಲದೆ ರಜಪೂತ ಅರಸರ ಸುದೀರ್ಘ ಇತಿಹಾಸದಲ್ಲಿ ಎಲ್ಲೂ ಶಿವಾಜಿ, ಶಹಾಜಿ, ಮಾಲೋಜಿ ಮುಂತಾದ ಶಿವಾಜಿ ಮಹಾರಾಜರ ಪೂರ್ವಜರ ಹೆಸರುಗಳು ಬರುವುದಿಲ್ಲ.

ಇನ್ನೊಂದು ಮಹತ್ವದ ಅಂಶವೆಂದರೆ ಶಿವಾಜಿ ಮಹಾರಾಜರ ಗುರುಪರಂಪರೆಯ ಮೂಲ ಪೀಠ ಶಿಖರ ಶಿಂಗಣಾಪುರದಲ್ಲಿದೆ. ಅವರ ಪರಮ ಗುರುಗಳು ಶ್ರೀ ಶಾಂತಲಿಂಗ ಸ್ವಾಮಿಗಳು. ಅವರು ಲಿಂಗಾಯತ ಪರಂಪರೆಯ ಗುರುಗಳು. (ನೋಡಿ "ಶಿವಾಜಿಯ ಮೂಲ ಕನ್ನಡ ನೆಲ" ಲೇ: ಡಾ.ಸರಜೂ ಕಾಟಕರ ಪು.92) ಶಿವಾಜಿ ಮಹಾರಾಜರಿಗೆ ಸಮರ್ಥ ರಾಮದಾಸರ ಬಗ್ಗೆ ಅವರು ಮಹಾನ್ ಸಂತರೆಂಬ ಕಾರಣದಿಂದ ಅಪಾರ ಗೌರವವಿತ್ತು. ಆದರೆ ಅವರು ಶಿವಾಜಿಯ ಮನೆತನದ ಗುರುಗಳಾಗಿರಲಿಲ್ಲ. ಇದೂ ಅಲ್ಲದೆ ಶಿವಾಜಿ ಮಹಾರಾಜರ ಹಣೆಯ ಮೇಲೆ ರಾರಾಜಿಸುವ ಮೂರು ಬೆರಳಿನ ವಿಭೂತಿಯು ಅವರ ಲಿಂಗಾಯತ ಸಂಬಂಧವನ್ನು ತೋರಿಸುತ್ತದೆ.

ಛತ್ರಪತಿ ಪದವಿ ವಿಭೂಷಿತರಾದ ಶಿವಾಜಿ ಮಹಾರಾಜರಿಗೆ ಪಟ್ಟಾಭಿಷೇಕ ಮಾಡಲು ವೈದಿಕರು ಹಿಂಜರಿಯಲು ಕಾರಣ ಅವರು ಶೂದ್ರರೆಂಬುದೇ ಆಗಿದೆ. 20ನೆಯ ಶತಮಾನಕ್ಕಿಂತ ಪೂರ್ವದಲ್ಲಿ ಇಂದಿನ ಲಿಂಗಾಯತರನ್ನು (ಕೃಷಿ ಕಾಯಕ ಮಾಡುವವರು) ಶೂದ್ರರೆಂದೇ ಪರಿಗಣಿಸಲಾಗಿತ್ತು. ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಲಿಂಗಾಯತರ ಬ್ರಾಹ್ಮಣೀಕರಣ ನಡೆದುದನ್ನು ಯಾರಾದರೂ ಗಮನಿಸಬಹುದಾಗಿದೆ.

'ಶಿವಾಜಿ ಮಹಾರಾಜರಿಗೆ ಸಂಬಂಧಿಸಿದ ಇತಿಹಾಸದಲ್ಲಿ ಇಂತಹ ಅನೇಕ ಸಬಲ ದಾಖಲೆಗಳು ದೊರೆಯುವದರಿಂದ ಅವರು ಕನ್ನಡಿಗರಷ್ಟೇ ಅಲ್ಲ, ಅವರ ಮೂಲ ಲಿಂಗಾಯತ ಗವಳಿ' ಎಂದೂ ಸಂಶೋಧಕ ಡಾ|| ಎಂ.ಎಂ.ಕಲಬುರ್ಗಿ ಅಭಿಪ್ರಾಯ ಪಡುತ್ತಾರೆ.

(ಹೃಯ ಸಂದೇಶ ಪತ್ರಿಕೆಯಿಂದ)

ಶಿವಾಜಿ ಲಿಂಗಾಯತ ಧರ್ಮೀಯರೆನ್ನುವದು ಲಿಂಗಾಯತರಿಗೆ ಹೆಮ್ಮೆಯ ವಿಷಯ

ಮಹಾರಾಷ್ಟ್ರದವರು ಭಾಷೆಯಿಂದ, ದೇವತೆಗಳಿಂದ, ಸಂತರಿಂದ, ಐತಿಹಾಸಿಕ ಪುರುಷರಿಂದ ಕರ್ನಾಟಕದ ಋಣದಲ್ಲಿದ್ದಾರೆ, ಎಂದರೆ ತಪ್ಪಾಗಲಾರದು.

ಮರಾಠಿ = ಮರ + ಹಟ್ಟಿ, ದೊಡ್ಡ ಹಳ್ಳಿ, ಕನ್ನಡ ಶಬ್ದ ಮಹಾರಾಷ್ಟ್ರ = ದೊಡ್ಡರಾಷ್ಟ್ರ ಇದೂ ಕನ್ನಡ; ಮುಂಬಾಯಿ = ಬಾಯಿ ಮುಂದೆ ಮುಂಬಯಿ (ಅಂಶಿ ಸಮಾಸ) ಇದನ್ನೇ ಇಂಗ್ಲೀಷರು "ಗೇಟ ವೇ ಆಫ್ ಇಂಡಿಯಾ" ಎಂದರು ; ಪೂರ = ಪಟ್ಟಣ ಕನ್ನಡ ಶಬ್ದ ನಾಗಪೂರ, ಸೋಲ್ಲಾಪೂರ, ಪಂಡರಪೂರದ ವಿಠಲನು ಕರ್ನಾಟಕದ ಆನೆಗುಂದಿಯವನೆಂಬುದು ಗೊತ್ತಾಗಿದೆ. ಅಲ್ಲಿಂದ ಒಯ್ದಿದ್ದಾರೆ. ಈ ದೇವತೆಯಿಂದ ಮಹಾರಾಷ್ಟ್ರಕ್ಕೆ ದೇಶದ ನಾನಾ ಮೂಲೆಗಳಿಂದ ಭಕ್ತರ ತಂಡಗಳು ಬಂದು ಪಂಡರಪೂರದ ಕೀರ್ತಿ ಹೆಚ್ಚಿಸಿದೆ. ಅಲ್ಲದೆ ಪ್ರಸಿದ್ಧ ಅಭಂಗ ರಚನಕಾರ ಜ್ಞಾನದೇವ "ಲಿಂಗಾಯತ"; ಜ್ಞಾನದಲ್ಲಿ ಇವರನ್ನು ಸರಿಗಟ್ಟುವವರು ಯಾರೂ ಇರಲಿಲ್ಲ ಆದಕ್ಕೆ "ಜ್ಞಾನದೇವ" ಎಂದು ಹೆಸರು ಬಂದಿದೆ. ಇವರ ಮೂಲವು ಕರ್ನಾಟಕ ಯಾಕೆ ಆಗಿರಬಾರದು? ಅಥವಾ ಕಲ್ಯಾಣ ಕ್ರಾಂತಿಯಿಂದ ಚದುರಿ ಮಹಾರಾಷ್ಟ್ರಕ್ಕೆ ಹೋಗಿರಲೂ ಸಾಕು. ಜ್ಞಾನದೇವ ಲಿಂಗಾಯತನಂತೂ ಖಚಿತ.

ಮಹಾರಾಷ್ಟ್ರ ಅಷ್ಟೇ ಏಕೆ ಇಡೀ ಭಾರತ ದೇಶದಲ್ಲೇ ಶೌರ್ಯ, ಸಾಹಸ, ಪರಾಕ್ರಮಕ್ಕೆ ತಮ್ಮದೇ ಆದ ಯುದ್ಧ ಕಲೆಯ ಪದ್ಧತಿಗೆ ಹೆಸರಾದ ಮಹಾರಾಷ್ಟ್ರದ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಸಿಕೊಂಡ ಚತುರ ಛತ್ರಪತಿ ಶಿವಾಜಿಯು ಕನ್ನಡದ ಮೂಲದವರು ; "ಲಿಂಗಾಯತ" ನು ಎಂದರೆ ಕೇಳಿದವರಿಗೆ ಅಚ್ಚರಿಯಾಗಬಹುದಲ್ಲವೆ ? ದಕ್ಷಿಣ ಭಾರತದ ಬಹಳಷ್ಟು ರಾಜ್ಯಗಳಲ್ಲಿ ದುರ್ಗಮವಾದ ಸ್ಥಳಗಳಲ್ಲಿ ದುರ್ಗಗಳನ್ನು ಕಟ್ಟಿ ಅವುಗಳಿಗೆ ಮರಾಠಿ ಭಾಷೆಯ "ಗಡ" ಎಂದು ಕರೆದವುಗಳು ಹೇರಳವಾಗಿ ಕಾಣಸಿಗುತ್ತವೆ. ಇಂಥವನ ಯಶೋಗಾಥೆಯ ಕಥೆಯು ರೋಮಾಂಚನ, ರೋಚಕ. ಈ ಹೆಮ್ಮೆಯ ಪುತ್ರನ ಮೂಲ ಕರ್ನಾಟಕದ ಧಾರವಾಡದ ಜಿಲ್ಲೆ, ಇದು ಆದಿ ಕವಿ ಪಂಪ ನಿಂದ ನವ್ಯ ಕವಿ ಬೇಂದ್ರೆಯವರಿಗೆ ಜನ್ಮ ನೀಡಿದ ಜಿಲ್ಲೆ, ಗದಗಿನ ಭಾರತ ಬರೆದ ಲಕ್ಷ್ಮೀಶ ಕವಿಗೆ, ಹಿಂದು ಮುಸ್ಲಿಂ ಬಾಂಧವ್ಯ ಮೂಡಿಸಿದ ಶಿಶುನಾಳ ಶರೀಫನಿಗೆ, ಕ್ರಾಂತಿ ಕವಿ ಸರ್ವಜ್ಞನಿಗೆ, ಜನ್ಮ ನೀಡಿದ ಜಿಲ್ಲೆ ಧಾರವಾಡ. ಅಂಥವರಲ್ಲಿ ಛತ್ರಪತಿ ಶಿವಾಜಿ ಮಹಾರಾಜರಿಗೂ ಮೂಲ ಧಾರವಾಡ ಜಿಲ್ಲೆಯ "ಸೊರಟೂರ" (ಇಂದು ಗದಗ ಜಿಲ್ಲೆಯಲ್ಲಿದೆ) ಅಲ್ಲದೆ "ಲಿಂಗಾಯತ ಗೌಳಿ" ಮನೆತನದವರು. 13 ನೇ ಶತಮಾನಕ್ಕೆ ಶಿಖರ ಶಿಂಗಣಾಪೂರಕ್ಕೆ ಬಳಿಯಪ್ಪ ನೆಂಬುವವರು ಹೋದರು ಆತ ಶಿಖರ ಶಿಂಗಣಾಪೂರದ ಪಾಳೆಗಾರನಾಗಿದ್ದನು ಎಂಬುದು ಐತಿಹಾಸಿಕ ಸಂಗತಿ "ಬಳಿಯಪ್ಪ"ನು ಶಿವಾಜಿ ವಂಶದ ಮೂಲ ಪುರುಷನು.

ಶಿವಾಜಿಯು ಲಿಂಗಾಯತನು ಎನ್ನಲು ಆಧಾರಗಳು :

1. ಶಿವಾಜಿಯ ಮೂಲ ಸ್ಥಳ ಕರ್ನಾಟಕದ ಗದಗ ಜಿಲ್ಲೆಯ ಸೊರಟೂರು.
2. ಛತ್ರಪತಿ ಶಿವಾಜಿ ಮಹಾರಾಜನ ಕುಲದೈವ ಶ್ರೀಶೈಲ ಮಲ್ಲಿಕಾರ್ಜುನ, ಶ್ರೀ ಶೈಲದಲ್ಲಿ ಉತ್ತರದ ದ್ವಾರಗೋಪುರ ಕಟ್ಟಿ ಅದಕ್ಕೆ ಶಿವಾಜಿಯ ಹೆಸರಿಡಲಾಗಿದೆ. ಅಲ್ಲಿಯೇ ಶಿವಾಜಿಯ ಅರಮನೆಯೂ ಇರುತ್ತದೆ.
3. ಶಿಖರ ಶಿಂಗಣಾಪುರದಲ್ಲಿ ಆಳಿದ ಮೂಲ ಪುರುಷನ ಹೆಸರು "ಬಳಿಯಪ್ಪಾ".
4. ಇವರ ಧಾರ್ಮಿಕ ಗುರುಗಳ ಹೆಸರು ಶ್ರೀ "ಶಾಂತಲಿಂಗ" ಸ್ವಾಮಿಗಳು; ಇವರಿಗೆ ಲಿಂಗ ದೀಕ್ಷಾ ಮಾಡಿದ ಗುರುಗಳಾಗಿರಬಹುದು. "ಶಾಂತ ಲಿಂಗ" ಇದು ಲಿಂಗಾಯತರ ಹೆಸರು, ಈ ಸ್ವಾಮಿಗಳ

ಶಿಷ್ಯ ಛತ್ರಪತಿ ಶಿವಾಜಿ ಮಹಾರಾಜರು.

5. ಮಹಾರಾಷ್ಟ್ರದಲ್ಲಿ ಲಿಂಗಾಯತರಿಗೆ "ಲಿಂಗಾಡೆ" ಧರ್ಮೀಯ ಹಿಂದುಳಿದವನಾದದ್ದರಿಂದ ಮಹಾರಾಷ್ಟ್ರದ ಬ್ರಾಹ್ಮಣರು (ಚಾತುರ್ವರ್ಣ್ಯ ಅನುಸರಿಸುವವರು) ಶಿವಾಜಿಗೆ ಜನಿವಾರವಿಲ್ಲ. ವಿಧಿ ವಿಧಾನ ಪ್ರಕಾರ ಪಟ್ಟಾಭಿಷೇಕ ಮಾಡಲು ಹೋಮ ಹವನ ಮಾಡಬೇಕಾಗುತ್ತದೆ. ಆದ್ದರಿಂದ ಸಂಪ್ರದಾಯ ಬಿಟ್ಟು ಶಿವಾಜಿಯ ಪಟ್ಟಾಭಿಷೇಕ ಮಾಡಲು ಸಾಧ್ಯವಿಲ್ಲವೆಂದು ಬಹಿಷ್ಕರಿಸಿದರು. ಬೇರೆ ಕಡೆಯಿಂದ ಪುರೋಹಿತರನ್ನು ಕರೆತಂದು, ಕೆಲ ಮುಸಲ್ಮಾನರ ಸಹಾಯದಿಂದ ಪಟ್ಟಾಭಿಷೇಕ ಮಾಡಬೇಕಾಯಿತು.

6. ಬ್ರಾಹ್ಮಣ ವೈದಿಕ ಆಚರಣೆಯಲ್ಲಿ ನಂಬಿಗೆ ಇಟ್ಟಿದ್ದ ಕೆಲವು ಮರಾಠಿಗರು ಪಟ್ಟಾಭಿಷೇಕಕ್ಕೆ ವಿರೋಧಿಸಿದರು ಆಗ ಮುಸಲ್ಮಾನರು ಮುಂದೆ ಬಂದು ಪಟ್ಟಾಭಿಷೇಕಕ್ಕೆ ನೆರವಾಗಿ ಸಾಂಗಗೊಳಿಸಿದರಂತೆ. ಶಿವಾಜಿಯು ಮುಸಲ್ಮಾನ ಕೆಲ ವೈರಿಗಳನ್ನು ಹೊರತು ಪಡಿಸಿ ಉಳಿದ ಮುಸಲ್ಮಾನರೊಂದಿಗೆ ಅತ್ಯಂತ ಸ್ನೇಹ ಹಾಗೂ ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದ ಎನ್ನುವುದಕ್ಕೆ ಪಟ್ಟಾಭಿಷೇಕದ ಸಮಯದಲ್ಲಿ ಮುಸಲ್ಮಾನರು ಮಾಡಿದ ಸಹಾಯವೇ ಸಾಕ್ಷಿ.

7. ಎಡಗೈ ರಟ್ಟೆಗೆ ಇಷ್ಟಲಿಂಗವನ್ನು ಕಟ್ಟಿಕೊಂಡಿದ್ದನೆಂದು ಹೇಳಲಾಗುತ್ತದೆ. ಯುದ್ಧದಲ್ಲಿ ಎದೆ ಮೇಲೆ ಲಿಂಗವು ಇದ್ದರೆ ತೊಂದರೆಯಾಗುತ್ತದೆ ಎಂದು ಭದ್ರವಾಗಿ ರಟ್ಟೆಗೆ ಕಟ್ಟಿಕೊಂಡಿರಬಹುದು. ಈಗಲು ಕೂಡ ಕೆಲವರು ಎದೆಯ ಮೇಲೆ ಲಿಂಗ ಕಟ್ಟಿಕೊಳ್ಳುವುದನ್ನು ಹೀಗೇಕೆ? ಎಂದು ಕೇಳಿದರೆ ತಮ್ಮ ಕೆಲಸಕ್ಕೆ ಲಿಂಗವಿದ್ದರೆ ತೊಂದರೆಯಾಗುತ್ತದೆ, ಎಂದು ಹೇಳುತ್ತಾರೆ.

8. ಶಿವಾಜಿಯು ಹಣೆಯ ಮೇಲೆ ಮೂರು ಬೆರಳು ಭಸ್ಮವನ್ನು ಧರಿಸುತ್ತಿದ್ದನು. ಮರಾಠೀಯರ ಪ್ರಭ್ರಾವದಿಂದ ಚಂದ್ರಾಕಾರವಾಗಿ ಧರಿಸುತ್ತಿದ್ದಿರಬಹುದು.

9. ರಾಜಾರಾಮನನ್ನು ಔರಂಗಜೇಬನ ಸೈನಿಕರು ಬೆನ್ನು ಹತ್ತಿದ್ದಾಗ ಜೀವ ರಕ್ಷಣೆಗಾಗಿ ಲಿಂಗಾಯತ ಬಂಧುಗಳಾದ ಕೆಳದಿ ಚೆನ್ನಮ್ಮನ ಆಶ್ರಯ ಪಡೆದಿದ್ದು ಐತಿಹಾಸಿಕ ಸಂಗತಿ. ಮಹಾರಾಷ್ಟ್ರದ ಸುತ್ತ ಮುತ್ತಲೂ ಹಿಂದು ರಾಜರುಗಳು ಬೇಕಾದಷ್ಟು ಇದ್ದರೂ ಕೂಡ ತಮ್ಮ ಧರ್ಮ ಬಾಂಧವರೆಂದು ಕೆಳದಿಯ ಚೆನ್ನಮ್ಮನಲ್ಲಿಗೆ ಹೋಗಿರಲೂ ಸಾಕು.

ಇತಿಹಾಸದಲ್ಲಿ ಕುತೂಹಲ ಇದ್ದ ಪ್ರಾಜ್ಞರು ಈ ಆಧಾರ ಕೂಲಂಕುಶವಾಗಿ ಅವಲೋಕಿಸಿ ಶಿವಾಜಿಯು ಲಿಂಗಾಯತರೆಂಬುದನ್ನು ದೃಢಪಡಿಸಿಕೊಳ್ಳಬೇಕು. ಸಂಶೋಧಕರು ಈ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಮಾಡಿ ಛತ್ರಪತಿ ಶಿವಾಜಿಯವರ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಬೇಕು.

ಡಾ.ಶಿ.ಬಾ.ಪಾಟೀಲ, ಸಂಕೇಶ್ವರ - 591313

ಆಕರಗಳು :

1. ಚಂದನ ಟಿ.ವ್ಹಿ. ಥಟ್ಟಅಂತಾ ಉತ್ತರಾ ಹೇಳಿ ವಿಭಾಗ - ಡಾ.ಸೋಮಶೇಖರ
2. ಶಿಖರ ಶಿಂಗಣಾಪೂರಚಾ ಶಂಭುಮಹಾದೇವ - ಡಾ. ಆರ್.ಸಿ.ಢೇರೆ
3. ಶಿವಾಜಿ ಮೂಲ ಲಿಂಗಾಯತ ಗೌಳಿ - ಡಾ.ಎಂ.ಎಂ.ಕಲಬುರ್ಗಿ
4. ಶಿವಾಜಿ ಮೂಲ ಕನ್ನಡ ನೆಲ - ಡಾ.ಸರಜೂ ಕಾಟಕರ
5. ಶಿವಾಜಿಯ ಮೂಲ ಲಿಂಗಾಯತವೇ ? - ಶ್ರೀ ಸಿದ್ಧರಾಮ ಸ್ವಾಮಿಗಳು
(ಹಳ್ಳಿಯ ಸಂದೇಶ ವಾರ ಪತ್ರಿಕೆ)
6. ಕೆಳದಿ ಚೆನ್ನಮ್ಮ (ಐತಿಹಾಸಿಕ ಕಾದಂಬರಿ) - ಮಾತಾಜಿ

ಅಪೂರ್ವ ಯಶಸ್ಸಿನ 5 ನೆಯ ಕಲ್ಯಾಣ ಪರ್ವ

- ಮಾತಾಜಿ

"ಈ ಸಲ ನಿಜವಾಯೂ ಕಲ್ಯಾಣ ಪರ್ವ ಮಾಡಿದಂತಾಯಿತು. ಐದು ವರ್ಷಗಳಿಂದ ಇದ್ದ ದುಗುಡ ಮರೆಯಾಗಿ, ಸಂತೋಷವು ಹೊನಲಾಗಿ ಹರಿಯಿತು." ಎಂದೇ 5ನೆಯ ಕಲ್ಯಾಣ ಪರ್ವದಲ್ಲಿ ಭಾಗಿಗಳಾದ ಶರಣರ ಅಭಿಪ್ರಾಯ. ಈ ಸಂತೋಷಕ್ಕೆ ಮುಖ್ಯ ಕಾರಣ ಬಸವ ಕಲ್ಯಾಣದ ಕೋಟೆಯಿಂದ ಬಸವ ಮಹಾಮನೆಯವರೆಗೆ ನಡೆದ ಮೆರವಣಿಗೆ ಹಾಗೂ ಪಥ ಸಂಚಲನ. ಎಲ್ಲ ಕಾರ್ಯಕ್ರಮಗಳಲ್ಲಿ ಮೆರವಣಿಗೆ ಮತ್ತು ಪಥ ಸಂಚಲನ ಕಡ್ಡಾಯವಾಗಿ ಇರುತ್ತವೆ. ಊಟಿ, ಹೈದರಾಬಾದ್, ದೆಹಲಿ, ಮುಂಬಯಿ, ಬೆಂಗಳೂರು ಮುಂತಾಗಿ ಎಲ್ಲ ಸಮ್ಮೇಳನದಲ್ಲಿ, ಶರಣ ಮೇಳದಲ್ಲಿ, ಎಲ್ಲಾ ರಾಷ್ಟ್ರೀಯ ಬಸವ ದಳಗಳ ಬಸವ ಜಯಂತಿ ಕಾರ್ಯಕ್ರಮಗಳಲ್ಲಿ ಮೆರವಣಿಗೆ ಮತ್ತು ಪಥ ಸಂಚಲನ ಇರುತ್ತದೆ. ಬಸವ ಕಲ್ಯಾಣದ ಕಲ್ಯಾಣ ಪರ್ವದಲ್ಲೇ ಆಗದಿದ್ದರೆ ಹೇಗೆ? ಎಂಬ ಕೊರಗು ನಮ್ಮ ಶರಣ ಬಂಧುಗಳನ್ನು ಕಾಡುತ್ತಿತ್ತು. ದಿ.8-5-2006ರಂದು ಬೆಳಿಗ್ಗೆ 10 ಗಂಟೆಗೆ ಬಸವ ಕಲ್ಯಾಣದ ಐತಿಹಾಸಿಕ ಕೋಟೆಯಿಂದ ಮೆರವಣಿಗೆ ಆರಂಭವಾಯಿತು.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳವರು ಮತ್ತು ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು ಐತಿಹಾಸಿಕ ಪರುಷ ಕಟ್ಟೆಯ ಬಳಿ ಹೋಗಿ ಗುರು ಬಸವಣ್ಣನವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಅಲ್ಲಿಂದ ಜ್ಯೋತಿಯನ್ನು ಹಚ್ಚಿಕೊಂಡು ಕಾಲು ನಡಿಗೆಯಲ್ಲಿ ಸಾಗುತ್ತ ಬಂದರು. ಶರಣ-ಶರಣೆಯರು ಜಯ ಘೋಷ ಮಾಡುತ್ತ ಕುಣಿದು ಕುಪ್ಪಳಿಸಿದರು. ಬೀದರಿನ ಗಣಾಚಾರ ದಳದ ಕಾರ್ಯಕರ್ತರ ಕೋಲಾಟ ಎಲ್ಲರ ಗಮನ ಸೆಳೆಯಿತು. ನಗರದ ಸ್ಥಳೀಯರು ಸಹ ಸಂಭ್ರಮ-ಸಂತೋಷದಿಂದ ತಮ್ಮ ತಮ್ಮ ಅಂಗಡಿ, ಮನೆಗಳಿಂದ ಹೊರಬಂದು ಮೆರವಣಿಗೆ ನೋಡಿದರು. ಬಸವೇಶ್ವರ ದೇವಸ್ಥಾನ ಸಮಿತಿಯವರಾಗಲೀ, ಆಧುನಿಕ ಅನುಭವ ಮಂಟಪದವರಾಗಲೀ ಪತ್ರಿಕೆಗಳ ಮೂಲಕ ಗರ್ಜಿಸಿರಲಿಲ್ಲ. ಆದರೂ ಒಂದೇ ಸಲಕ್ಕೆ ವಿರೋಧ ನಿಲ್ಲಿಸಿದರೆ ದೃಷ್ಟಿಯಾಗಬಹುದೆಂದು ಮುಖ್ಯ ರಸ್ತೆಯಲ್ಲಿರುವ ಅಶ್ವಾರೂಢ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಲು ನಮ್ಮ ಶರಣರು ಹೋದಾಗ ಪುತ್ಥಳಿಗೆ ಮಾಲಾರ್ಪಣೆ ಮಾಡಕೂಡದೆಂದು ಒಬ್ಬ ವ್ಯಕ್ತಿ ತಡೆಮಾಡಿದನಂತೆ. ಪೋಲೀಸರು ಶಾಂತಿದೂತರಾಗಿ "ಹೋಗಲಿ ಬಿಡಿರಿ, ಮಾಲಾರ್ಪಣೆ ಬೇಡ ನಡೆಯಿರಿ." ಎಂದು ಹೇಳಿದಾಗ ನಮ್ಮ ಒಬ್ಬ ಶರಣರಾದ ಮಹಾದೇವ ಬೇಲೂರೆ ನಿಂತಲ್ಲಿಂದಲೇ ಹೂಮಾಲೆಯನ್ನು ಎಸೆದಾಗ ಅದು ಹೋಗಿ ಧರ್ಮಪಿತರ ಎಡ ಮುಂಗೈ ಮೇಲೆ ಅಚ್ಚುಕಟ್ಟಾಗಿ ಕುಳಿತಾಗ ಶರಣರು ಹರ್ಷದಿಂದ ಜಯಘೋಷ ಮಾಡಿದರಂತೆ. ಮತ್ತೊಬ್ಬ ಶರಣರು ಎಸೆದ ಮಾಲೆ ಕುದುರೆ ಮೇಲೆ ಇದ್ದ ಮೂರ್ತಿಯ ಪಾದದ ಮೇಲೆ ಕುಳಿತಿತಂತೆ. ಎಲ್ಲರಿಗೂ ಸಂತೋಷವೆನಿಸಿ ಮುಂದೆ ನಿರಾತಂಕವಾಗಿ ಹೊರಟರಂತೆ.

ಡಾ||ಅಂಬೇಡ್ಕರ್ ಚೌಕದಲ್ಲಿ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಬೇಕೆಂದು ಬರುವಾಗ ಆ ಸಮಾಜದ ಮುಖಂಡರು ಬಂದು ಜಂಗಮ ಮೂರ್ತಿಗಳನ್ನು ಸ್ವಾಗತಿಸಿ, ಗೌರವಿಸಿ ಮಾಲಾರ್ಪಣೆಗೆ ಅವಕಾಶ ಮಾಡಿಕೊಟ್ಟರಂತೆ. ದಾರಿಯಲ್ಲಿ ಶರಣ.ಹರಳಯ್ಯನವರ ಚೌಕ, ಮಡಿವಾಳ ಮಾಚಿದೇವರ ಚೌಕ ಮುಂತಾದೆಡೆ ಆಯಾ ಮಹಾತ್ಮರಿಗೆ ಮಾಲಾರ್ಪಣೆ ಮಾಡಿ ಗೌರವ ಸೂಚಿಸಿ ಪೂಜ್ಯರುಗಳು ಮುಂದೆ ಸಾಗಿದರು.

ಪರುಷ ಕಟ್ಟೆಯು ಬಸವ ಕಲ್ಯಾಣದ ಅತ್ಯಂತ ಮಹತ್ವದ ಸ್ಥಳ. ಅದರ ಮೇಲೆ ಕುಳಿತು ಗುರು ಬಸವಣ್ಣನವರು ಭಕ್ತರಿಗೆ, ಪ್ರಜೆಗಳಿಗೆ ಸಂದರ್ಶನ ನೀಡುತ್ತಲಿದ್ದುದೇ ಅಲ್ಲದೆ ಅವರ ಇಷ್ಟಾರ್ಥಗಳನ್ನು ಪೂರೈಸುತ್ತಿದ್ದರು. ಅಲ್ಲಿ ಪೂಜೆ ಸಲ್ಲಿಸಿ ಜ್ಯೋತಿಯನ್ನು ತಂದು ಅಲ್ಲಮ ಪ್ರಭು ಶೂನ್ಯ ಪೀಠಾರೋಹಣದ ಜ್ಯೋತಿಯನ್ನು ಹಚ್ಚಿಸಬೇಕು.

ಎಂಬ ನಮ್ಮ ಸಂಕಲ್ಪ ಪೂರೈಸಿರಲಿಲ್ಲ. ಈ ವರ್ಷ ಅದು ಪೂರೈಸಿತು. ಇನ್ನು ಮುಂದೆ ಇದು ಒಂದು ಧಾರ್ಮಿಕ ನಿಯಮ. ಪೀಠಾಧೀಶರು ಪರುಷ ಕಟ್ಟೆಗೆ ಹೋಗಿ ಬಸವ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಜ್ಯೋತಿಯನ್ನು ಹಚ್ಚಿಕೊಂಡು ತಂದು ನಂತರ ಪೀಠಾರೋಹಣದ ಜ್ಯೋತಿಯನ್ನು ಉದ್ದೀಪಿಸಬೇಕು. ಇಂದು ಅದರ ಸುತ್ತಲಿನ ಪರಿಸರ ಅತ್ಯಂತ ಕೊಳಕಾಗಿ ಇದೆ.

ಈಗಲಾದರೂ ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ಪರುಷ ಕಟ್ಟೆಯ ಸುತ್ತಲಿನ ಪರಿಸರವನ್ನು ಸ್ವಚ್ಛ ಮತ್ತು ಸುಂದರಗೊಳಿಸಬಹುದೆಂಬ ಆಕಾಂಕ್ಷೆಯನ್ನು ಹೊಂದಬಹುದೇನೊ! ಹೀಗೆ ಮೆರವಣಿಗೆ ಸಾಂಗವಾಗಿ ನೆರವೇರಿತು. ಮಧ್ಯೆ ಒಂದು ಸಣ್ಣ ಘಟನೆ ನಡೆಯಿತು. ಒಬ್ಬ ವಿಭೂತಿ ಬಳಿದುಕೊಳ್ಳುವ, ಹುಚ್ಚನಂತೆ ಕಾಣುವ ಮುದುಕ ವ್ಯಕ್ತಿ ಇದ್ದಾನೆ. ಅವನಿಗೆ ಧನ ಸಹಾಯ ಒದಗಿಸುವವರು ಯಾರೋ ಇದ್ದಿರಲೇಬೇಕು. ಆತ ಕಿತಾಪತಿ ಮಾಡಲು ಎಲ್ಲಾ ಕಡೆಗೆ ಬರುತ್ತಾನೆ. ದೆಹಲಿಗೆ ಬಂದಿದ್ದ; ಶೀಸ್‌ಗಂಜ್ ಗುರುದ್ವಾರಕ್ಕೆ ಹೋಗಿ ಅಲ್ಲಿ ಬೈಸಿಕೊಂಡಿದ್ದ ಅಲ್ಲಮ ಪ್ರಭು ಗಿರಿಯ ಮೇಲಿನ ಸಮ್ಮೇಳನದ ನಾಲ್ಕು ದಿನ ಮೊದಲ ಕೊಲ್ಹಾಪುರಕ್ಕೂ ಬಂದಿದ್ದ. ಕಾಯಂ ಇರುವುದು ಶ್ರೀ ಸಿದ್ಧರಾಮಣ್ಣನವರ ಆಧುನಿಕ ಅನುಭವ ಮಂಟಪದಲ್ಲಿ. ಕೆಲವು ಜನ ಪರುಷ ಕಟ್ಟೆ ದರ್ಶನಕ್ಕೆ ಹೋಗಿ ಬರುತ್ತಿದ್ದರಂತೆ ದಾರಿಯಲ್ಲಿ ಒಂದು ಜಾಗದಲ್ಲಿ ನಿಂತು ಬಾಯಿಗೆ ಬಂದಂತೆ ಬೈದಾಡುತ್ತಿದ್ದನಂತೆ. ಆ ಮಹಿಳೆಯರನ್ನು ಕಂಡವನೇ ಅವರ ಸ್ಕಾರ್ಫ್ ನೋಡಿ ನಮ್ಮ ಶರಣರು ಎಂದು ತಿಳಿದು ನಮ್ಮನ್ನು -ಅವರನ್ನು ಅಶ್ಲೀಲವಾಗಿ ಬೈದನಂತೆ. ಹೆಣ್ಣುಮಕ್ಕಳಿಗೆ ಸಿಟ್ಟು ಬಂದು ಅವನನ್ನು ನಾಲ್ಕಾರು ಜನ ಮಹಿಳೆಯರು ಚೆನ್ನಾಗಿ ಹೊಡೆದರಂತೆ. ಅದು 5 ವರ್ಷಗಳ ಸಿಟ್ಟು ಅಂತ ಕಾಣುತ್ತದೆ. ಹೊಡೆದವರು ಯಾರು ಎಂಬುದೂ ಗೊತ್ತಾಗಲಿಲ್ಲ. ತನ್ನ ನೆಲದಲ್ಲೇ ತಾನು ಮಹಿಳೆಯರ ಕೈಲಿ ಹೊಡೆಸಿಕೊಂಡನೆಂಬ ವಿಷಾದನೀಯ ಘಟನೆ ಬಿಟ್ಟರೆ ಶರಣ ಬಂಧುಗಳಿಗೆಲ್ಲ ಮೆರವಣಿಗೆ ಹರ್ಷ ತಂದಿತು.

5 ನೆಯ ಕಲ್ಯಾಣ ಪರ್ವದ ವಿವರ

ವರದಿ: ಕರಿಬಸಪ್ಪ ಕೋರಿಶೆಟ್ಟರು

ಶರಣ(ಶನಿ)ವಾರ ದಿ.6-5-2006 ರಂದು ಬೆಳಿಗ್ಗೆ 10-30ಕ್ಕೆ ಚಿಂತನಗೋಷ್ಠಿಯಿಂದ ಕಾರ್ಯಕ್ರಮ ಪ್ರಾರಂಭವಾಯಿತು. ಹಿಂದಿನ ದಿವಸ ಬಲವಾದ ಗಾಳಿ ಬೀಸಿ ಪೆಂಡಾಲಿನ ಬಟ್ಟೆ ಹರಿದಿದ್ದು ಎಲ್ಲವೂ ಪುನಃ ನಿರ್ಮಾಣ ಮಾಡಬೇಕಾಯಿತು. ಹೀಗಾಗಿ ಚಿಂತನಗೋಷ್ಠಿಯಲ್ಲಿ ಕಲ್ಯಾಣ ಪರ್ವದ ಸಮಯವನ್ನು ಬದಲಿಸಬಹುದೆ ಎಂಬ ಬಗ್ಗೆ ಚಿಂತನೆ ನಡೆಯಿತು. ಸಾಮಾನ್ಯವಾಗಿ ಬಸವ ಜಯಂತಿಯ ಆಸುಪಾಸಿನಲ್ಲಿ ಮೇ 1 ಬರುತ್ತದೆ ; ಆಗ ಜೋರಾಗಿ ಗಾಳಿ ಮತ್ತು ಮಳೆ ಬರುವ ಸಂಭವವಿರುತ್ತದೆ. ಮದುವೆ ಸೀಸನ್ ಬೇರೆ ಬಂಧು ಬಳಗದವರ ಮದುವೆಗಳಿಗೆ ಹೋಗುವ ಒತ್ತಡವಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ ಮತ್ತು ತಿಂಗಳನ್ನು ಬದಲಾಯಿಸಿದರೆ ಹೇಗೆ? ಎಂಬ ಚರ್ಚೆ ನಡೆಯಿತು. ಆದರೆ ಇದೇ ಸಮಯವೇ ಸೂಕ್ತ, ರಜಾ ದಿನಗಳಿರುತ್ತವೆ. ಆರಂಭದ ಒಂದು ಎರಡು ಮಳೆ ಬಂದರೂ ಭೂಮಿ ಹಸಿಯಾಗಿರದು. ಆದರಿಂದ ತೊಂದರೆಯಾಗದು ಎಂದು ಚರ್ಚೆಯಾಗಿ ಪ್ರತಿವರ್ಷದ ಮೇ 1,2,3 ರಂದೇ ಕಲ್ಯಾಣ ಪರ್ವವನ್ನು ಇಡಬೇಕು ಎಂದು ನಿರ್ಧರಿಸಲಾಯಿತು.

ಶರಣು ಮತ್ತು ಶರಣಾರ್ಥಿ

ಆಂಗ್ಲ ಸಂಸ್ಕೃತಿಯಲ್ಲಿ ಭೇಟಿಯಾದ ತಕ್ಷಣ ಗುಡ್ ಮಾರ್ನಿಂಗ್, ನೂನ್, ಈವನಿಂಗ್ ಎಂದು, ಹಾಯ್ ಎಂದು ಅನ್ನುತ್ತಾರೆ. ಹೋಗುವಾಗ ಬೈ ಬೈ ಎನ್ನುತ್ತಾರೆ. ಅದೇ ರೀತಿ ಶರಣರು ಒಬ್ಬರೊಬ್ಬರು ಭೇಟಿಯಾಗುತ್ತಲೇ 'ಶರಣು' ಎನ್ನಬೇಕು. ಪುನಃ ಅಗಲುವಾಗ, ಬೀಳ್ಕೊಡುವಾಗ "ಶರಣಾರ್ಥಿ" ಎನ್ನಬೇಕು. ಎಂಬ ಬಗ್ಗೆ ಚರ್ಚೆಯಾಗಿ, ನಿರ್ಣಯವಾಯಿತು.

ಕಲ್ಯಾಣ ಕ್ರಾಂತಿ ದಿನಾಚರಣೆ-ದಸರಾ ಸಮಯದಲ್ಲಿ; ಹರಳಯ್ಯ-ಮಧುವರಸರ ಮಕ್ಕಳ ಮಧ್ಯೆ ವಿವಾಹ; ನಂತರದ ಕ್ರಾಂತಿಯ ಘಟನೆಗಳು ನಡೆದುದು ರಾಕ್ಷಸ ನಾಮ ಸಂವತ್ಸರದ ಫಾಲ್ಗುಣ

ಮಾಸದಲ್ಲಿ ಬಿಜ್ಜಳನ ವಧೆಯಾದುದು ಹುಣ್ಣಿಮೆಯಂದು. ಅದು ಹೋಳಿ ಹುಣ್ಣಿಮೆ. ಆಗ ಅತ್ಯಂತ ಅಸಭ್ಯವಾಗಿ ಪಡ್ಡೆ ಹುಡುಗರು ಅಸಹ್ಯವಾಗಿ ವರ್ತಿಸುವುದಲ್ಲದೆ ಅದು ಬೈಗಳ ಹಬ್ಬವೆಂದು ಹೆಸರು. ನಂತರ ಬಣ್ಣ ಎರಚುವ ಪದ್ಧತಿ ಉತ್ತರ ಕರ್ನಾಟಕದಲ್ಲಿ ಬಹಳ. ಈ ಸಂಬಂಧ ಊರುಗಳಲ್ಲಿ ಕೋಮುಗಲಭೆಗಳು ಸಹ ಆಗುತ್ತವೆ. ಕಲ್ಯಾಣದಲ್ಲಿ ಸಮಾನತೆಯ ಪ್ರತಿಷ್ಠಾಪನೆಗಾಗಿ ಹುತಾತ್ಮರಾದ ಶರಣರಿಗೆ ನಾಡಿನ ಎಲ್ಲೆಡೆ ಶ್ರದ್ಧಾಂಜಲಿ ಆಚರಿಸುವ ಕಾರ್ಯಕ್ರಮ ರೂಪಿಸುವುದು ಅತ್ಯಗತ್ಯ. ಆದ್ದರಿಂದ ಹೋಳಿ ಹುಣ್ಣಿಮೆ ಸಂದರ್ಭದಲ್ಲಿ ಕಲ್ಯಾಣ ಕ್ರಾಂತಿಯ ಸಂಸ್ಮರಣೆಯನ್ನು ಆಚರಿಸುವ ಬದಲಿಗೆ ನವರಾತ್ರಿಯ ಸಮಯದಲ್ಲಿ ಆಚರಿಸಬೇಕು ಎಂದು ಪ್ರಸ್ತಾಪಿಸಿದಾಗ ಎಲ್ಲರೂ ಸಹರ್ಷದಿಂದ ಸ್ವಾಗತಿಸಿದರಲ್ಲದೆ ನವರಾತ್ರಿಗೆ ಅದನ್ನು ಆಚರಿಸುವ ನಿರ್ಣಯಕ್ಕೆ ಒಮ್ಮತದಿಂದ ಒಪ್ಪಿಗೆ ನೀಡಿದರು. ಆಚರಣೆಯ ವಿಧಿ ವಿಧಾನ ಕುರಿತು ಪ್ರತ್ಯೇಕ ಲೇಖನ ಬರೆಯಲಾಗುವುದು.

866666 ಇರಲಿ

ಓರ್ವ ಶರಣರು ಒಂದು ಸಲಹೆ ಕಳುಸಿದ್ದರು. ಅಷ್ಟಾವರಣ, ಷಡಾಚಾರ, ಷಟಸ್ಥಲ, ಷಟ್‌ಸೂತ್ರ, ಷಟ್‌ಶೀಲ, ಷಟ್‌ಕ್ರಿಯೆಗಳನ್ನು ಪ್ರತಿನಿಧಿಸುವ ಷಟ್ ಸಂಜ್ಞೆ 866666 ಇದನ್ನು ಸಂಕೇತ ರೂಪದಲ್ಲಿ ಏಕೆ ಬರೆಯಬಾರದು? ಎಂದು 8_{666} 8 ರ ಅಂಕಿಯ ಮೇಲ್ಭಾಗದಲ್ಲಿ 66, ಕೆಳಭಾಗದಲ್ಲಿ 666 ಹೀಗೆ ಬರೆಯಬಹುದು ಎಂಬ ಸಲಹೆ ತಂಬಾ ಚರ್ಚೆಯಾಗಿ, ಈಗ ಸದ್ಯದಲ್ಲಿ ಸರಳ ರೇಖೆಯಲ್ಲಿ ಬರೆಯುತ್ತಿರುವುದೇ ಹೆಚ್ಚು ಅರ್ಥಪೂರಿತವಾಗಿದ್ದು ಜನಪ್ರಿಯವಾಗುತ್ತಿರುವುದರಿಂದ ಬದಲಿಸುವುದು ಬೇಡ ಎಂಬ ನಿರ್ಣಯಕ್ಕೆ ಬರಲಾಯಿತು.

ಕಲ್ಯಾಣ ಪರ್ವದ ಉದ್ಘಾಟನೆ

ಕೇಂದ್ರ ಸಚಿವರಾದ ಕೆ.ಹೆಚ್.ಮುನಿಯಪ್ಪನವರು ತಮಿಳುನಾಡು, ಕೇರಳ ಚುನಾವಣಾ ಪ್ರಚಾರದ ಒತ್ತಡದ ಮಧ್ಯೆಯೂ ಬಿಡುವು ಮಾಡಿಕೊಂಡು ಆಗಮಿಸಿ ಕಲ್ಯಾಣ ಪರ್ವದ ಉದ್ಘಾಟನೆ ಪೂರೈಸಿ, ಹೈದರಾಬಾದ್ ಮೂಲಕ ಚೆನ್ನಾಯ್‌ಗೆ ಪ್ರಯಾಣ ಬೆಳೆಸಿದರು. ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ ಷಡಾಚಾರದ ವಚನಗಳು ಎಂಬ ಶರಣ ಸಿದ್ಧರಾಮಪ್ಪ ಪಾಟೀಲ್, ಯರಮರಸ್ ಅವರು ಸಂಗ್ರಹಿಸಿದ ವಚನಗಳ ಬಿಡುಗಡೆ ಮಾಡಿದರು.

ಬೀದರಿನಲ್ಲಿ ಬೇರೊಂದು ಸಮ್ಮೇಳನದಲ್ಲಿ ತೊಡಗಿಸಿಕೊಂಡಿದ್ದ ಕರ್ನಾಟಕ ಸರ್ಕಾರದ ಯುವಜನ ಸೇವೆ ಮತ್ತು ಕ್ರೀಡಾ ಸಚಿವರಾದ ಆಲ್ಕೋಡು ಹನುಮಂತಪ್ಪನವರು ರಾತ್ರಿ ಹತ್ತೂವರೆಗೆ ಆಗಮಿಸಿದರು. ಶರಣ ಬಂಧುಗಳಿಗೆ ಶಾಲಾ ಮಕ್ಕಳಿಗೆ ಶಿಕ್ಷೆ ನೀಡಿದಂತಾಯಿತು. ಸಂಜೆ 6 ಗಂಟೆಗೆ ಉದ್ಘಾಟನಾ ಸಮಾರಂಭ ಇಟ್ಟಿದ್ದೆವು. ಶರಣ.ಕೆ.ಹೆಚ್.ಮುನಿಯಪ್ಪನವರು ದೂರವಾಣಿ ಮಾಡಿ "ನಾನು ತಮಿಳು ನಾಡಿಗೆ ಹೋಗಬೇಕೆಂದು ಸೂಚನೆ ಬಂದಿದೆ. ಹೈದರಾಬಾದಿಗೆ ಹೋಗಿ ವಿಮಾನ ಹತ್ತಬೇಕು. ನಾಲ್ಕೂವರೆಗೆ ಬರುತ್ತೇನೆ; ಉದ್ಘಾಟನೆ ಮುಗಿಸಿ 5 ಗಂಟೆಗೆಲ್ಲ ಹೊರಟು ಹೈದರಾಬಾದ್‌ಗೆ ಹೋಗಬೇಕಾಗಿದೆ, ಎಂದ ತಕ್ಷಣ ಜನರಿಗೆ ಮೈಕ್‌ನಲ್ಲಿ ವಿವರ ತಿಳಿಸಿ ನಾಲ್ಕೂವರೆ ಒಳಗೆ ಬಂದು ಬಿಡಬೇಕು ಎಂದು ಸೂಚಿಸಲಾಯಿತು. ಆವರಣಲ್ಲಿದ್ದ ಶರಣ ಬಂಧುಗಳು ಬಂದರು. ಆವರೆ 6 ಗಂಟೆಗೆ ಉದ್ಘಾಟನೆ ಎಂದು ತಿಳಿಸಿದ್ದ ಕಾರಣ ಪತ್ರಿಕಾ ಕರ್ತರು, ಟಿ.ವಿಯವರು ಬರಲಾಗಲಿಲ್ಲ. ಅವರು ಬರುವ ಹೊತ್ತಿಗೆ ಉದ್ಘಾಟನೆ ಮುಗಿಸಿ ಸಚಿವರು ಹೋಗಿದ್ದರು. ಸಚಿವ ಆಲ್ಕೋಡು ಹನುಮಂತಪ್ಪನವರಿಗಾಗಿ ಟಿ.ವಿಯವರು ಕಾಯ್ದರು. 6,7,8 ಹೀಗೆ ಗಂಟೆಗಳು ಸರಿದವು. ಈಗ ಬಂದು ಬಿಡುತ್ತಾರೆ ಎಂದು ಫೋನ್ ಬರುತ್ತಿದ್ದವು. ರಾತ್ರಿ ಒಂಭತ್ತರವರೆಗೆ ಟಿ.ವಿ, ಪತ್ರಿಕೆಗಳವರು ಕಾಯ್ದರು. ನಮ್ಮಲ್ಲಿ ನಿರಂತರವಾಗಿ ಉಪನ್ಯಾಸಗಳು ನಡೆಯುತ್ತಲಿದ್ದವು, ಜನರ ತಾಳ್ಮೆ ಕೆಡಿಸುವುದು ಬೇಡವೆಂದು ಹತ್ತು ಗಂಟೆಗೆ ಮಂಗಲ ಮಾಡಬೇಕು ಎನ್ನುವಾಗ ಸಚಿವರು ಬರುವುದಾಗಿ ಫೋನ್ ಬಂದಿತು. ಹತ್ತೂವರೆಗೆ ಬಂದರು. ಹನ್ನೊಂದೂವರೆ ರಾತ್ರಿಗೆ ಕಾರ್ಯಕ್ರಮ ಮುಗಿಯಿತು. ಅಭಿಮಾನದಿಂದ ಮಾತನಾಡಿದರು. ಬೀದರಿನಲ್ಲಿ

ನಡೆದ ಕಾರ್ಯಕ್ರಮ ತಡವಾಗಿ ಶುರುವಾಗಿ ವಿಳಂಬವಾಯಿತು. ಕಲ್ಯಾಣ ಪರ್ವದ ಸಭೆ ಮುಗಿದಿರಬಹುದು, ನೇರವಾಗಿ ಗುಲಬರ್ಗಾಕ್ಕೆ ಹೋಗೋಣ ಎಂದು ಜೊತೆಗೆ ಇದ್ದವರು ಒತ್ತಾಯಿಸಿದರೂ ಸಹ ಕಡೆಗೆ ಪೂಜ್ಯ ಮಾತಾಜಿಯವರ ದರ್ಶನವನ್ನಾದರೂ ಮಾಡಿ ಹೋಗೋಣ ಎಂದು ಬಂದರಂತೆ. ಸಭೆ ಇನ್ನೂ ನಡೆಸಿರುವುದನ್ನು ಕಂಡು ತಮ್ಮ ಭಾಷಣವನ್ನು ವಿವರವಾಗಿಯೇ ಮಾಡಿ ಗುರು ಬಸವಣ್ಣನವರ ಕ್ರಾಂತಿಕಾರಕ ಸುಧಾರಣೆ ಕುರಿತು ವಿವರಿಸಿದರು.

ಸಾಮೂಹಿಕ ಇಷ್ಟ ಲಿಂಗಾರ್ಚನೆ

ಇಷ್ಟಲಿಂಗಾರ್ಚನೆ ಲಿಂಗಾಯತ ಧರ್ಮದ ನಿತ್ಯ ವಿಧಿ. ಭಕ್ತಿ ಪ್ರಧಾನವಾದ ಲಿಂಗಾಯತ ಧರ್ಮದಲ್ಲಿ ಅರ್ಚನೆ ಒಂದು ಯಾಂತ್ರಿಕ, ವಟವಟ ಎಂದು ಮಂತ್ರಗಳನ್ನು ಯಾಂತ್ರಿಕವಾಗಿ ಉಚ್ಚರಿಸುವ ಕ್ರಿಯೆಯಲ್ಲ, ಹೃದಯಪೂರ್ವಕವಾಗಿ ಮಾಡಬೇಕಾದ ದೇವಾರಾಧನೆ. ಆದ್ದರಿಂದ ಪ್ರತಿನಿತ್ಯ ಸುಪ್ರಭಾತದಲ್ಲಿ ಬೆಳಗ್ಗೆ 7-30 ರಿಂದ 8-30ರವರೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆಯು ಮೂರೂ ದಿವಸಗಳ ಕಾಲ ದಿ.6,7 ಮತ್ತು 8ರಂದು ಏರ್ಪಾಡಾಗಿದ್ದು, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳ ನೇತೃತ್ವದಲ್ಲಿ ಜರುಗಿತು.

ಶರಣ ವಂದನೆ

ಬಸವ ಕಲ್ಯಾಣ ಶರಣ ಭೂಮಿ. ಇಡೀ ಜಗತ್ತಿನಲ್ಲಿಯೇ ಅಂಥ ಮಹಿಮಾನ್ವಿತ ಕ್ಷೇತ್ರವು ಲಭ್ಯವಾಗಲಿಕ್ಕಿಲ್ಲ. ಯಾವುದೇ ಪ್ರಸಿದ್ಧ ಐತಿಹಾಸಿಕ ಜಂಗಮ ಕ್ಷೇತ್ರ ಅರ್ಥಾತ್ ಸಂತ, ಮಹಾತ್ಮರ ಸ್ಥಾನಗಳಲ್ಲಿ ಒಬ್ಬರೋ ಇಬ್ಬರೋ ಮಹಾನುಭಾವರು ಆಗಿ ಹೋಗಿದ್ದಾರೆ. ಬಸವ ಕಲ್ಯಾಣದಲ್ಲಿ ನೂರಾರು ಜನ ಸಿದ್ಧ ಪುರುಷರು ತಪಸ್ಸು ಮಾಡಿದ್ದಾರೆ. ಎಷ್ಟು ಅದ್ಭುತವಾಗಿ ಅದು ರೂಪುಗೊಳ್ಳಬೇಕಾಗಿತ್ತು. ಇದಕ್ಕೆ ಕಾರಣ ಬಸವಾದಿ ಪ್ರಮಥರ ಕುರಿತು ಬೆಳೆಯಬೇಕಾಗಿದ್ದ ಭಕ್ತಿಯ ಕೊರತೆಯೇ ಇರಬಹುದು. ವಚನ ಸಾಹಿತ್ಯ ಕೇವಲ ಭಾಷಣದ ಸರಕಾಗಿ ಉಳಿದುದರಿಂದ ಭಕ್ತಿಯ ಕೊರತೆಯುಂಟಾದಂತೆ ತೋರುತ್ತದೆ. ಸಿಖ್ಖರಲ್ಲಿ ಅವರು ದಶಗುರು ಪರಂಪರೆಯ ಗುರುಗಳ ಬಗ್ಗೆ ಗ್ರಂಥ ಸಾಹೇಬದ ಬಗ್ಗೆ ಹೊಂದಿರುವ ಭಕ್ತಿಯನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಆನಂದ ಉಂಟಾಗುತ್ತದೆ. ನಾವಾದರೂ ಭಕ್ತಿಯ ಈ ಮರ್ಮವನ್ನು ಅರಿತು ಬಸವೇಶ್ವರ ಪೂಜಾ ವ್ರತ ಪ್ರಾರಂಭಿಸಿದ ಮೇಲೆಯೇ ಜನರ ಜೀವನದಲ್ಲಿ ಅದ್ಭುತವಾದ ಪರಿಣಾಮ, ಪ್ರಸನ್ನತೆ, ಪ್ರಗತಿ ಕಾಣುತ್ತಲಿದ್ದೇವೆ.

ಆದ್ದರಿಂದ ಶರಣ ಮೇಳದ ಮುಖ್ಯ ವಿಧಿಯಾಗಿ ಸಮುದಾಯ ಪ್ರಾರ್ಥನೆ ವಚನ ಪಠಣ ಇಟ್ಟಿದ್ದರೆ, ಕಲ್ಯಾಣ ಪರ್ವದ ಮುಖ್ಯ ವಿಧಿಯಾಗಿ ಸಮುದಾಯ ಪ್ರಾರ್ಥನೆ ಮತ್ತು ಶರಣ ವಂಧನೆ ಇಡಲಾಗಿದೆ. ಎಷ್ಟು ಜನ ಶರಣರ ಹೆಸರು ಸದ್ಯ ಲಭ್ಯವಿವೆಯೋ ಅವರೆಲ್ಲರನ್ನು ಸ್ಮರಿಸಿಕೊಂಡು ಅವರಿಗೆ ಶರಣು ಶರಣಾರ್ಥಿ ಎಂದು ವಂದಿಸಲಾಗುವುದು. ಶರಣ ವಂದನೆಯನ್ನು ಬಸವ ಧರ್ಮ ಪೀಠದ 6 ಜನ ಜಂಗಮ ಮೂರ್ತಿಗಳು ಮಾಡಿಸುವರು.

ಬಸವಣ್ಣನವರ ಜೀವಿತದ ಕಾಲ ನಿರ್ಣಯ ಪುಸ್ತಕದ ಎರಡನೆಯ ಆವೃತ್ತಿಯನ್ನು ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು ಬಿಡುಗಡೆ ಮಾಡಿ ಒಂದು ಸ್ವಾರಸ್ಯಕರವಾದ ಕಥೆಯನ್ನು ಹೇಳಿ ಎಲ್ಲರನ್ನು ಸಂತೋಷಗೊಳಿಸಿದರು, ಒಮ್ಮೆ ಒಬ್ಬ ವ್ಯಕ್ತಿ ಬಂದು ಮನೆಯ ಬಾಗಿಲು ತಟ್ಟಿದನಂತೆ. ಮನೆಯ ಗೃಹಿಣೀ ಬಾಗಿಲು ತೆಗೆದಳಂತೆ ನೀವು ಯಾರು? ಎಂದು ಆಕೆ ಕೇಳಿದಾಗ ಮಾಮ ಎಂದನಂತೆ. ಆಗ ಆಕೆ ಬಹುಶಃ ಗಂಡನ ಕಡೆಯ ಹತ್ತಿರದ ಬಂಧುವಾಗಿರಬಹುದು ಎಂದು ಉಪಚರಿಸಿದಳು ಮನೆಯ ಯಜಮಾನ ಸಂಜೆ ಬಂದು ನೀವು ಯಾರು ಎಂದಾಗ ಆತ 'ಮಾಮ' ಎಂದನಂತೆ. ಬಹುಶಃ ಈತ ಹೆಂಡತಿಯ ಕಡೆಯ ಬಂಧು ಇರಬೇಕು ಎಂದುಕೊಂಡನಂತೆ. ಒಂದು ವಾರವಾಯಿತು. ಆತ ಸುಗ್ರಾಸ ಭೋಜನ ಉಣ್ಣುತ್ತ ಕಾಲ ಕಳೆದನಂತೆ. ಒಂದು ದಿನ ಪತಿ-ಪತ್ನಿಯರು ಪರಸ್ಪರ ಕೇಳಿಕೊಂಡು. "ಈತ ನಿಮಗೆ ಹೇಗೆ ಮಾಮ?" ಎಂದಳು ಆಕೆ. "ನನಗೆ ಯಾವ ಸಂಬಂಧವಿಲ್ಲ, ನಿಮಗೆ" ಎಂದ ಗಂಡ.

ಇಬ್ಬರೂ ಆಶ್ಚರ್ಯ ಚಕಿತರಾಗಿ, 'ನಮಗೆ ನೀನು ಯಾವುದೇ ರೀತಿ ಸಂಬಂಧವಿಲ್ಲ. ನೀನು ನಮಗೆ ಹೇಗೆ ಮಾಮ ?' ಎಂದು ಕೇಳಿಬಿಟ್ಟರು. ಆಗ ಅವನು ಹೇಳಿದ, "ನನ್ನ ಹೆಸರೇ ಮಾಮ। ನೀವೇ ನನಗೆ ಈವರೆಗೆ ಉಪಚರಿಸಿದ್ದೀರಿ. ನಾನೇಕೆ ಬೇಡವೆನ್ನಲಿ ಎಂದು ಸ್ವೀಕರಿಸಿದೆ." ಎಂದಾಗ ದಂಪತಿಗಳು ಬೆಸ್ತುಬಿದ್ದರು. ಆತ ಜಾಗ ಖಾಲಿ ಮಾಡಿದ.

ಹಾಗೆ ಪಂಚಪೀಠಗಳ ಪರಿಸ್ಥಿತಿ ಅವರ ಗುರು ಎಂದು ಇವರು, (ಪಂಚಮಸಾಲಿಯವರ ಗುರುಗಳೆಂದು ಇನ್ನಿತರರು) ನಮ್ಮ ಗುರುಗಳು ಎಂದು ಇವರು ಭಾವಿಸಿಕೊಂಡು ಅಡ್ಡಪಲ್ಲಕ್ಕಿ ಹೊತ್ತಿದ್ದೂ ಹೊತ್ತಿದ್ದೆ! ಜಾತಿ ಜಂಗಮರನು; ಪರಿಶಿಷ್ಟ ವರ್ಗಕ್ಕೆ ಸೇರಿಸಿ ಸೌಲಭ್ಯ ಕೊಡಲು ಪ್ರಧಾನಿಗೆ ಪಂಚ ಪೀಠಾಧೀಶರು ಮನವಿ ಅರ್ಪಿಸಿದಾಗ ಇವರು ಲಿಂಗಾಯತ ಸಮಾಜದ "ಮಾಮ" ಅಲ್ಲ ಎಂಬ ತಿಳುವಳಿಕೆ ಮೂಡಿತು. ಎಂದು ಕಥೆ ಹೇಳಿದಾಗ ಶ್ರೋತೃಗಳು ಅದರೊಳಗಣ ಸತ್ಯವನ್ನು ಅರಿತು ಹರ್ಷಿಸಿದರು. "ವೀರಶೈವ ನಮಗೆ ಸಂಬಂಧಿಸಿರಬಹುದು ಎಂದು ಯಾರೊಬ್ಬರೂ ಅಧ್ಯಯನ ಮಾಡದೆ ಲಿಂಗಾಯತದೊಡನೆ ಸಮೀಕರಿಸುತ್ತ ಬಂದರು. ಪೂಜ್ಯ ಮಾತಾಜಿ ಸವಿವರವಾಗಿ ಇವೆಲ್ಲ ವಿಶ್ಲೇಷಿಸಿದ್ದಾರೆ. ಈಗ ವೀರಶೈವವು ಜಾಗ ಖಾಲಿ ಮಾಡುವ ಸಂದರ್ಭ ಒದಗಿದೆ." ಎಂದು ಪೂಜ್ಯ ಬಸವ ಕುಮಾರ ಸ್ವಾಮಿಗಳು ತಿಳಿಸಿದರು.

ಹೀಗೆ ದೇವ(ಭಾನು)ವಾರ, ದಿ.7-5-2006ರಂದು ಸಮುದಾಯ ಪ್ರಾರ್ಥನೆ ಮತ್ತು ಶರಣ ವಂದನೆ ನೆರವೇರಿತು. ಶರಣೆ.ಯೋಗೀಶ್ವರಿಯವರು ಬಸವ ಧ್ವಜಾರೋಹಣ ಮಾಡಿದರು. ಮೊದಲನೆಯ ಕಲ್ಯಾಣ ಪರ್ವದ ಸಮಯದಲ್ಲಿ ಷಡುಗಣಾಧೀಶರ ಸ್ಥಳಗಳಾದ ಕೂಡಲ ಸಂಗಮ, ಉಳವಿ, ಬಳ್ಳಿಗಾವಿ, ಉಡುತಡಿ, ಸೊಲ್ಲಾಪುರ, ದೇವರ ಹಿಪ್ಪರಗಿಯಿಂದ ತಂದ ಜ್ಯೋತಿಗಳಿಂದ ಹಚ್ಚಿದ ನಂದಾದೀಪದ ಜ್ಯೋತಿಯ ನೆರವಿನಿಂದ ಶರಣ ವಂದನಾ ಕಾರ್ಯಕ್ರಮದ ಜ್ಯೋತಿಯನ್ನು ಹೊತ್ತಿಸಲಾಯಿತು.

ಸಂಜೆ 6-00 ಗಂಟೆಗೆ ಧರ್ಮಚಿಂತನಗೋಷ್ಠಿಯನ್ನು ದಲಿತ ನಾಯಕರು, ರೇಣುಕಾ ವಿದ್ಯಾಸಂಸ್ಥೆಯ ಅಧ್ಯಕ್ಷರು ಆದ ಶರಣ ಪಾಂಡುರಂಗ ಸೂರ್ಯವಂಶಿ ಉದ್ಘಾಟಿಸಿದರು. ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆದ ಮಡಿವಾಳ ಮಾಚಿದೇವ ಜಯಂತಿ ಉತ್ಸವದಲ್ಲಿ ಜಾತ್ಯತೀತ ಜನತಾ ದಳ ಧುರೀಣರಾದ ಶರಣ.ಪರಮೇಶ್ವರ ರಾಮಚಂದ್ರ ಆರ್ಯ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಗುಲಬರ್ಗಾ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶಂಕರಪ್ಪ ಮಹಾಂತಗೋಳ್ ಅವರು ಧ್ವಜಾರೋಹಣ ಮಾಡಿದರು. ಬೆಳಗಾಂ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ.ಕೆ.ಬಸವರಾಜ್ ಸ್ವಾಗತಿಸಿದರು. ಬೀದರ್ ರಾಷ್ಟ್ರೀಯ ಬಸವ ದಳದ ಶರಣ.ನಾಗಶೆಟ್ಟಿ ಶೆಟಕಾರ್ ಶರಣು ಸಮರ್ಪಣೆ ಮಾಡಿದರು. ಬಳ್ಳಾರಿ ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿ ಕೆ.ವಿ.ರವಿಶಂಕರ್ ಸಭಾ ನಿರ್ವಹಣೆ ಮಾಡಿದರು.

ವಿಶೇಷ ರೂಪಕಗಳು

ಬಸವ ಧರ್ಮ ಪೀಠದ ಸಾಧಕರಾದ ಶರಣ.ಚನ್ನಬಸವಣ್ಣ ಮತ್ತು ಶರಣೆ.ಸುಜಾತಾ ಪ್ರದರ್ಶಿಸಿದ ಅಲ್ಲಮಪ್ರಭು-ಅಕ್ಕಮಹಾದೇವಿಯ ಅನುಭವ ಮಂಟಪದ ಸಂವಾದ ಶರಣ ಬಂಧುಗಳಿಗೆ ಅಪೂರ್ವ ಆನಂದವನ್ನು ಉಂಟು ಮಾಡಿತು. ಬೀದರ ರಾಷ್ಟ್ರೀಯ ಬಸವ ದಳದವರ ಕೋಲಾಟ, ಬಸವ ವಾಣಿ ಎಂಬ ಪುಟ್ಟ ಮಗುವಿನ ವಚನಾಭಿನಯ ನೃತ್ಯ ಮನಸೂರೆಗೊಂಡವು. ಧಾರವಾಡದ ಕುಮಾರಿ ಪ್ರತಿಭಾ ಗರಗದ ಮತ್ತು ಕುಮಾರಿ ಪ್ರಮೀಳಾ ಹಾಗೂ ಸಂಗಡಿಗರು ಪ್ರದರ್ಶಿಸಿದ ಕಲ್ಯಾಣ ಕ್ರಾಂತಿಯ ನೃತ್ಯ ರೂಪಕ "ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ." ರಾತ್ರಿ ಹನ್ನೆರಡೂವರೆಯಾದರೂ ಜನರು ಅಲುಗಾಡದಂತೆ ತಡೆದಿಟ್ಟಿತು.

ಮೆರವಣಿಗೆ ಮತ್ತು ಪೀಠಾರೋಹಣ

ಶಿವ(ಸೋಮ)ವಾರ ಬೆಳಗ್ಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಪೂರೈಸಿ ಉಪಹಾರ ಸ್ವೀಕರಿಸಿ, ಶರಣ ಬಂಧುಗಳು ಐತಿಹಾಸಿಕ ಕೋಟೆಯ ಬಳಿಗೆ ಹೋದರು. ಪರುಷ ಕಟ್ಟೆಯ ಬಳಿ ಗುರು ಬಸವಣ್ಣನವರಿಗೆ ಪೂಜೆ ಸಲ್ಲಿಸಿ ಜ್ಯೋತಿಯನ್ನು ಹಚ್ಚಿಕೊಂಡು ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಬಂದು ಮೆರವಣಿಗೆಗೆ ಚಾಲನೆ ನೀಡಿ, ತಾವೂ ಪಾದಯಾತ್ರೆಯಲ್ಲಿ ಸಾಗಿದರು. ನಂತರ ಜಗದ್ಗುರು ಅಲ್ಲಮ ಪ್ರಭು ಶೂನ್ಯ ಪೀಠದ ಆರೋಹಣ ಕಾರ್ಯಕ್ರಮವು ಸಾಂಗವಾಗಿ ನೆರವೇರಿತು. ಪೀಠಾರೋಹಣ ಮಾಡಿದ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳಿಗೆ ಪೂಜ್ಯ ಮಾತಾಜಿ ರುದ್ರಾಕ್ಷಿ ಮುಕುಟವನ್ನಿಟ್ಟರು. ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳೆಲ್ಲರು ಪೂಜ್ಯ ಸ್ವಾಮಿಗಳಿಗೆ ಪುಷ್ಪವೃಷ್ಟಿ ಮಾಡಿದರು. ಪೂಜ್ಯರು ಪೀಠಾರೋಹಣ ಸಂದೇಶ ನೀಡಿದರು. ಸದ್ಭಕ್ತರು ಪೂಜ್ಯರಿಗೆ ಮಾಲಾರ್ಪಣೆ ಮಡಿ ಗುರು ಕಾಣಿಕೆ ನೀಡಿದರು.


ಹೀಗೆ ಐದನೆಯ ಕಲ್ಯಾಣ ಪರ್ವವು ಅತ್ಯಂತ ಯಶಸ್ವಿಯಾಗಿ ನಡೆಯಿತು. ಮೆವಣಿಗೆ ಮತ್ತು ಪಥ ಸಂಚಲನದ ಅಪೇಕ್ಷೆ ಪೂರೈಸಿದ ಸಂಭ್ರಮದಲ್ಲಿ ಶರಣ ಬಂಧುಗಳು ತಮ್ಮ ತಮ್ಮ ಊರುಗಳಿಗೆ ತೆರಳಿದರು.

ಸದ್ಗುರು ಲಿಂಗಾನಂದರ ಉಪಕಾರ

(1995ರ ಜೂನ್ 30ರಂದು ಲಿಂಗೈಕ್ಯರಾದ ಗುರುಗಳ ಸಂಸ್ಮರಣೆಯ ನಿಮಿತ್ತ)

1. ಸದ್ಗುರು ಲಿಂಗಾನಂದರೆ ನಿಮ್ಮ ಉಪಕಾರವನು
   ಮರೆಯಲೆಂತು ನಾವು ?
   ಬದುಕು ಬರಡಾಗದಿರಲು
   ಬಸವ ಮಾರ್ಗವೆ ಭವ್ಯ ದಿವ್ಯವೆಂದ
2. ಬಸವನೆಂದರೆ ಎತ್ತು ಎಂಬ ಜನಕೆ,
   ಗುರು ಬಸವರ ವಿಶ್ವರೂಪ ದರ್ಶಿಸಿ
   ಲಿಂಗಾಯತ ಕರ್ತೃವೇ ವಿಶ್ವಗುರು ಬಸವರೆಂದ
3. ಲಿಂಗಾಯತವು ಜಾತಿ, ಮತ, ಪಂಥವಲ್ಲ
   ಎಲ್ಲರೂ ನಮ್ಮವರೆಂಬ
   ವಿಶ್ವ ಧರ್ಮವೆ ಅದು ಎಂದ;
4. ಧರ್ಮವೆಂದರೇನು ? ದೇವರೆಂದರಾರು ?
   ಮಾನವನ ಗೊತ್ತು ಗುರಿಗಳೇನು
   ಎಂದು ತಿಳಿಹೇಳಿದ
5. ದೇವರೆಂದರೆ - ಮನುಷ್ಯ, ಪ್ರಾಣಿ, ಪಕ್ಷಿಯಲ್ಲ
   ಜಗದಗಲವಾದ ವಿಶ್ವ ವ್ಯಾಪಿ ನಿತ್ಯ, ಸತ್ಯ
   ಪರಂಜ್ಯೋತಿ ಎಂಬ
   ಗುರು ಬಸವರ ತತ್ತ್ವವ ಸಾರಿದ
6. ನಿರಾಕಾರ ದೇವನಿಗೆ ಆಕಾರವೆ ಇಷ್ಟಲಿಂಗ ಎಂಬ
   ಗುರು ಬಸವ ಸಂಶೋಧನೆಯ ಸಾರವೆ
   ಮರೆಯದೆ ಅದನು ಧರಿಸಿ, ನಿತ್ಯ ಪೂಜಿಸಿರೆಂದ
7. ಬಸವ ಧರ್ಮ ಸಂಹಿತೆ
   ತಾಯಿ ವಚನಾಂಬಿಕೆ
   ಎಂದು ನವನೀತ ಪರಿಚಯಿಸಿದ.
8. ಜಂಗಮವು ಜಾತಿಯಲ್ಲ ಎಂದು ಭವಿಯು -
   ಭಕ್ತ ಜಂಗಮ ನಾಗಬಲ್ಲ ಎಂದು ತೋರಿಸಿದ
9. ಧರ್ಮದ ಧ್ಯೆಯೋದ್ದೇಶಗಳು
   ಸಂಸ್ಕಾರ , ಸಂಘಟನೆ, ಸಮಾನತೆ, ಸಹೋದರತೆ
   ನವ ಕಲ್ಯಾಣ ರಾಜ್ಯ ನಿರ್ಮಾಣವೆಂದ.
10. ಬಸವನೆಂಬ ನಾಮವು
    ನಿತ್ಯ, ಸತ್ಯ ಮಾಡಿದ ಕೀರ್ತಿಗೆ
    ಭಾಜನವಾದ, ಬಸವ ಧರ್ಮ ಪುನರುತ್ಥಾನಗೈದ

-ಕೆ.ಬಸವರಾಜ, LIC ಬೆಳಗಾವಿ



ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ 36ನೆಯ ಸಂಸ್ಮರಣಾ ಸಮಾರಂಭ.
ದಿ.13-4-2006 ಅಕ್ಕಮಹಾದೇವಿ ಜಯಂತಿಯಂದು ಪೀಠಾರೋಹಣ ಮಾಡಿದ ಪೂಜ್ಯ ಮಾತಾಜಿ 36ನೆಯ ವಾರ್ಷಿಕೋತ್ಸವದ ನನೆಪಿಗಾಗಿ ಧಾರವಾಡದ ಶರಣೆಯರ ಅಪೇಕ್ಷೆ ಮೇರೆಗೆ ನಂದಾದೀಪವನ್ನು ಹಚ್ಚುತ್ತಿರುವುದು.



ಅಕ್ಕಮಹಾದೇವಿ ಆಶ್ರಮದ ಜಂಗಮ ಮೂರ್ತಿ ಪೂಜ್ಯ ಮಾತೆ ಸತ್ಯಾದೇವಿಯವರ ಜಂಗಮ ದೀಕ್ಷೆಯ ವಾರ್ಷಿಕೋತ್ಸವ. ಶರಣೆಯರಿಂದ ಪುಷ್ಪವೃಷ್ಟಿ.

CPMG/KA/BGW-50/WPP-17/2006-2008 Regd No.19980/70



ಶರಣ ಭೂಮಿ ಬಸವ ಕಲ್ಯಾಣದಲ್ಲಿ ಶರಣ ಶೈಲದ ಮೇಲೆ ನಿರ್ಮಾಣವಾಗುತ್ತಿರುವ 108 ಅಡಿ

ಬಸವ ಪುತ್ಥಳಿಯ ಚಿತ್ರ